## ಗುರುವಾರ, ೨೧ನೇ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು, ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ, ಬೆಳಗ್ಗೆ ೧೦ ಗಂಟೆಗೆ, ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪರಿಚಯಪತ್ರಗಳನ್ನು ಸಲ್ಲಿಸುವುದು ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

ಈ ಮುಂದಿನ ಸದಸ್ಯರು ತಮ್ಮ ಪರಿಚಯಪತ್ರ ಸಲ್ಲಿಸಿ, ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು:

ಎಚ್.ಎಚ್. ರಾಜಾ ಆನಂದ್ ಚಾಂದ್ (ಬಿಲಾಸ್‌ಪುರ್) (ಪಂಜಾಬ್ ರಾಜ್ಯಗಳು)

ಈ ಮುಂದಿನ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿದರು.

(೧) ಎಚ್.ಎಚ್. ರಾಜಾ ಆನಂದ್ ಚಾಂದ್ (ಬಿಲಾಸ್‌ಪುರ್)

(೨) ಸುರೇಂದ್ರ ಮೋಹನ್ ಘೋಷ್ (ಪಶ್ಚಿಮ ಬಂಗಾಳ : ಸಾಮಾನ್ಯ)

### ಕೇಂದ್ರ ಅಧಿಕಾರಗಳ ಸಮಿತಿಯ ವರದಿ (ಮುಂದುವರಿದುದು)

**ಮಾನ್ಯ ಸಭಾಧ್ಯಕ್ಷರು** : ನಿನ್ನೆ ಚರ್ಚೆಯಾಗುತ್ತಿದ್ದ ನಿರ್ಣಯದ ವಿಷಯವನ್ನು ಮುಂದುವರಿಸೋಣ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ದೈನಂದಿನ ವಿಷಯದತ್ತ ನಿಮ್ಮ ಗಮನ ಸೆಳೆಯಲು ಅನುಮತಿ ನೀಡಿ. ಆಧಿಪತ್ಯದ ವಿಧಾನಮಂಡಲದ ಸದಸ್ಯರಾದ ನಮಗೆ, ಹಿಂದಿನ ಕೇಂದ್ರ ಶಾಸನಸಭೆಯ ಸದಸ್ಯರಂತೆ ಭಾರತದ ರಾಜ್ಯಪತ್ರ ಹಾಗೂ ಸರ್ಕಾರದ ಇತರ ಅಧಿಕೃತ ಪ್ರಕಟಣೆಗಳನ್ನು ಪಡೆಯುವ ಹಕ್ಕಿಲ್ಲವೆ?

**ಮಾನ್ಯ ಸಭಾಧ್ಯಕ್ಷರು** : ಆ ಬಗ್ಗೆ ನಾನು ವಿಚಾರಿಸುತ್ತೇನೆ.

**ಶ್ರೀ ಮಹಮ್ಮದ್ ಷರೀಫ್** (ಮೈಸೂರು) : ಮಾನ್ಯ ಸಭಾಧ್ಯಕ್ಷರೆ, ಇಂದು ಚರ್ಚೆಯ ವಿಷಯವಾಗಿರುವ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯು ಅತ್ಯಂತ ಮಹತ್ತ್ವದ ದಾಖಲೆಯಾಗಿದ್ದು ರಾಜ್ಯಗಳ ಹಾಗೂ ಪ್ರಾಂತ್ಯಗಳ ಜನತೆಯ ಹಕ್ಕು ಹಾಗೂ ಸವಲತ್ತುಗಳ ಮೇಲೆ ಪರಿಣಾಮ ಬೀರುತ್ತದೆ. ದೇಶದ ಭವಿಷ್ಯದ ಉತ್ತಮ ಸರ್ಕಾರವು, ಕೇಂದ್ರ, ಪ್ರಾಂತ್ಯಗಳು ಹಾಗೂ ರಾಜ್ಯಗಳ ನಡುವೆ ಅಧಿಕಾರ ಸೂಕ್ತವಾಗಿ ಹಂಚಿಕೆಯಾಗುವುದನ್ನು ಅವಲಂಬಿಸಿರುತ್ತದೆ ಎಂದು ನನ್ನ ಅಭಿಪ್ರಾಯ. ಕೇಂದ್ರದಲ್ಲಿ ಪರಿಣಾಮಕಾರಿ ನಿಯಂತ್ರಣವನ್ನುಳಿಸಿಕೊಂಡು, ರಾಜ್ಯಗಳಲ್ಲಿ ಹಾಗೂ ಪ್ರಾಂತ್ಯಗಳಲ್ಲಿರುವವರ ಅಧಿಕಾರಗಳನ್ನು ಕಿತ್ತುಕೊಳ್ಳದಂತೆ ಅಧಿಕಾರಗಳನ್ನು ಹಂಚಿಕೆ ಮಾಡುವುದು ಅಗತ್ಯವಾಗುತ್ತದೆ. ಒಕ್ಕೂಟದ ಸರ್ಕಾರದಲ್ಲಿ ನಿಷ್ಠೆ ಹಾಗೂ ಆಸಕ್ತಿ ವಿಭಜನೆಗೊಳ್ಳುವುದರಿಂದ ಅವುಗಳನ್ನು ಸರಿಯಾಗಿ ಸಮನ್ವಯಗೊಳಿಸಲು ಕೇಂದ್ರ ಬಲವಾಗಿರಬೇಕಾದುದು ಅಗತ್ಯ. ಆದರೆ ಅದರ ದಮನಕಾರಿ ಪ್ರವೃತ್ತಿ ಹೆಚ್ಚಿ, ಘಟಕಗಳ ಜನತೆಯ ಸ್ವಾತಂತ್ರ್ಯ ಸವಲತ್ತುಗಳನ್ನು ತುಳಿಯುವ ಮನೋಭಾವ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ನಾವು ಅಧಿಕಾರ ವಿತರಣೆಯಲ್ಲಿ ಬಹಳ ಎಚ್ಚರಿಕೆ ವಹಿಸಿಬೇಕು. ಅಧಿಕಾರ ವಿತರಣೆಯಲ್ಲಿ ಬಲ ಹಾಗೂ ರಾಜ್ಯಗಳು ಮತ್ತು ಪ್ರಾಂತ್ಯಗಳಲ್ಲಿರುವ ಜನತೆಯ

ಹಕ್ಕು ಹಾಗೂ ಸವಲತ್ತುಗಳ ಪರಿಗಣನೆ ಇವೆರಡರ ನಡುವೆ ಉತ್ತಮ ಹೊಂದಾಣಿಕೆ ಇರುವಂತೆ ಎಚ್ಚರ ವಹಿಸಬೇಕು. ನಾನು ಈ ವರದಿ ಜೊತೆಗಿರುವ ಪಟ್ಟಿಗಳನ್ನು ಗಮನಕೊಟ್ಟು ಓದಿದ್ದೇನೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ಭಾಷಣವನ್ನು ಕೇಳಿದ್ದೇನೆ. ಸಮಸ್ಯೆಯ ವಿವಿಧ ಅಂಶಗಳನ್ನು ಅವರು ಆಮೂಲಾಗ್ರವಾಗಿ ಚರ್ಚಿಸಿದ್ದಾರೆ. ಈ ಸಮಸ್ಯೆಯ ಎಲ್ಲ ಅಂಶಗಳನ್ನು ವಿಷಯದ ಸಾಧಕ ಬಾಧಕಗಳನ್ನು ನಮ್ಮ ಮುಂದಿರಿಸಿದ್ದಾರೆ. ಅವರು ಹೇಳಿರುವಂತೆ "ಈಗ ವಿಭಜನೆ ನಿರ್ಧಾರಿತ ವಿಷಯವಾಗಿರುವುದರಿಂದ, ಶಾಂತಿಯನ್ನು ನೆಲೆಗೊಳಿಸಲು ಎಲ್ಲರಿಗೂ ಸಂಬಂಧಿಸಿದ ಮಹತ್ತ್ವದ ವಿಷಯಗಳನ್ನು ಸಮನ್ವಯಗೊಳಿಸಲು, ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಡೀ ದೇಶದ ಬಗ್ಗೆ ಮಾತನಾಡಲು ಅಸಮರ್ಥವಾದ ದುರ್ಬಲ ಕೇಂದ್ರ ಸರ್ಕಾರವನ್ನು ಹೊಂದುವುದು ದೇಶದ ಹಿತದ ದೃಷ್ಟಿಯಿಂದ ಅಪಾಯಕಾರಿ ಎಂಬುದು ನಮ್ಮೆಲ್ಲರ ಒಮ್ಮತದ ಅಭಿಪ್ರಾಯ. ಅಲ್ಲದೆ ಸರ್ಕಾರವು ಹಲವು ವಿಷಯಗಳಲ್ಲಿ ಘಟಕಗಳೊಡನೆ ಸೇರಿ ಸಾಗಬೇಕಾಗಿದ್ದು, ಏಕಾತ್ಮಕ ಸರ್ಕಾರದ ತಳಹದಿಯ ಮೇಲೆ ಸಂವಿಧಾನವನ್ನು ರಚಿಸುವುದು ರಾಜಕೀಯವಾಗಿಯೂ ಆಡಳಿತಾತ್ಮಕವಾಗಿಯೂ ಹಿನ್ನಡೆಯ ಕ್ರಮವಾಗಿರುತ್ತದೆ ಎಂಬುದು ನಮಗೆಲ್ಲ ಸ್ಪಷ್ಟವಾಗಿ ತಿಳಿದಿದೆ; ನಮ್ಮ ದೇಶಕ್ಕೆ ತಕ್ಕುದಾದ ಸಂವಿಧಾನ ಎಂದರೆ ಕೇಂದ್ರ ಸರ್ಕಾರವು ಬಲಿಷ್ಠವಾಗಿರುವಂಥ ಒಕ್ಕೂಟ ವ್ಯವಸ್ಥೆ ಎಂಬ ನಿರ್ಧಾರಕ್ಕೆ ಬಂದಿದ್ದೇವೆ." ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರಿಗೆ ಸೂಕ್ತ ಗೌರವ ನೀಡುವುದರೊಂದಿಗೆ ನಾನು ಹೇಳುವುದೇನೆಂದರೆ ಪ್ರಾಂತ್ಯಗಳು ಹಾಗೂ ರಾಜ್ಯಗಳಿಗೆ ಅಪ್ರಧಾನ ಗೌಣಸ್ಥಾನ ತೋರಿಸಿರುವುದರಿಂದ ಈ ವರದಿ ಅಷ್ಟೊಂದು ತೃಪ್ತಿಕರವೆನಿಸುವುದಿಲ್ಲ. ಈ ಮುಂಚೆ ಪಂಡಿತ್ ಜವಾಹರಲಾಲ್ ನೆಹರು ಹೇಳಿದಂತೆ ಭಾರತೀಯರು ಅನುಭವಿಸಿದ ೧೫೦ ವರ್ಷಗಳ ಹೋರಾಟ ತ್ಯಾಗದ ಫಲವಾಗಿ ನಾವು ಬ್ರಿಟಿಷರ ಸಾಮ್ರಾಜ್ಯಶಾಹಿಯನ್ನು ಕಿತ್ತೊಗೆದಿದ್ದೇವೆ. ಅದೇ ಸಾಮ್ರಾಜ್ಯಶಾಹಿ ಇನ್ನೊಂದು ರೂಪದಲ್ಲಿ ಬೇರೂರುವುದು ಬೇಡ. ಕೇಂದ್ರವು ತನ್ನದೇ ಘಟಕಗಳ ಬಗ್ಗೆ ಏಕೆ ಮತ್ಸರಪಡಬೇಕು? ಪ್ರಾಂತ್ಯಗಳು, ರಾಜ್ಯಗಳಲ್ಲಿ ಇರುವ ಜನ ಈ ದೇಶಕ್ಕೆ ಸೇರಿದವರೇ. ಅವರ ಚಟುವಟಿಕೆಗಳು ಕೇಂದ್ರದ ಚಟುವಟಿಕೆಗಳ ಮತ್ತೊಂದು ಭಾಗವೇ ಆಗಿರುವಾಗ ಈ ರೀತಿಯ ಸಂದೇಹ ಬೇಡ. ಆದ್ದರಿಂದ ನನ್ನ ಮನವಿ ಏನೆಂದರೆ ಎಲ್ಲ ಅಧಿಕಾರಗಳನ್ನು ಕೇಂದ್ರವು ತಾನೇ ಆಕ್ರಮಿಸಿಕೊಳ್ಳಬಾರದು, ಮೈಸೂರಿನವ ನಾನು, ಈ ವರದಿ ತುಂಬ ಅತೃಪ್ತಿಕರವಾಗಿದೆ ಎಂದು ಭಾವಿಸುತ್ತೇನೆ. ನಾವು ವಿದೇಶವ್ಯವಹಾರ, ಸಂಪರ್ಕ, ರಕ್ಷಣೆ ಈ ಮೂರು ವಿಷಯಗಳ ಬಗ್ಗೆ ಭಾರತ ಆಧಿಪತ್ಯದೊಡನೆ ಸಮ್ಮತಿಸಿದ್ದೇವೆ. ಈ ಬಗ್ಗೆ ಒಡಂಬಡಿಕೆ ಮಾಡಿಕೊಂಡು ಆಧಿಪತ್ಯಕ್ಕೆ ಸಮ್ಮತಿಸಿದ್ದೇವೆ ಒಕ್ಕೂಟ ಸಂಯುಕ್ತ ಶಾಸನ ಪಟ್ಟಿಗೆ ಸಂಬಂಧಿಸಿದಂತೆ ಹೇಳುವುದಾದರೆ ನೀವು ನಮ್ಮಿಂದ ಅಧಿಕಾರಗಳನ್ನು ಕಸಿದುಕೊಳ್ಳಲು ಪ್ರಯತ್ನಿಸಿದ್ದೀರಿ. ಉದಾಹರಣೆಗೆ: ನೀವು ನಮ್ಮ ವ್ಯಾಪಾರದಲ್ಲಿ ಹಸ್ತಕ್ಷೇಪಮಾಡಲು ಬಯಸುತ್ತೀರಿ. ವಿದೇಶಗಳೊಂದಿಗಿನ ವ್ಯಾಪಾರ, ವಾಣಿಜ್ಯವನ್ನು ನೀವು ಉಳಿಸಿಕೊಳ್ಳಲು ಬಯಸುತ್ತೀರಿ, ರಕ್ಷಣಾ ಉದ್ದೇಶಗಳಿಗೆ ಭೂಮಿಯನ್ನು ಬಳಸಿಕೊಳ್ಳುವ ಅಧಿಕಾರವನ್ನು ಬಯಸುತ್ತೀರಿ. ಇದು ಬಲಪ್ರಯೋಗದಂತೆ ತೋರುತ್ತದೆ. ಈ ವರದಿಗೆ ಸಂಬಂಧಿಸಿದರೆ ನೀವು ನಿನ್ನೆ ಕೇವಲ ಅದರ ಪ್ರಮುಖ ಲಕ್ಷಣಗಳ ಬಗ್ಗೆ ಗಮನಿಸಬೇಕು ಎಂದು ಹೇಳಿದಿರಿ.

**ಒಬ್ಬ ಗೌರವಾನ್ವಿತ ಸದಸ್ಯರು** : ಇದರ ಸಂಬಂಧವಾಗಿ ಅಲ್ಲ.

**ಶ್ರೀ ಮಹಮ್ಮದ್ ಷರೀಫ್** : ಯಾವುದೇ ಸಂದರ್ಭದಲ್ಲೂ ಕೇಂದ್ರವು ಎಲ್ಲ ಅಧಿಕಾರಗಳನ್ನು ತಾನೇ ಆಕ್ರಮಿಸದೆ, ಅಧಿಕಾರಗಳು ಕೇಂದ್ರ ಹಾಗೂ ಘಟಕಗಳ ನಡುವೆ ನ್ಯಾಯಸಮ್ಮತವಾಗಿ ಸೌಹಾರ್ದಯುತವಾಗಿ ವಿತರಣೆಯಾಗುವಂತೆ ಸದನವು ನೋಡಿಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಇಡೀ ವರದಿಯನ್ನು ನಿರೂಪಿಸಿದ ತರುವಾಯ ಈಗ ಸದನದ ಮುಂದಿರುವ

ಭಾಗ–೩ರ ಪ್ರಸ್ತಾವ ಎಂದರೆ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯ ಪರಿಶೀಲನೆಯ ಚರ್ಚೆಯಲ್ಲಿ ಭಾಗವಹಿಸುವ ಇಚ್ಛೆ ನನಗಿರಲಿಲ್ಲ. ಆದರೆ ಸಮಿತಿಯು ತನ್ನ ಕಲಾಪವನ್ನು ಗಂಭಿರವಾಗಿ ಪರಿಗಣಿಸಿಲ್ಲವೆಂದು ಸೂಚಿಸಿದ ನನ್ನ ಗೌರವಾನ್ವಿತ ಮಿತ್ರ ಶ್ರೀ ಸಂತಾನಮ್ ಅವರ (ಅವರ ಅಭಿಪ್ರಾಯಗಳ ಬಗ್ಗೆ ನನಗೆ ಬಹಳ ಗೌರವವಿದೆ) ಅಭಿಪ್ರಾಯಗಳನ್ನು ಕೇಳಿದ ಮೇಲೆ ನಾನು ಭಾಗವಹಿಸದೆ ಇರಲು ಆಗಲಿಲ್ಲ. ನನ್ನ ಸ್ನೇಹಿತರ ಅಭಿಪ್ರಾಯಗಳನ್ನು ಎರಡು ಶೀರ್ಷಿಕೆಗಳಡಿ ನೋಡಬೇಕಾಗುತ್ತದೆ. (೧)ಒಕ್ಕೂಟ ಸರ್ಕಾರದ ಹಣಕಾಸಿನ ಮೇಲಾಗುವ ಪರಿಣಾಮ ಮತ್ತು ಒಕ್ಕೂಟ ಹಾಗೂ ಘಟಕಗಳ ನಡುವೆ ತೆರಿಗೆ ಅಧಿಕಾರದ ವಿತರಣೆ, (೨) ಒಕ್ಕೂಟ ಪಟ್ಟಿ ಅಥವಾ ಸಮವರ್ತಿ ಪಟ್ಟಿಗೆ ಕೆಲವು ವಿಷಯಗಳನ್ನು ಸೇರಿಸುವ ಮೂಲಕ ಪ್ರಾಂತೀಯ ಶಾಸನ ಅಧಿಕಾರದ ಮೇಲೆ ಅತಿಕ್ರಮಣ. ನಾನು ಒಂದಾದ ಮೇಲೊಂದರಂತೆ ಎರಡೂ ಅಂಶಗಳನ್ನು ಕುರಿತು ಮಾತನಾಡುತ್ತೇನೆ.

ಒಕ್ಕೂಟವು ಹಣಕಾಸು ವ್ಯವಸ್ಥೆ ಹಾಗೂ ತೆರಿಗೆ ಅಧಿಕಾರದ ವಿತರಣೆಯ ವಿಷಯ. ಯಾವುದೇ ಒಕ್ಕೂಟ ವ್ಯವಸ್ಥೆಯ ಸರ್ಕಾರದಲ್ಲಿ ಅತ್ಯಂತ ಸಂಕೀರ್ಣ ಸಮಸ್ಯೆ ಹಾಗೂ ಆ ಬಗ್ಗೆ ಬಹಳ ಎಚ್ಚರಿಕೆ ವಹಿಸಿ ಆಲೋಚನೆ ಮಾಡಿ ವ್ಯವಹರಿಸಬೇಕು. ತೆರಿಗೆಗೆ ಒಳಪಡುವವರು ವ್ಯಕ್ತಿಗಳು ಅಥವಾ ಯಾವುದೇ ನಿಗಮದ್ದು. ಎರಡು ಸಂಸ್ಥೆಗಳು ತೆರಿಗೆ ವಿಧಿಸುತ್ತವೆ. ಮತ್ತು ಅವುಗಳಿಗಿರುವ ತೆರಿಗೆ ವಿಧಿಸುವ ವ್ಯಾಪ್ತಿ ವಿಸ್ತೃತ ಎಂಬ ಮಾತನ್ನು ಯಾರೂ ಅಲ್ಲಗಳೆದಿಲ್ಲ. ಎರಡನೆಯದಾಗಿ ಒಂದು ದೇಶದ ಔದ್ಯಮಿಕ ವಾಣಿಜ್ಯ ಹಾಗೂ ಕೃಷಿಕ್ಷೇತ್ರಗಳ ಅರ್ಥವ್ಯವಸ್ಥೆ ಪರಸ್ಪರ ಎಷ್ಟು ನಿಕಟವಾಗಿವೆಯೆಂದರೆ, ಒಂದು ಕ್ಷೇತ್ರದ ಮೇಲಿನ ತೆರಿಗೆಯ ಪರಿಣಾಮ ಖಂಡಿತವಾಗಿಯೂ ಮತ್ತೊಂದು ಕ್ಷೇತ್ರದ ತೆರಿಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಾವು ಬೇರೆ ಒಕ್ಕೂಟಗಳ ತೆರಿಗೆ ವ್ಯವಸ್ಥೆಯನ್ನು ಪರಿಶೀಲಿಸಿ, ಭಾರತದಲ್ಲಿ ಅಳವಡಿಸಿಕೊಂಡಿರುವ ವ್ಯವಸ್ಥೆ ಬೇರೆ ದೇಶಗಳಲ್ಲಿರುವುದಕ್ಕಿಂತ ಸುಧಾರಿತ ಸ್ವರೂಪದ್ದೇ ಅಲ್ಲವೇ ಎಂಬುದನ್ನು ನೋಡಬೇಕಾಗುತ್ತದೆ. ಏತನ್ಮಧ್ಯೆ ಭಾರತದಲ್ಲಿರುವ ಬಡತನ ಹಾಗೂ ಸಾಮಾನ್ಯ ನಾಗರಿಕನ ಸಾಮರ್ಥ್ಯವನ್ನೂ ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ ಆಸ್ಟ್ರೇಲಿಯಾದಲ್ಲಿ ದೇಶ ರಾಜ್ಯಗಳು ಹಾಗೂ ರಾಜ್ಯಭಾಗಗಳ ಮಧ್ಯೆ ತಾರತಮ್ಯವೆಣಿಸುವಂತಿಲ್ಲ ಎಂಬಂಶವನ್ನು ಕಾಯ್ದುಕೊಳ್ಳುವುದರ ಹೊರತಾಗಿ ಅಲ್ಲಿಯ ಕಾಮನ್‌ವೆಲ್ತ್‌ಗೆ ತೆರಿಗೆಯ ಸಂಪೂರ್ಣ ಅಧಿಕಾರವಿದೆ. ನಾನು ಆಸ್ಟ್ರೇಲಿಯಾವನ್ನೇ ಉದಾಹರಿಸಿರುವ ಕಾರಣವೇನೆಂದರೆ ಮಿಕ್ಕ ಅಧಿಕಾರಗಳು ಕೇಂದ್ರದಲ್ಲೇ ಇರುವಂಥ ಒಕ್ಕೂಟ ವ್ಯವಸ್ಥೆ ಅದು. ದೇಶ ರಾಜ್ಯಗಳಿಗೆ ಸಂಪೂರ್ಣ ಶಾಸನಾಧಿಕಾರವಿದ್ದು ಕೆಲವೇ ನಿರ್ದಿಷ್ಟ ವಿಷಯಗಳಲ್ಲಿ ಕೇಂದ್ರಕ್ಕೆ ಅಧಿಕಾರವಿರುತ್ತದೆ. ಆಧುನಿಕ ದೇಶದ ಬೆಳೆಯುತ್ತಿರುವ ಬೇಡಿಕೆಗಳಿಗನುಗುಣವಾಗಿ ಒಕ್ಕೂಟಕ್ಕೆ ತೆರಿಗೆಯ ಸಂಪೂರ್ಣ ಅಧಿಕಾರವಿರಬೇಕು ಎಂದು ಭಾವಿಸಲಾಯಿತು. ಎರಡು ರಾಜ್ಯಗಳ ಮಧ್ಯೆ ತಾರತಮ್ಯ ಮಾಡುವುದಿಲ್ಲವೆಂಬ ಅಂಶದ ಹೊರತಾಗಿ ಆಸ್ಟ್ರೇಲಿಯಾದಲ್ಲಿ ಕೇಂದ್ರದ ತೆರಿಗೆ ವಿಧಿಸುವ ಅಧಿಕಾರಕ್ಕೆ ಯಾವುದೇ ಮಿತಿ ಇಲ್ಲ. ಕಾಮನ್‌ವೆಲ್ತ್‌ನಲ್ಲಿ ಇತರ ತೆರಿಗೆಗಳ ವಿಷಯಗಳಲ್ಲಿ ರಾಜ್ಯಗಳೊಡನೆ ಸಮವರ್ತಿ ಹಾಗೂ ಸಮವ್ಯಾಪಕ ಅಧಿಕಾರಗಳಿವೆ. ಅಧಿಕಾರ ಹಾಗೂ ಸುಂಕದ ವಿಷಯದಲ್ಲಿ ಕೇಂದ್ರಕ್ಕೆ ಸಂಪೂರ್ಣ ಅಧಿಕಾರ ಇದೆ. ಕೆನಡಾ ಆಧಿಪತ್ಯದ ಸಂವಿಧಾನದಲ್ಲಿ ತೆರಿಗೆಗೆ ಸಂಬಂಧಿಸಿದಂತೆ ಪ್ರಾಂತ್ಯಗಳ ಅಧಿಕಾರ ನೇರ ತೆರಿಗೆಗೆ ಸೀಮಿತವಾಗಿದೆ. ಅಂಗಡಿ ಹಾಗೂ ಇತರ ಪರವಾನಗಿಗಳಿಂದ ಕಂದಾಯ ಪಡೆಯಲಾಗುತ್ತದೆ ಮತ್ತು ಪ್ರಾಂತ್ಯಗಳು ನೇರ ತೆರಿಗೆ ಅಧಿಕಾರವನ್ನು ಚಲಾಯಿಸಿ ನಿಗಮದ ತೆರಿಗೆ, ಆದಾಯ ತೆರಿಗೆ, ಹಾಗೂ ಸಕ್ಸೆಷನ್ ತೆರಿಗೆ ಪ್ರಾಂತ್ಯದ ಮಿತಿಯೊಳಗೆ ಜರುಗಿದ್ದರೆ ತತ್ಸಂಬಂಧದ ಶುಲ್ಕವನ್ನು ಸಂಗ್ರಹಿಸುತ್ತವೆ. ಆಧಿಪತ್ಯದ ಸಂಪೂರ್ಣ ಹಾಗೂ ಅನಿರ್ಬಂಧಿತ ಅಧಿಕಾರವಿದೆ. ಡೊಮಿನಿಯನ್ ಹಾಗೂ ಪ್ರಾಂತೀಯ ಸಂಬಂಧಗಳ ಬಗ್ಗೆ ತನಿಖೆ ನಡೆಸಲು ಇತ್ತೀಚೆಗೆ ನೇಮಕಗೊಂಡ ರಾಯಲ್ ಆಯೋಗ, ಲಾಭದಾಯಕ ಲೈಸೆನ್ಸ್ ತೆರಿಗೆ, ರಿಯಲ್ ಎಸ್ಟೇಟ್ ತೆರಿಗೆ

ಅಥವಾ ಎಲ್ಲ ನಿಗಮ ಹಾಗೂ ಗ್ರಾಹಕರಿಗೆ ಅನ್ವಯವಾಗುವ ಅನುಭೋಗ ತೆರಿಗೆಗಳನ್ನು ಹೊರತುಪಡಿಸಿ ಉಳಿದೆಲ್ಲ ಕಾರ್ಪೋರೇಷನ್ ತೆರಿಗೆಯನ್ನು ಪ್ರಾಂತ್ಯಗಳಿಂದ ಹಿಂಪಡೆಯುವದರ ಪರವಾಗಿತ್ತು. ಕೆನಡಾದ ಬೇರೆ ಬೇರೆ ಪ್ರಾಂತ್ಯಗಳು ಭಿನ್ನ ಭಿನ್ನ ರೀತಿಯಲ್ಲಿ ತೆರಿಗೆ ವಿಧಿಸಿದ ಪರಿಣಾಮವಾಗಿ ಉದ್ಯಮದಲ್ಲಿ ಕುಸಿತವಾಯಿತು. ಆಡಳಿತವ್ಯಾಪ್ತಿ ವಿಭಜಿತವಾಗಿ, ಏಕರೂಪತೆ ಹಾಗೂ ದಕ್ಷತೆಯಲ್ಲಿ ಹಿನ್ನಡೆಯಾಗಿ, ಎರಡುಪಟ್ಟು ಮೂರುಪಟ್ಟು ತೆರಿಗೆ ವಿಧಿಸಿದಂತಾಯಿತು. ಪ್ರಾಂತ್ಯಗಳು ವಿಧಿಸಿದ ಸಕ್ಸೆಷನ್‌ನ ಫಲವಾಗಿ ಅಧಿಕಾರವ್ಯಾಪ್ತಿಯ ವಿಷಯದಲ್ಲಿ ತಿಕ್ಕಾಟ ಆರಂಭವಾಯಿತು. ಪ್ರಿವಿ ಕೌನ್ಸಿಲ್ ಮುಂದೆ ವ್ಯಾಜ್ಯಗಳು ಪ್ರಾರಂಭವಾದವು. ಪ್ರಾಂತ್ಯಗಳು ಹಾಗೂ ಕೇಂದ್ರ ಎರಡು ವರಮಾನ ತೆರಿಗೆ ವಿಧಿಸಿದ ಬಗ್ಗೆ ಸಂಬಂಧಪಟ್ಟ ಉದ್ದಿಮೆಗಳಿಂದ ಟೀಕೆಗೆ ಗುರಿಯಾಗಬೇಕಾಯಿತು. ಸಮಿತಿಯು ಏಕರೂಪತೆಯನ್ನು ತರುವ ದೃಷ್ಟಿಯಿಂದ ತೆರಿಗೆಯ ಸಂಪೂರ್ಣ ಪರಿಷ್ಕರಣೆಗೆ ಶಿಫಾರಸು ಮಾಡಿತು. ಅದರಲ್ಲಿ ತೆರಿಗೆ ಅಧಿಕಾರ ಆಧಿಪತ್ಯದಲ್ಲಿ ಇರಬೇಕೆಂದು ಮತ್ತು ತೆರಿಗೆ ವಿಧಿಸುವ ಬಗ್ಗೆ ಪ್ರಾಂತ್ಯಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ತಿಳಿಸಲಾಯಿತು. ಈ ವಿಷಯವನ್ನು ಕುರಿತು ನಾನು ಹೇಳುವುದೇನೆಂದರೆ ಏಕರೂಪತೆಯ ದೃಷ್ಟಿಯಿಂದ ಕೇಂದ್ರವು ತೆರಿಗೆ ಸಂಗ್ರಹಣೆಯ ಮಾಧ್ಯಮವಾಗಿರುವುದಾದರೂ, ಪ್ರಾಂತ್ಯಗಳು ಹಾಗೂ ಕೇಂದ್ರದ ನಡುವೆ ತೆರಿಗೆಯ ನಿಶ್ಚಿತ ಪ್ರಮಾಣವನ್ನು ನಿಗದಿಪಡಿಸಬೇಕೆಂಬುದು ನನ್ನ ನಿಲುವು. ಒಂದು ಹಣಕಾಸು ಆಯೋಗ ಅಥವಾ ಸಮಿತಿಯು ಈ ವಿಷಯವನ್ನು ಕೈಗೆತ್ತಿಕೊಂಡರೆ ಅವರು ತೃಪ್ತಿಕರ ನಿರ್ಧಾರ ಕೈಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಇದರಿಂದ ಪ್ರಾಂತ್ಯಗಳು ತಮ್ಮಲ್ಲಿಯ ವಿವಿಧ ಸಮಾಜ ಸೇವಾ ವೆಚ್ಚವನ್ನು ಭರಿಸಲು ಅಗತ್ಯವಿರುವ ಪ್ರಮಾಣದಲ್ಲಿ ನಿಧಿಯನ್ನು ಪಡೆಯಬಹುದು. ಅಮೆರಿಕೆಯಲ್ಲಿ ೮ನೇ ಪ್ರಕರಣದಡಿ, ತೆರಿಗೆಯ ಸಾಮಾನ್ಯ ಅಧಿಕಾರ ಕಾಂಗ್ರೆಸ್‌ನಲ್ಲಿ ನಿಹಿತವಾಗಿದ್ದು, ಅಧಿಕಾರಿ ಸೇರಿದಂತೆ ವಿಧಿಸಲಾಗುವ ಎಲ್ಲ ಪ್ರಕಾರದ ಶುಲ್ಕಗಳು ಇಡೀ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಏಕರೂಪವಾಗಿದ್ದು, ಯಾವುದೇ ರಾಜ್ಯದಿಂದ ನಿಯೋಜಿತವಾಗುವ ಯಾವುದೇ ವಸ್ತುವಿನ ಮೇಲೆ ತೆರಿಗೆ ಅಥವಾ ಶುಲ್ಕವನ್ನು ವಿಧಿಸುವಂತಿಲ್ಲ ಎಂಬ ನಿರ್ಬಂಧ ಅನ್ವಯವಾಗುತ್ತದೆ. ಹಣಕಾಸು ವಿತರಣೆಯ ಯೋಜನೆಯಡಿ ಭಾರತ ಸರ್ಕಾರ ಅಧಿನಿಯಮದಲ್ಲಿ ಹಾಗೂ ಪ್ರಸ್ತುತ ವರದಿಯಲ್ಲಿ ತಿಳಿಸಲಾದಂತೆ ಸಾಧ್ಯವಾದ ಮಟ್ಟಿಗೆ ಎರಡು ಬೇರೆ ಬೇರೆ ಮೂಲಗಳಿಂದ ನಾಗರಿಕನ ಮೇಲೆ ಎರಡು ಪಟ್ಟು ತೆರಿಗೆ ವಿಧಿಸದಂತೆ ತಡೆಯುವ ಗುರಿ ಹೊಂದಲಾಗಿದೆ. ಆದ್ದರಿಂದ ಕೆಲವು ನಿರ್ದಿಷ್ಟ ತೆರಿಗೆಗಳನ್ನು ಕೇಂದ್ರಕ್ಕೆ, ಕೆಲವು ತೆರಿಗೆಗಳನ್ನು ಪ್ರಾಂತ್ಯಗಳಿಗೆ ವಹಿಸಲಾಗಿದೆ. ಅನುಕೂಲತೆಯ ದೃಷ್ಟಿಯಿಂದ ಕೇಂದ್ರವು ಸಂಗ್ರಹಣಾ ಏಜನ್ಸಿಯಾಗಿರುವ ತೆರಿಗೆಗಳ ಸಂಬಂಧದಲ್ಲಿ ಕೇವಲ ಸಂಗ್ರಹಣಾ ಶುಲ್ಕ ನೀಡುವುದಕ್ಕೆ ಒಳಪಟ್ಟು, ತೆರಿಗೆ ಉತ್ಪತ್ತಿಯನ್ನು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಭಾಗಮಾಡುವುದಕ್ಕೆ ಒಳಪಟ್ಟು, ತೆರಿಗೆಯನ್ನು ಪ್ರಾಂತ್ಯಗಳಿಗೆ ಕೊಡಲು ಉಪಬಂಧ ಕಲ್ಪಿಸಲಾಗಿದೆ. ನಿಗಮ ತೆರಿಗೆ, ಸುಂಕ ಹಾಗೂ ಕೆಲವು ಆಲಂಕಾರಿಕ ವಸ್ತುಗಳ ಮೇಲಿನ ತೆರಿಗೆಯ ಉತ್ಪತ್ತಿಗೆ ಕೇಂದ್ರವು ಸಂಗ್ರಹಣಾ ಏಜನ್ಸಿ ಹಾಗೂ ಪ್ರಾಧಿಕಾರ ಎರಡರ ಹಕ್ಕುಳ್ಳದ್ದಾಗಿರುತ್ತದೆ. ಎಸ್ಟೇಟ್ ಶುಲ್ಕ, ಸಕ್ಸೆಷನ್ ಶುಲ್ಕ ಮುಂತಾದವುಗಳ ಸಂಬಂಧದಲ್ಲಿ ಏಕರೂಪತೆ, ತ್ವರಿತ ಸಂಗ್ರಹಣೆ ಹಾಗೂ ಆಡಳಿತ ದಕ್ಷತೆಯ ದೃಷ್ಟಿಯಿಂದ, ಕೇಂದ್ರವು ಸಂಗ್ರಹಣಾ ಏಜನ್ಸಿಯಾಗಿದ್ದರೂ ಉತ್ಪತ್ತಿಯನ್ನು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ವಿತರಿಸಲಾಗುತ್ತದೆ. ವರಮಾನ ತೆರಿಗೆ ವಿಷಯದಲ್ಲಿ ಉತ್ಪತ್ತಿಯನ್ನು ಪ್ರಾಂತ್ಯ ಹಾಗೂ ಕೇಂದ್ರದ ನಡುವೆ ವಿತರಿಸಲಾಗುತ್ತದೆ. ಕೆಲವು ವಸ್ತುಗಳ ಮೇಲಿನ ತೆರಿಗೆಯಲ್ಲಿ ಪ್ರಾಂತ್ಯಗಳಿಗೆ ಸಂಗ್ರಹಣೆಯ ಪೂರ್ಣ ಹಕ್ಕು ಹಾಗೂ ಲಾಭದಾಯಕ ಹಿತಾಸಕ್ತಿ ಇರುತ್ತದೆ. ತೆರಿಗೆಯ ಉದ್ದೇಶಕ್ಕಾಗಿ ನೇಮಕಗೊಂಡ ಒಂದು ಸಮಿತಿಯ ಶಿಫಾರಸುಗಳ ಹಿನ್ನೆಲೆಯಲ್ಲಿ ಮರುಹೊಂದಾಣಿಕೆ ಮರುಹಂಚಿಕೆ ಅಗತ್ಯವಿರುವುದನ್ನು ನಾನು ವಿರೋಧಿಸುವುದಿಲ್ಲವಾದರೂ ಭಾರತ ಸರ್ಕಾರ ಅಧಿನಿಯಮ ಹಾಗೂ ತುಸುಮಟ್ಟಿಗೆ ಸಮಿತಿಯ ಮೊದಲನೇ ವರದಿಯಲ್ಲಿ ತಿಳಿಸದಂತೆ ವಿತರಣೆ ವಿಚಾರ ಸರಿಯಾಗಿದ್ದು ಇನ್ನು ಕೆಲವು ವಿಷಯಗಳಲ್ಲಿ

ಬೇರೆ ದೇಶಗಳಲ್ಲಿರುವಂತೆ ತೆರಿಗೆ ಯೋಜನೆಯಲ್ಲಿ ಸುಧಾರಣೆಗಳಾಗಬೇಕೆಂದು ನನ್ನ ಅಭಿಪ್ರಾಯ. ಕೆಲವು ಸಾಮಾನ್ಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ಬಿಟ್ಟರೆ, ನನ್ನ ಸ್ನೇಹಿತರು, ಯಾವ ವಿಷಯಗಳಲ್ಲಿ ತೆರಿಗೆ ಯೋಜನೆ ಸರಿಯಿಲ್ಲವೆಂದು ಹಾಗೂ ಸಮಿತಿಯ ಶಿಫಾರಸುಗಳು ದೋಷಪೂರ್ಣವಾಗಿವೆಯೆಂಬುದನ್ನು ತಿಳಿಸಿಲ್ಲ. ಅಂತೆಯೇ ಹಣಕಾಸಿನ ವಿಷಯದಲ್ಲಿಯೂ.

ಅಧಿಕಾರ ವಿತರಣೆ ಯೋಜನೆಗೆ ಸಂಬಂಧಿಸಿದಂತೆ ಆಕ್ಷೇಪಾರ್ಹವಾದುದು ಯಾವುದೂ ಇಲ್ಲ ಎಂದು ಸದನಕ್ಕೆ ತಿಳಿದಿದೆ. ಕೇಂದ್ರಪಟ್ಟಿಯಲ್ಲಿರುವ ಹಲವಾರು ವಿಷಯಗಳನ್ನು ಕ್ಯಾಬಿನೆಟ್ ಮಿಷನ್ ಯೋಜನೆಯಲ್ಲಿ ತಿಳಿಸಿರುವ ಮೂರು ಮುಖ್ಯ ಶೀರ್ಷಿಕೆಗಳಾದ ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂಪರ್ಕ ಶೀರ್ಷಿಕೆಯ ಅಡಿ ತರಬಹುದು. ವಿನಿಮಯ ಪತ್ರಗಳು, ಬ್ಯಾಂಕಿಂಗ್ ಕಾರ್ಪೊರೇಷನ್ ಕಾನೂನು, ಅಂತರಘಟಕ ವ್ಯಾಪಾರದಂಥ ವಿಷಯಗಳು ದೇಶದ ಸಾಮಾನ್ಯ ಒಳಿತಿನ ಮೇಲೆ ಪರಿಣಾಮ ಬೀರುವಂಥವು. ಬ್ಯಾಂಕಿಂಗ್, ಕಾರ್ಪೊರೇಷನ್ ಕಾನೂನು ಮತ್ತು ವಿಮೆಯಂಥ ವಿಷಯಗಳಲ್ಲಿ ಆಸ್ಟ್ರೇಲಿಯನ್ ಮತ್ತು ಕೆನಡಾ ಮಾದರಿಯನ್ನು ಅನುಸರಿಸಲು ಸಾಧ್ಯವಿದೆ. ಇದರಿಂದ ಪ್ರಾಂತೀಯ ಆಸಕ್ತಿ ಹೊಂದಿರುವ ನಿಗಮಗಳು ಹಾಗೂ ಘಟಕಗಳನ್ನು ಮೀರಿದ ಗುರಿ ಹೊಂದಿರುವ ನಿಗಮಗಳ ನಡುವೆ ವ್ಯತ್ಯಾಸ ಗುರುತಿಸಬಹುದು. ಹಾಗಾದಾಗ ಯಾವುದೇ ಸಮಿತಿ ಅಥವಾ ಈ ಸದನವು ಸಂಪೂರ್ಣವಾಗಿ ಪ್ರಾಂತೀಯ ಮಾಧ್ಯಮ ಗುರಿ ಹೊಂದಿರುವ ನಿಗಮಗಳು ಅಥವಾ ಬ್ಯಾಂಕುಗಳ ವಿನಾಯಿತಿ ನೀಡಲು ಸಾಧ್ಯವೆ ಎಂದು ಪರಿಶೀಲಿಸಬಹುದು ಅಥವಾ ಅದನ್ನು ಕಾರ್ಯಸೂಚಿಯಲ್ಲಿ ಸೇರಿಸಬಹುದು. ಕೇಂದ್ರ ಬಲಶಾಲಿಯಾಗಿರಬೇಕೆಂದು ನಾವು ಹೇಳುತ್ತಲೇ ಇದ್ದೇವೆ. ಪ್ರಾಂತೀಯ ಪಟ್ಟಿಯನ್ನು ನೋಡಿದರೆ ಅದರಲ್ಲಿ ಕೆಲವನ್ನು ಒಕ್ಕೂಟ ಪಟ್ಟಿಗೆ ವರ್ಗಾಯಿಸಿರುವುದು ತಿಳಿಯುತ್ತದೆ. ಪ್ರಾಂತೀಯ ಪಟ್ಟಿಯಲ್ಲಿನ ಪ್ರತಿಯೊಂದು ವಿಷಯವನ್ನು ಒಂದೊಂದಾಗಿ ನೋಡುವುದು ಒಳ್ಳೆಯದು. ಕೇಂದ್ರದ ವಿರುದ್ಧ ಪ್ರಾಂತ್ಯಗಳು, ಬಲಶಾಲಿ ಕೇಂದ್ರ ವಿರುದ್ಧ ದುರ್ಬಲ ಕೇಂದ್ರ, ಬಲಶಾಲಿ ಪ್ರಾಂತ್ಯ ವಿರುದ್ಧ ದುರ್ಬಲ ಪ್ರಾಂತ್ಯ, ಹೀಗೆ ವಾದಿಸುವ ಬದಲು ನಾವು ಕೇಂದ್ರ ಪಟ್ಟಿಯ ಒಂದೊಂದು ವಿಷಯವನ್ನು ಒಂದಾದ ಮೇಲೊಂದರಂತೆ ನೋಡಿ ಆ ಪೈಕಿ ಯಾವುದನ್ನು ಪ್ರಾಂತೀಯ ಪಟ್ಟಿಗೆ ಸೇರಿಸಬಹುದೆಂಬುದನ್ನು ನೋಡಬೇಕು, ಭವಿಷ್ಯದ ಸಂವಿಧಾನ ರಚಿಸುವ ಪ್ರಶ್ನೆ ಬಂದಾಗ ಇದು ನೆರವಾಗುವುದಿಲ್ಲ. ಮುಂದಿನ ಕೆಲವು ದಿನಗಳಲ್ಲಿ ನಾವು ಕೆಲವು ನಿರ್ದಿಷ್ಟ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಯಾವ ವಿಷಯಗಳು ಮಾರ್ಪಾಡಾಗಬೇಕು ಎಂದು ನೋಡಬೇಕು. ಬಲಶಾಲಿ ಕೇಂದ್ರ ಅಥವಾ ದುರ್ಬಲ ಕೇಂದ್ರ ಎಂಬ ವಿಷಯವನ್ನು ಕುರಿತು ಹೊಡೆದಾಡುವ ಬದಲು ಮೇಲಿನ ವಿಷಯ ಹೆಚ್ಚು ಉಪಯುಕ್ತವೆನಿಸುತ್ತದೆ. ಕೇಂದ್ರದ ಬಳಿ ಕೆಲವೇ ವಿಷಯಗಳಿದ್ದರೂ ಅದು ಬಲಶಾಲಿ ಕೇಂದ್ರವಾಗಿರಬಹುದು. ಆಸ್ಟ್ರೇಲಿಯಾ ದೇಶದ ಕೇಂದ್ರ ಸರ್ಕಾರ ಬಲಶಾಲಿಯಲ್ಲವೆಂದು ಹೇಳಲಾಗದು, ಅಮೆರಿಕ ಕೇಂದ್ರ ಸರ್ಕಾರ ಬಲಶಾಲಿಯಲ್ಲವೆಂದು ಹೇಳಲಾಗದು. ಭಾರತದ ಪರಿಸ್ಥಿತಿಯ ಅಗತ್ಯವನ್ನು ಮನಗಂಡು ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಮಹತ್ತ್ವದವುಗಳಾಗಿರುವ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ, ಆ ಪೈಕಿ ಯಾವುದು ಕೇಂದ್ರ ಪಟ್ಟಿಯಲ್ಲಿ ಯಾವುದು ಸಮವರ್ತಿ ಪಟ್ಟಿಯಲ್ಲಿ ಹಾಗೂ ಯಾವುದು ಪ್ರಾಂತೀಯ ಪಟ್ಟಿಯಲ್ಲಿ ಇರಬೇಕೆಂಬುದನ್ನು ನೋಡಬೇಕು. ಕೇಂದ್ರ ಹಾಗೂ ಪ್ರಾಂತ್ಯಗಳ ಮೇಲೆ ಆಕ್ರಮಣ ನಡೆಸುವ ಬದಲು ಇದು ಉತ್ತಮ ನಿಲುವು ಎನಿಸುತ್ತದೆ. ನಾನು ಈಗಾಗಲೇ ಹೇಳಿದಂತೆ ಪ್ರಾಂತೀಯ ಪಟ್ಟಿಯ ಕೆಲವು ವಿಷಯಗಳನ್ನು ಮಾತ್ರ ಕೇಂದ್ರಕ್ಕೆ ತೆಗೆದುಕೊಳ್ಳಲಾಗಿದೆ.

ಸಮವರ್ತಿ ಪಟ್ಟಿ ಇರುವುದರಿಂದಾಗಿ ಭಾರತೀಯ ಕಾನೂನು ಅಥವಾ ಹಿಂದೂ ಕಾನೂನುಗಳ ಸಂಹಿತೆಗಳಲ್ಲಿ ಏಕರೂಪತೆ ಇರುವಂತೆ ಮಾಡಲಾಗುತ್ತದೆ. ನಮ್ಮ ದೇಶದ ಸಂರಚನೆಯ ಉಪಯುಕ್ತ ಲಕ್ಷಣ ಇಲ್ಲಿದೆ. ಉದಾಹರಣೆಗೆ: ಆಸ್ತಿವರ್ಗಾವಣೆ ಅಧಿನಿಯಮ ಹಿಂದೂ ಕಾನೂನು ಉತ್ತರಾಧಿಕಾರ ಕಾನೂನು

ಇತ್ಯಾದಿ. ರಾಜ್ಯಗಳು ಸಮವರ್ತಿ ಪಟ್ಟಿಯ ಬಹುಪಾಲು ವಿಷಯಗಳನ್ನು ಅಳವಡಿಸಿಕೊಳ್ಳಲು ಯಾವುದೇ ನಿರ್ಬಂಧವಿಲ್ಲ. ಹಾಗಿದ್ದರೂ ರಾಜ್ಯಗಳು ಪರಮಾಧಿಕಾರದ ಆಸಕ್ತಿಯಿಂದ, ಇಡೀ ದೇಶದ ಹಿತಾಸಕ್ತಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಇತರರನ್ನು ಅನುಕರಿಸಿ ಚಿಕ್ಕ ಪುಟ್ಟ ಬದಲಾವಣೆ ಮಾಡಿ ತಮ್ಮದೇ ಅಧಿನಿಯಮಗಳನ್ನು ಏಕೆ ಮಾಡಿಕೊಳ್ಳುತ್ತಾರೋ ಗೊತ್ತಾಗುವುದಿಲ್ಲ. ಈಗ ಬಹುಪಾಲು ರಾಜ್ಯಗಳಲ್ಲಿ ಕಂಡುಬರುತ್ತಿರುವ ಅಂಶವೇನೆಂದರೆ ಭಾರತೀಯ ಶಾಸನಸಭೆಯು ಒಂದು ಅಧಿನಿಯಮವನ್ನು ಅಂಗೀಕರಿಸಿದರೆ ರಾಜ್ಯಗಳು ಅದನ್ನೇ ಅನುಕರಿಸಿಯೂ ಅದರಲ್ಲಿ ತುಸು ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ. ಇದರಿಂದಾಗಿ ವಕೀಲರ ಫೈಲಿ ತುಂಬುತ್ತಿದೆಯೇ ಹೊರತು ಕಾನೂನಿನ ಏಕರೂಪತೆಗೆ ಯಾವುದೇ ರೀತಿಯಲ್ಲೂ ಸಹಾಯವಾಗುವುದಿಲ್ಲ.

ವಿಘಟನಾ ಉಪಬಂಧಗಳ ಬಗ್ಗೆ ಹೇಳುವುದಾದರೆ, ಇವು ಭಾರತದ ಪ್ರಾಂತ್ಯಗಳಲ್ಲಿ ಸಚಿವರಾಗಿ ಮಹತ್ತ್ವದ ಸ್ಥಾನಗಳಲ್ಲಿರುವ ಕೆಲವು ಪ್ರಾಂತೀಯ ಪ್ರತಿನಿಧಿಗಳು ಪಟ್ಟು ಹಿಡಿದು ಏರ್ಪಾಡು ಮಾಡಿಸಿರುವಂಥವು. ಆದ್ದರಿಂದ ಮಾನ್ಯರೆ, ಕೇಂದ್ರ ಅಧಿಕಾರಗಳ ಸಮಿತಿಯು ಪರಿಶ್ರಮ ವಹಿಸಿ ಮಾಡಿರುವುದನ್ನು ಸಭೆಯು ಪರಿಶೀಲಿಸಬೇಕಾಗುತ್ತದೆ. ಪರಿಶ್ರಮ ವಹಿಸಿರುವ ಕೆಲಸದ ಬಗ್ಗೆ ಕೆಲವರು ಜ್ಞಾನವೇತ್ತರು ಟೀಕಿಸಬಹುದಾದರೂ, ಅದರಲ್ಲಿ ಆಕ್ಷೇಪಿಸುವಂಥದು ಇರುವುದಿಲ್ಲ ಎಂಬುದು ಖಚಿತ. ಆದ್ದರಿಂದ ಸದನವು ವರದಿಯನ್ನು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು, ಕೇಂದ್ರ ಅಧಿಕಾರಗಳ ಸಮಿತಿಯ ಎರಡನೇ ವರದಿಯನ್ನು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ಬೆಂಬಲಿಸುತ್ತೇನೆ. ಈ ವರದಿಯ ಪ್ರಾರಂಭಿಕ ಚರ್ಚೆಯ ಸಮಯದಲ್ಲಿ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯು ಯಾವ ಮೂಲಭೂತ ಅಂಶಗಳನ್ನು ಆಧರಿಸಿದೆ ಎಂಬುದನ್ನು ಕುರಿತು ನಮ್ಮ ಅಭಿಪ್ರಾಯಗಳನ್ನು ಕೇಳಲಾಗಿದೆ. ವರದಿಯ ೨ನೇ ಕಂಡಿಕೆಯಲ್ಲಿ ಮುಂದಿನಂತೆ ತಿಳಿಸಲಾಗಿದೆ:

"ಕ್ಯಾಬಿನೆಟ್ ಮಿಷನ್ ಯೋಜನೆಯ ಬಗ್ಗೆ ಕೇಂದ್ರ ಪ್ರಾಧಿಕಾರಕ್ಕೆ ಉಂಟಾದ ತೀವ್ರ ತೊಡಕೆಂದರೆ ಮುಸ್ಲಿಮ್ ಲೀಗ್‌ಗೆ ಅವಕಾಶ ಕಲ್ಪಿಸುವುದಕ್ಕಾಗಿ ಸಭೆಯು, ದೇಶದ ಆಡಳಿತಾತ್ಮಕ ಅಗತ್ಯಗಳ ಬಗೆಗಿನ ತನ್ನ ನಿರ್ಣಯಗಳಿಗೆ ವಿರುದ್ಧವಾಗಿ ಹೊಂದಾಣಿಕೆಯನ್ನು ಒಪ್ಪಿಕೊಳ್ಳಬೇಕಾಯಿತು. ವಿಭಜನೆ ಈಗ ನಿರ್ಧಾರಗೊಂಡ ವಿಷಯವಾಗಿರುವುದರಿಂದ, ಸಾಮಾನ್ಯ ಒಳಿತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಸಮನ್ವಯಗೊಳಿಸಿ ಶಾಂತಿ ನೆಲೆಸುವಂತೆ ಮಾಡಲು ಹಾಗೂ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಡೀ ದೇಶದ ಪರವಾಗಿ ಪರಿಣಾಮಕಾರಿಯಾಗಿ ಮಾತನಾಡಲು ಅಸಮರ್ಥವಾದ ದುರ್ಬಲ ಕೇಂದ್ರ ಸರ್ಕಾರವಿರುವುದು ದೇಶದ ಹಿತದ ದೃಷ್ಟಿಯಿಂದ ಅಪಾಯಕಾರಿ ಎಂಬುದು ನಮ್ಮೆಲ್ಲರ ಒಮ್ಮತದ ಅಭಿಪ್ರಾಯ"

ಮಾನ್ಯರೆ, ಈ ಅಂಶವನ್ನು ಯಾವ ಪ್ರಜ್ಞಾವಂತನೂ ಅಲ್ಲಗಳೆಯುವುದಿಲ್ಲ. ಮೇ ೧೬ರ ಯೋಜನೆಯನ್ನು ಅಂಗೀಕರಿಸಿದಾಗ ನಾವು ಕೇಂದ್ರದಲ್ಲಿ ನಿಹಿತವಾದ ಅಧಿಕಾರಗಳು ಸೀಮಿತವೆಂಬ ನಿರ್ಧಾರವನ್ನು ತಳೆಯಲು ಅವಕಾಶವಿದ್ದು ಕೇಂದ್ರವು ತನ್ನ ಹೊಣೆಗಾರಿಕೆಗಳನ್ನು ಕಾರ್ಯಗತಗೊಳಿಸಲು ಅದಕ್ಕೆ ಹೆಚ್ಚಿನ ಅಧಿಕಾರಗಳ ಅಗತ್ಯವಿದೆ ಎಂಬ ಅಂಶವನ್ನು ಮನಗಂಡೆವು. ಆದರೆ ಮೇ ೧೬ರ ಯೋಜನೆಯಲ್ಲಿ ವಿಧಿಸಲಾಗಿದ್ದ ತತ್ತ್ವಗಳನ್ನು ಸ್ವೀಕರಿಸದೆ ನಮಗೆ ಬೇರೆ ದಾರಿ ಇರಲಿಲ್ಲ. ಈಗ ಆ ಯೋಜನೆ ರದ್ದಾಗಿರುವುದರಿಂದ ಬಲಶಾಲಿ ಕೇಂದ್ರ ಎಂದರೇನು ಮತ್ತು ನಾವು ಕೇಂದ್ರಕ್ಕೆ ನೀಡುವ ಯಾವುದೇ ಅಧಿಕಾರಗಳು ಪ್ರಾಂತ್ಯಗಳ ಬೆಳವಣಿಗೆಗೆ ಅಡ್ಡಿಯಂಟುಮಾಡುತ್ತವೆಯೇ ಎಂಬುದು ನಮಗೆ ಸ್ಪಷ್ಟವಾಗಿ ತಿಳಿದಿರಬೇಕು.

ಪಟ್ಟಿಗಳಲ್ಲಿರುವ ವಿಷಯಗಳ ಬಗ್ಗೆ ಚರ್ಚಿಸುವುದಕ್ಕೆ ಮುಂಚೆ ನಾವು ಬಲಶಾಲಿ ಕೇಂದ್ರದ ಲಕ್ಷಣಗಳೇನು ಎಂಬುದನ್ನು ಗಮನಿಸಬೇಕಾದ ಅಗತ್ಯವಿದೆ. ನನ್ನ ಪ್ರಕಾರ ಬಲಶಾಲಿ ಕೇಂದ್ರದ ಲಕ್ಷಣಗಳೆಂದರೆ ಅದು

ಇಡೀ ದೇಶದ ಒಳಿತಿನ ಬಗ್ಗೆ ಯೋಚಿಸಿ ಯೋಜನೆ ರೂಪಿಸುವ ಸ್ಥಿತಿಯಲ್ಲಿರಬೇಕು ಎಂದರೆ ಆತಂಕದ ದಿನಗಳಲ್ಲಿ ದೇಶದ ಕಾರ್ಯಕಲಾಪಗಳನ್ನು ಸಮನ್ವಯಗೊಳಿಸುವ ಅಧಿಕಾರವಷ್ಟೇ ಅಲ್ಲ, ದೇಶದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾಂತ್ಯಗಳಿಗೆ ನಿರ್ದೇಶನ ನೀಡುವ ಅಧಿಕಾರವೂ ಇರಬೇಕು. ಬಲಶಾಲಿ ಕೇಂದ್ರದ ಎರಡನೇ ಲಕ್ಷಣವೆಂದರೆ ಅಗತ್ಯವಿರುವಾಗ ಪ್ರಾಂತ್ಯಗಳ ಉತ್ತಮ ಆಡಳಿತಕ್ಕಾಗಿ ಎಲ್ಲವನ್ನು ಒದಗಿಸುವಂತಿರಬೇಕು. ಮೂರನೆಯ ಲಕ್ಷಣವೆಂದರೆ ಆತಂಕದ ಕಾಲದಲ್ಲಿ ಇಡೀ ದೇಶದ ಹಿತದ ದೃಷ್ಟಿಯಿಂದ ಪ್ರಾಂತ್ಯಗಳ ಆರ್ಥಿಕ ಹಾಗೂ ಔದ್ಯಮಿಕ ರಂಗವನ್ನು ನಿಯಂತ್ರಿಸಿ ನಿರ್ದೇಶನ ನೀಡುವ ಹಕ್ಕು ಹೊಂದಿರಬೇಕು. ಬಲಶಾಲಿ ಕೇಂದ್ರದ ನಾಲ್ಕನೆಯ ಲಕ್ಷಣವೆಂದರೆ ವಿದೇಶಿ ಆಕ್ರಮಣದಿಂದ ಹಾಗೂ ವಿಧ್ವಂಸಕಾರಿ ಯುದ್ಧದಿಂದ ದೇಶವನ್ನು ರಕ್ಷಿಸಲು ಸಾಕಷ್ಟು ಅಧಿಕಾರ ಹೊಂದಿರಬೇಕು. ಐದನೆಯ ಲಕ್ಷಣವೆಂದರೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಡೀ ದೇಶವನ್ನು ಪ್ರತಿನಿಧಿಸಬಲ್ಲ ಶಕ್ತಿ ಹಾಗೂ ಬಲ ಹೊಂದಿರಬೇಕು. ನನ್ನ ದೃಷ್ಟಿಯಲ್ಲಿ ಇವು ಬಲಶಾಲಿ ಕೇಂದ್ರ ಸರ್ಕಾರದ ಲಕ್ಷಣಗಳು.

ಇವು ಬಲಶಾಲಿ ಕೇಂದ್ರದ ಲಕ್ಷಣಗಳೆಂದು ಗುರುತಿಸಿದಾಗ ನಮ್ಮಲ್ಲಿ ಇರುವ ಕೇಂದ್ರ ಸರ್ಕಾರ ಬಲಶಾಲಿಯಾದುದೇ ಅಥವಾ ಇಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ನಮಗೆ ಬಲಶಾಲಿ ಕೇಂದ್ರ ಬೇಕೇ ದುರ್ಬಲ ಕೇಂದ್ರವಿರಬೇಕೇ ಎಂಬುದನ್ನು ಚರ್ಚಿಸುವುದಕ್ಕೆ ಮುಂಚೆ ನಾವು ಅರಿತಿರಬೇಕಾದ ಒಂದು ಅಂಶವೆಂದರೆ ಬಲಶಾಲಿ ಕೇಂದ್ರದ ಅಸ್ತಿತ್ವವು ಶಕ್ತಿಶಾಲಿ ಕೇಂದ್ರ ಸರ್ಕಾರದ ಒಳಗಿರುವ ಶಕ್ತಿಶಾಲಿ ಘಟಕದ ಅಸ್ತಿತ್ವವನ್ನು ಕಡೆಗಣಿಸಲಾರದು.

ನಿನ್ನೆ ನಾವು ಪ್ರಾಂತೀಯ ಸ್ವಾಯತ್ತತೆಯ ಇಬ್ಬರು ಪ್ರಮುಖರ ಭಾಷಣಗಳನ್ನು ಕೇಳಿದವು. ಒಬ್ಬರು ಮೌಲಾನಾ ಹಸ್ರತ್ ಮೋಹಾನಿ, ಇನ್ನೊಬ್ಬರು ಶ್ರೀ ಕೆ. ಸಂತಾನಮ್. ಶ್ರೀ ಸಂತಾನಮ್ ಅವರು ಕೇಂದ್ರ ಅಧಿಕಾರಗಳ ಸಮಿತಿಯ ವರದಿಯ ಯೋಜನೆಯಾಗಿ ಕೇಂದ್ರಕ್ಕೆ ನೀಡಲು ಉದ್ದೇಶಿಸಿರುವ ಅಧಿಕಾರಗಳನ್ನು ಕುರಿತು ನಿಷ್ಠುರವಾಗಿ ಮಾತನಾಡಿದರು. ವರದಿಗೆ ಲಗತ್ತಿಸಿರುವ ಪಟ್ಟಿಗಳನ್ನು ವಿಶ್ಲೇಷಿಸಿದಾಗ ಸಂತಾನಮ್ ಅವರಂಥ ಧುರೀಣರು, ಕ್ರಾಂತಿ ಅಥವಾ ವಿಕೇಂದ್ರೀಕರಣದ ಮುಂದಾಳುವೊಬ್ಬ ಆಕ್ಷೇಪಿಸಬಹುದಾದಂಥ ವಿಷಯಗಳ ಸಂಖ್ಯೆ ಅತ್ಯಂತ ಕಡಿಮೆ. ನಾನು ವಿಶ್ಲೇಷಿಸಿ ಕೈಗೊಂಡ ನಿರ್ಧಾರವೇನೆಂದರೆ ಒಕ್ಕೂಟ ಪಟ್ಟಿಯಲ್ಲಿನ ೧ರಿಂದ ೧೦ರವರೆಗಿನ ವಿಷಯಗಳು ವಿವಿಧ ಬಗೆಯ, ಪ್ರಕಾರದ ರಕ್ಷಣಾ ಚಟುವಟಿಕೆಗಳಿಗೆ ಸಂಬಂಧಿಸಿದ್ದು ಆ ಬಗ್ಗೆ ಆಕ್ಷೇಪಿಸುವಂಥವರು ಯಾರೂ ಇಲ್ಲ. ಉದಾಹರಣೆಗೆ: ಅಂಥ ವಿಷಯಗಳೆಂದರೆ ಒಕ್ಕೂಟದ ಮತ್ತು ಅದಕ್ಕೆ ಸಂಬಂಧಿಸಿದ ಪ್ರದೇಶಗಳ ರಕ್ಷಣಾ ವ್ಯವಸ್ಥೆ ರಕ್ಷಣಾ ಸಿದ್ಧತೆಗಳು, ಯುದ್ಧದ ಯಶಸ್ವಿ ನಿರ್ವಹಣೆಗೆ ಯುದ್ಧಕಾಲದಲ್ಲಿ ಬೇಕಾದ ಎಲ್ಲ ರಕ್ಷಣಾ ಚಟುವಟಿಕೆಗಳು ಮತ್ತು ಆ ತರುವಾಯ ಅಲ್ಲಿಂದ ಕದಲಿಸುವ ಚಟುವಟಿಕೆಗಳು ಆದ್ದರಿಂದ ಕೇಂದ್ರವು ಈ ಸಂಬಂಧದಲ್ಲಿ ಕೈಗೊಳ್ಳುವ ಇಂಥ ಯಾವುದೇ ಚಟುವಟಿಕೆಗೆ ಸದನದ ಯಾರೊಬ್ಬರೂ ಆಕ್ಷೇಪವೆತ್ತುವುದಿಲ್ಲ. ನಾನು ಈಗಾಗಲೇ ಹೇಳಿರುವಂತೆ ೧ರಿಂದ ೧೦ರವರೆಗಿನವುಗಳಲ್ಲಿ ಹಲವಾರು ವಿಷಯಗಳು ಕೇಂದ್ರದ ರಕ್ಷಣಾ ಜವಾಬ್ದಾರಿಯ ಚಟುವಟಿಕೆಗಳನ್ನೇ ಒಳಗೊಂಡಿದ್ದು ಆ ಬಗ್ಗೆ ಯಾರೂ ಆಕ್ಷೇಪಿಸುವುದಿಲ್ಲ ಮತ್ತೆ ೧೧ರಿಂದ ೨೫ರವರೆಗಿನವುಗಳಲ್ಲಿ ವಿದೇಶ ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಿದ್ದು, ಆ ಬಗ್ಗೆಯೂ ಶ್ರೀ ಸಂತಾನಮ್ ಆಗಲಿ ಮೌಲಾನ್ ಹಸ್ರತ್ ಮೋಹಾನಿ ಆಗಲಿ ಆಕ್ಷೇಪವೆತ್ತುವುದಿಲ್ಲ.

ಕ್ರಮಾಂಕ ೨೮ರಲ್ಲಿ ಆಮದು ಮತ್ತು ರಫ್ತುಗಳು, ಗ್ರಂಥಾಲಯಗಳು, ಸಂಗ್ರಹಾಲಯಗಳು ಹಾಗೂ ವಿಶ್ವವಿದ್ಯಾಲಯಗಳ ವಿಷಯಗಳಿವೆ. ಇದರಲ್ಲಿ ಕೆಲವು ಜವಾಬ್ದಾರಿಗಳು ಈಗಾಗಲೇ ಕೇಂದ್ರದ ಮೇಲಿವೆ ಮತ್ತು ಅವು ಹಾಗಿರಬೇಕು. ಈ ಜವಾಬ್ದಾರಿಯನ್ನು ಕೇಂದ್ರಕ್ಕೆ ವಹಿಸಿರುವುದರ ವಿರುದ್ಧವಾಗಿ ಹೇಳುವಂಥದು ಏನೂ ಇಲ್ಲ. ೨೯ರಿಂದ ೩೯ನೇ ಕ್ರಮಾಂಕದ ವಿಷಯಗಳು ಸಂಪರ್ಕಕ್ಕೆ ಸಂಬಂಧಿಸಿವೆ. ಅವು ಕೇಂದ್ರ

ಪ್ರಾಧಿಕಾರದ ಅಗತ್ಯದ ಭಾಗ ಎಂದು ಒಪ್ಪಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಇಲ್ಲ.

ಒಕ್ಕೂಟ ಪಟ್ಟಿಯ ೪೦ರಿಂದ ೫೩ರ ವರೆಗಿನವುಗಳೂ, ಸರ್ವೇ, ಒಕ್ಕೂಟದ ನ್ಯಾಯಾಂಗ, ಒಕ್ಕೂಟದ ಉದ್ದೇಶಗಳಿಗಾಗಿ ಆಸ್ತಿ ಸಂಪಾದನೆ ಸಂಶೋಧನೆ ಗಣತಿ, ಭಾರತೀಯ ರಿಜರ್ವ್ ಬ್ಯಾಂಕ್, ಸಾರ್ವಜನಿಕ ಸಾಲ, ಬಡ್ಡಿ, ಕರೆನ್ಸಿ ಮುಂತಾದ ವಿಷಯಗಳಿವೆ. ಇವುಗಳನ್ನು ಬೇರೆ ಪ್ರಾಂತ್ಯಗಳಿಗೂ ವಹಿಸಬಹುದೇ ಎನಿಸುತ್ತದೆ, ಕೇಂದ್ರ ಅಧಿಕಾರಗಳ ಸಮಿತಿ ಈ ಎಲ್ಲ ವಿಷಯಗಳನ್ನು ಕೇಂದ್ರಕ್ಕೆ ವಹಿಸಿರುವುದು. ೫೪ರಿಂದ ೫೯ರವರೆಗಿನ ಕ್ರಮಾಂಕಗಳಲ್ಲಿ ವ್ಯಾಪಾರ, ಆರ್ಥಿಕ ವಿಷಯ ವಿಮೆ ನಿಗಮಗಳು, ಬ್ಯಾಂಕಿಂಗ್ ಚೆಕ್‌ಗಳು, ಬಿಲ್ಸ್ ಆಫ್ ಎಕ್ಸ್‌ಚೇಂಜ್, ದೇಶದ ವಿಷಯಗಳು, ಇಂಥ ವಿಷಯಗಳನ್ನು ಕಾರ್ಯಗತಗೊಳಿಸುವ ಹೊಣೆಯನ್ನು ಪ್ರಾಂತ್ಯಗಳಿಗೆ ವಹಿಸಲಾಗದು, ಇತರ ವಿಷಯಗಳ ಬಗ್ಗೆ ಆಕ್ಷೇಪವೆತ್ತುವಂಥದು ಇಲ್ಲ. ಕ್ರಮಾಂಕ ೫೪ರಿಂದ ೬೪ರವರೆಗಿನ ವಿಷಯಗಳು ವಾದಗ್ರಸ್ತವಾಗಿವೆ. ೬೪ನೇ ಕ್ರಮಾಂಕದ ಬಾಬಿನಲ್ಲಿ ಮುಂದಿನಂತೆ ಹೇಳಲಾಗಿದೆ.

"ಒಕ್ಕೂಟದ ಮೇಲೆ ಬಾಧಕ ಪರಿಣಾಮ ಬೀರುವಂಥ, ಒಕ್ಕೂಟದ ಯಾವುದೇ ಪ್ರದೇಶದ ಯಾವುದೇ ಭಾಗದಲ್ಲಿ, ದೊಡ್ಡ ಆರ್ಥಿಕ ತುರ್ತುಸಂದರ್ಭವನ್ನು ನಿರ್ವಹಿಸಲು ಅಧಿಕಾರ." ೪ನೇ ಕ್ರಮಾಂಕದ ಬಾಬಿನಲ್ಲಿ ಮುಂದಿನಂತೆ ಹೇಳಲಾಗಿದೆ:

'ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಯುಕ್ತವೆಂದು ಸಂಯುಕ್ತ ಕಾನೂನಿನಲ್ಲಿ ಘೋಷಿಸಿರುವ ಒಕ್ಕೂಟದ ನಿಯಂತ್ರಣದಲ್ಲಿರುವ ಉದ್ದಿಮೆಗಳ ಅಭಿವೃದ್ಧಿ."

ಪ್ರಾಂತ್ಯಗಳ ಜವಾಬ್ದಾರಿಯನ್ನು ಅತಿಕ್ರಮಿಸುತ್ತವೆ ಎಂಬ ಆಕ್ಷೇಪಣೆ ಒಳಗಾದ ಬಾಬುಗಳು ಈ ಎರಡು. ಆದರೆ ಪ್ರಾಂತ್ಯಗಳು ಈ ದೊಡ್ಡ ಸಮಸ್ಯೆಗಳನ್ನು ಎದುರಿಸಲಾರದ ಸನ್ನಿವೇಶ, ಸಂದರ್ಭ ಕೆಲವು ಬಾರಿ ಪ್ರಾಂತ್ಯಗಳಲ್ಲಿರುತ್ತದೆ. ಅದಕ್ಕಾಗಿ ದೇಶದಲ್ಲಿ ಉದ್ದಿಮೆಯ ನ್ಯಾಯಯುತ ವಿತರಣೆ ಹೆಚ್ಚಬೇಕಾದರೆ ಈ ಎರಡು ಬಾಬುಗಳಡಿ ಕೇಂದ್ರಕ್ಕೆ ಆ ಅಧಿಕಾರವನ್ನು ಮೀಸಲಿರಿಸಿದರೆ ಅದಕ್ಕೆ ವಿರೋಧ ಬರುವುದಿಲ್ಲವೆಂದು ನಾನು ತಿಳಿದಿದ್ದೇನೆ. ಶ್ರೀ ಸಂತಾನಮ್ ಮತ್ತು ಮೌಲಾನಾ ಹಸ್ರತ್ ಮೋಹಾನಿ ಅವರ ಮಾತಿನಲ್ಲಿ ವಿಕೇಂದ್ರೀಕರಣದ ವಿಚಾರವಿದೆ ಎಂದು ನನಗೆನಿಸುತ್ತದೆ. ಅವರ ಮಾತುಗಳನ್ನು ಕೇಳುತ್ತಿದ್ದಾಗ ನನಗೆ, ಈ ಗಣ್ಯರ ಮಾತಿನಲ್ಲಿ ಭಾರತದ ಹಳೆಯ ಇತಿಹಾಸದ ದಿನಗಳಲ್ಲಿ ಕಂಡುಬರುತ್ತಿದ್ದ ವಿಘಟನೆಯ ಭಾವ ಇಣುಕುತ್ತಿರುವಂತೆ ತೋರಿತು. ಸಂವಿಧಾನ ರಚನಾಕಾರರಿಗೆ, ಕೇಂದ್ರಕ್ಕೆ ಅಗತ್ಯಕ್ಕಿಂತ ಹೆಚ್ಚು ಅಧಿಕಾರದ ನೀಡುವುದಕ್ಕೆ ಒಲವಿರುವ ಬಗ್ಗೆ ಶ್ರೀ ಸಂತಾನಮ್ ಮಾತನಾಡಿದರು. ಅವರು ವಿಕೇಂದ್ರೀಕರಣದ ಪ್ರತಿಪಾದಕರು, ಕೇಂದ್ರವು ದುರ್ಬಲವಾಗಿದ್ದರೇನೇ ತಾವು ಪ್ರಾಂತ್ಯಗಳಲ್ಲಿ ಅನುಭವಿಸುತ್ತಿರುವ ಅಧಿಕಾರಕ್ಕೆ ಒಂದು ಅರ್ಥವಿರುತ್ತದೆ ಎಂದು ಭಾವಿಸಿದ್ದಾರೆ. ಇಂಥ ಭೀತಿಯ ಭೂತ ನಮ್ಮನ್ನು ಕಾಡಲು ಅವಕಾಶ ಕೊಡಬಾರದು ಹಾಗೂ ಇತರರೂ ಆ ಗಾಬರಿಯಲ್ಲಿರುವಂತೆ ಮಾಡಬಾರದು.

ಇಡೀ ದೇಶದ ತುಂಬ ಸಮಾಜವಾದಿ ಗಣತಂತ್ರವಾದಿಗಳು ಇರುವ ಬಗ್ಗೆ ಮೌಲಾನಾ ಹಸ್ರತ್ ಮೋಹಾನಿ ಸುದೀರ್ಘವಾಗಿ ಮಾತನಾಡಿದರು. ಸೋವಿಯೆತ್ ಸೋಷಿಯಲಿಸ್ಟ್ ರಿಪಬ್ಲಿಕನ್ನರು ಕೇಂದ್ರದ ನಿರ್ದೇಶನವಿಲ್ಲದೇ ದೇಶದಲ್ಲಿ ತಮ್ಮ ಅಸ್ತಿತ್ವವನ್ನು ಅನುಭವಿಸುವಂತಿಲ್ಲ ಎಂಬುದು ಮೌಲಾನಾ ಹಸ್ರತ್ ಮೋಹಾನಿಯವರಿಗೆ ಗೊತ್ತಿಲ್ಲ ಎನಿಸುತ್ತದೆ. ಕೈಗಾರಿಕೆಯ ಸಾಮಾಜಿಕೀಕರಣದ ಪರಿಣಾಮಗಳನ್ನೆದುರಿಸಲು ನಾವೆಲ್ಲ ಸಿದ್ದರಾಗಿರಬೇಕು, ಕೈಗಾರಿಕೆಯ ಸಾಮಾಜಿಕೀಕರಣ ತುಂಡುತುಂಡಾಗಿ ನಡೆಯಲಾರದು. ಅದು ಕೇಂದ್ರದ ನಿರ್ದೇಶನಕ್ಕೊಳಪಟ್ಟಿರುತ್ತದೆ. ಅದು ಕೇಂದ್ರದಿಂದ ಮಾರ್ಗದರ್ಶನ ಪಡೆಯಬೇಕಾಗುತ್ತದೆ. ನಾವೆಲ್ಲ ರಾಷ್ಟ್ರೀಕರಣ ಮತ್ತು ಸಾಮಾಜೀಕರಣದ ವಿಕೃತ ರೂಪವನ್ನು ನೋಡಲು ಸಿದ್ಧರಿರಬೇಕು ಇದರಿಂದ ನಾವು ದೂರವಿರಲು ಆಗುವುದಿಲ್ಲ. ಸಮಾಜವಾದಿ ವ್ಯವಸ್ಥೆ ಬೇಕು ಎಂದಾದರೆ ವಿಕೇಂದ್ರೀಕೃತ ಸರ್ಕಾರವಿರಬೇಕಾಗುತ್ತದೆ. ಅದು ನಮಗೆ ದೀರ್ಘ ಪರಿಣಾಮಗಳನ್ನು ನೀಡುವುದಿಲ್ಲ. ಈಗ ರಚಿಸಿರುವ ವರದಿಯು, ಪೂರ್ಣ ಬೆಂಬಲಕ್ಕೆ

ಅರ್ಹವಾಗಿದೆ. ಅದನ್ನು ಅಂಶಅಂಶವಾಗಿ ಚರ್ಚಿಸಲಾರಂಭಿಸಿದಾಗ, ಅದರ ವಿರುದ್ಧದ ಟೀಕೆಗಳಲ್ಲಿ ಹುರುಳಿಲ್ಲ ಎಂಬುದು ತಿಳಿಯುತ್ತದೆ. ಅಧಿಕಾರ ಹಾಗೂ ಹಣಕಾಸಿನ ನ್ಯಾಯಸಮ್ಮತ ವಿತರಣೆ ಇರಬೇಕೆಂದು ಹೇಳಲಾಯಿತು. ಈಗಾಗಲೆ ಅದು ಹಾಗೆ ಇದೆ. ಪ್ರಾಂತೀಯ ಶಾಸನಸಭೆಯ ಪಟ್ಟಿಯಲ್ಲಿನ ೪೦ರಿಂದ ೫೮ರವರೆಗಿನ ೧೮ ವಿಷಯಗಳಲ್ಲಿಯೂ ತೆರಿಗೆಯ ಹಕ್ಕುಗಳನ್ನು ಪ್ರಾಂತ್ಯಗಳಿಗೆ ನೀಡಲಾಗಿದೆ. ಅಲ್ಲಿರುವ ವಿಷಯಗಳ ಬಗ್ಗೆ ನಾನು ವಿವರಿಸಬೇಕಾದ ಅಗತ್ಯವಿಲ್ಲ ಪ್ರಾಂತ್ಯಗಳು ಕಂದಾಯ ನಿರ್ಧರಣೆ ಹಾಗೂ ಕಂದಾಯ ವಸೂಲಿ ಸೇರಿದಂತೆ ತಮ್ಮದೇ ಭೂ ಆದಾಯ ತೆರಿಗೆಗಳನ್ನು, ಭೂದಾಖಲೆ ನಿರ್ವಹಣೆ, ಸರ್ವೇ, ಕಂದಾಯದ ಉದ್ದೇಶ, ಹಕ್ಕು ದಾಖಲೆ, ಕೃಷಿ ವರಮಾನ ತೆರಿಗೆ, ಭೂಮಿ ಹಾಗೂ ಕಟ್ಟಡಗಳ ಮೇಲೆ ತೆರಿಗೆ, ಕೃಷಿಭೂಮಿಯ ಉತ್ತರಾಧಿಕಾರ ಸುಂಕ, ಕೃಷಿಭೂಮಿಯ ಎಸ್ಟೇಟ್ ಸುಂಕ, ಖನಿಜ ಹಕ್ಕುಗಳ ಮೇಲಿನ ಸುಂಕ, ವೃತ್ತಿಗಳ ಮೇಲೆ ಕ್ಯಾಪಿಟೇಷನ್ ತೆರಿಗೆ, ಮುಂತಾಗಿ ಹೊಂದಬಹುದಾಗಿದೆ. ತೆರಿಗೆ ವಿಧಿಸುವ ಹಲವಾರು ಅವಕಾಶಗಳನ್ನು ಪ್ರಾಂತ್ಯಗಳಿಗೆ ನೀಡಲಾಗಿದೆ. ಸ್ವಲ್ಪ ಸಮಯಕ್ಕೆ ಮುಂಚೆ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಾಡಿದ ಭಾಷಣದಿಂದ, ಈ ವರದಿಯ ತಯಾರಕರು ಪ್ರಾಂತ್ಯಗಳ ಹಿತಾಸಕ್ತಿಯನ್ನು ಯಾವುದೇ ರೀತಿಯಲ್ಲೂ ಕಡೆಗಣಿಸಿಲ್ಲವೆಂಬುದು ತಿಳಿಯುತ್ತದೆ. ಆದ್ದರಿಂದ ಮಾನ್ಯರೆ, ನಾನು ಈ ವರದಿಯನ್ನು ಮನಃಪೂರ್ವಕವಾಗಿ ಬೆಂಬಲಿಸುತ್ತೇನೆ ಹಾಗೂ ಪ್ರಬುದ್ಧ ಪರಿಶೀಲನೆ ನಡೆಸಿದ ಅನಂತರ ಸದನಕ್ಕೆ ಇದರಲ್ಲಿ ಆಕ್ಷೇಪಾರ್ಹ ಅಂಶ ಯಾವುದೂ ಇಲ್ಲ ಎಂಬುದು ಅರಿವಾಗುತ್ತದೆ.

**ಶ್ರೀ ಜಿ.ಎಲ್. ಮೆಹ್ತಾ** (ಪಶ್ಚಿಮ ಭಾರತೀಯ ರಾಜ್ಯಗಳ ಸಮೂಹ) : ಮಾನ್ಯರೆ, ನಿನ್ನೆ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ನಮ್ಮಲ್ಲಿ ಕೆಲವರು ಇಚ್ಛಿಸಿದ್ದೆವು. ಆಗ ನಾನು, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸಮರ್ಥವಾಗಿ ಹಾಗೂ ಪರಿಣಾಮಕಾರಿಯಾಗಿ ಮಂಡಿಸಿದ ವರದಿಗೆ ಸದನದ ಒಪ್ಪಿಗೆ ದೊರೆಯುವುದೆಂದು ಭಾವಿಸಿದ್ದೆ. ಮೌಲಾನಾ ಹಸ್ರತ್ ಮೋಹಾನಿ ತಮ್ಮ ದುಭಾಷಿ ಭಾಷಣದಲ್ಲಿ ಮಂಡಿಸಿದ ತಿದ್ದುಪಡಿಗೆ ಸಿದ್ಧರಾಗಿದ್ದೆವು. ಆದರೆ ಶ್ರೀ ಸಂತಾನಮ್ ಭಾಷಣ ಕೇಳಿ ನನಗೆ ಉಸಿರು ನಿಂತಂತಾಯಿತು. ನಾವು ಅಧಿಕಾರ ವಿಭಜನೆಯ ವಿಷಯವನ್ನು, ಪ್ರಾಧಿಕಾರ ಹಾಗೂ ಇನ್ನೊಂದರ ನಡುವಣ ಹಗ್ಗ ಜಗ್ಗಾಟದಂತೆ ಅಥವಾ ಹೆಣಗಾಟದಂತೆ ಪರಿಗಣಿಸುತ್ತಿದ್ದೇವೆ. ಆದರೆ ಇದು ಆ ರೀತಿಯದಲ್ಲ. ಇದು ಒಂದು ಯೋಜನೆಯಾಗಿದ್ದು, ಪರಸ್ಪರ ರಿಯಾಯಿತಿಗಳಿಗೆ ಆಸ್ಪದವಿರುತ್ತದೆ ಪ್ರಾಂತೀಯ ಹಾಗೂ, ಸಾಂಸ್ಕೃತಿಕ ನಿಷ್ಠೆಯನ್ನು ಕಾಪಾಡಿಕೊಂಡು ರಾಜಕೀಯ ಬಲ ಹಾಗೂ ದೇಶದ ಐಕಮತ್ಯವನ್ನು ಹೆಚ್ಚಿಸಬೇಕು. ಮಿಕ್ಕ ಅಧಿಕಾರಗಳು ಕೇಂದ್ರದ ಬಳಿ ಏಕೆ ಇರಬೇಕು ಎಂಬುದನ್ನು ಎರಡನೇ ವರದಿಯಲ್ಲಿ ವಿವರಿಸಲಾಗಿದೆ. ನಿನ್ನೆ ಮೌಲಾನಾ ಹಸ್ರತ್ ಮೋಹಾನಿಯವರ ಭಾಷಣವನ್ನು ಕೇಳಿ ಆಶ್ಚರ್ಯವಾಯಿತು. ಈಗ ದೇಶ ವಿಭಜನೆ ನಡೆದಿರುವುದರಿಂದ ಮಿಕ್ಕ ಅಧಿಕಾರಗಳು ಕೇಂದ್ರದ ಬಳಿ ಇರಬೇಕಾಗಿಲ್ಲ ಎಂದು ಅವರು ಹೇಳಿದರು. ಮಿಕ್ಕ ಅಧಿಕಾರಗಳ ರಿಯಾಯಿತಿಯನ್ನು ಘಟಕಗಳಿಗೆ ಕೊಡುವ ಮೂಲಕ ಘಟಕಗಳಿಗೆ ಕೋಮು ಪರಿಗಣನೆ ನೀಡುವ ಉದ್ದೇಶವಿತ್ತು. ಆದರೆ ಈಗ ವಿಭಜನೆಯಾಗಿರುವುದರಿಂದ ಭಾರತಕ್ಕೆ ಬಲಯುತ ಕೇಂದ್ರ ಸರ್ಕಾರ ಬೇಕೆಂಬುದು ಸಕಾರಣವಾಗಿದೆ. ಮಾನ್ಯ ಸಭಾಧ್ಯಕ್ಷರೆ, ಸಮಾಜವಾದಿ ಗಣತಂತ್ರ ಒಕ್ಕೂಟದ ಬಗ್ಗೆ ಉಲ್ಲೇಖಿಸುವುದು ಒಂದು ಆಕರ್ಷಕ ವಿಷಯವಾಗಿದೆ, ಅಷ್ಟೆ. ನೀವು ಸೋವಿಯೆತ್ ರಷ್ಯಾದ ರಚನೆ ಹಾಗೂ ಅಭಿವೃದ್ಧಿಯನ್ನು ಕುರಿತು ಅಭ್ಯಸಿಸಿದರೆ ಕಂಡುಬರುವುದೇನು? ಘಟಕಗಳಿಗೆ ನೀಡಿರುವ ಉತ್ತರಾಧಿಕಾರ ಹಾಗೂ ಇತರ ಹಕ್ಕುಗಳು ಕೇವಲ ಸೈದ್ಧಾಂತಿಕ ಹಕ್ಕುಗಳಷ್ಟೆ. ಇಡೀ ದೇಶ ಕಮ್ಯುನಿಸ್ಟ್ ಪಕ್ಷದ ಕಟ್ಟುನಿಟ್ಟಾದ ನಿಷ್ಠುರ ಶಿಸ್ತಿಗೆ ಒಳಪಟ್ಟಿದೆ, ಹೀಗಾಗಿ ಸಮಾಜವಾದಿ ಗಣತಂತ್ರವಾದಿಗಳು ಸ್ವತಂತ್ರರು ಎಂಬಂತೆ ಯಾವಾಗಲೂ ಗಣತಂತ್ರ ಒಕ್ಕೂಟವನ್ನು ಕುರಿತು ಮಾತನಾಡುವುದರಲ್ಲಿ ಯಾವುದೇ ಹುರುಳಿಲ್ಲ. ಈ ಮೊದಲು ಮಾತನಾಡಿದ ಶ್ರೀ ಬಾಲಕೃಷ್ಣ ಶರ್ಮ ಅವರು ಹೇಳಿದಂತೆ ಈ ದೇಶದಲ್ಲಿ ಸಮಾಜವಾದವಿದ್ದರೂ ಕೇಂದ್ರದ ನಿರ್ದೇಶನ

ಹಾಗೂ ಅಧಿಕಾರ ಇರಬೇಕಾದುದು ಅತ್ಯಗತ್ಯ. ಮಾನ್ಯರೆ, ನಾವು ಪ್ರಾರಂಭಿಸಲು ಹೊರಟಿರುವ ಒಕ್ಕೂಟ ವ್ಯವಸ್ಥೆಗೆ ಪ್ರಪಂಚದಲ್ಲಿ ಎಲ್ಲೂ ಪೂರ್ವ ನಿದರ್ಶನವಿಲ್ಲ ಎಂಬುದನ್ನು ನಾವು ಮರೆಯವಂತಿಲ್ಲ. ಈವರೆಗೂ ಬ್ರಿಟಿಷರ ಆಡಳಿತ ವ್ಯವಸ್ಥೆ, ಭಾರತೀಯ ರಾಜ್ಯಗಳೊಂದಿಗಿನ ಅವರ ಒಪ್ಪಂದಗಳಿಂದ ದೇಶದಲ್ಲಿ ಕೇಂದ್ರ ಬಲಶಾಲಿಯಾಗಿತ್ತು. ಒಕ್ಕೂಟವನ್ನು ಅಭಿವೃದ್ಧಿಪಡಿಸಲಾದ ಹಲವು ದೇಶಗಳಲ್ಲಿ, ಸ್ವತಂತ್ರ ಸಾರ್ವಭೌಮ ದೇಶಗಳು ಒಗ್ಗೂಡಿ ಒಕ್ಕೂಟ ರಚಿಸಿವೆ. ಇಲ್ಲಿ ೧೯೩೫ರವರೆಗೂ ವಿಕೇಂದ್ರೀಕರಣ ಹಾಗೂ ಕ್ರಾಂತಿಯ ಪ್ರಸ್ತಾವವೇ ಇತ್ತು. ಎರಡನೆಯದಾಗಿ ಆಗಸ್ಟ್ ೧೫ರವರೆಗೆ ಬ್ರಿಟಿಷ್ ಭಾರತದ ಆಡಳಿತದ ಅಧೀನದಲ್ಲಿದ್ದ ಕೇಂದ್ರ ಹಾಗೂ ಭಾರತೀಯ ರಾಜ್ಯಗಳ ನಡುವಣ ಸಂಬಂಧ ವಿಲಕ್ಷಣವಾಗಿದೆ. ಪ್ರಾರಂಭದಿಂದಲೇ ಪ್ರಾಂತ್ಯಗಳು ಹಾಗೂ ರಾಜ್ಯಗಳ ನಡುವೆ ಏಕರೂಪತೆ ಇರಬೇಕು ಎಂದು ಜನತೆ ಅಸಹನೆ ತೋರುವುದರಿಂದ ಪ್ರಯೋಜನವಿಲ್ಲ. ಏಕೆಂದರೆ ನಾವು ಹೊಚ್ಚ ಹೊಸದಾಗಿ ರಾಜ್ಯ ಕಟ್ಟುತ್ತಿಲ್ಲ. ವ್ಯವಸ್ಥೆ ಆಕರ್ಷಕ ಎನಿಸಿದರೂ ರಾಜಕೀಯದೊಂದಿಗೆ ತರ್ಕ ಮೇಳೈಸಲಾರದು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಉದಾಹರಣೆಗೆ: ಬ್ರಿಟಿಷರಲ್ಲಿ ಅತಾರ್ಕಿಕತೆಯಿದ್ದರೂ ತಮ್ಮ ರಾಷ್ಟ್ರೀಯ ಏಕತೆಯನ್ನು ಬೆಳಗುವ ಕಾರ್ಯವನ್ನು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಮಾಡಬೇಕು. ಕೇಂದ್ರ ಮತ್ತು ಪ್ರಾಂತ್ಯಗಳ ನಡುವಣ ಸಂಬಂಧದ ಪ್ರಶ್ನೆಯನ್ನು ಬರಿಯ ರಾಜಕೀಯ ವ್ಯವಸ್ಥೆ ಹಾಗೂ ಅಧಿಕಾರದ ಪ್ರತ್ಯೇಕೀಕರಣ ಎಂಬ ದೃಷ್ಟಿಯಿಂದ ನೋಡಲಾಗುತ್ತಿದೆ. ಆದರೆ ಆ ಸಂಬಂಧವನ್ನು ಅಂತಿಮವಾಗಿ ತೀರ್ಮಾನಿಸುವ ಅಂಶಗಳೆಂದರೆ ಆರ್ಥಿಕ ಸ್ಥಿತಿಯ ವಾಸ್ತವಾಂಶಗಳು ಹಾಗೂ ಹಣಕಾಸಿನ ವ್ಯವಸ್ಥೆ. ನಾವು ನಮ್ಮ ವಿಚಾರಗಳನ್ನು ೧೯ನೇ ಶತಮಾನದಲ್ಲಿದ್ದ ಬ್ರಿಟನ್ನಿನ ವಿಚಾರಧಾರೆಯನ್ನಾಧರಿಸಿ ಸಂವಿಧಾನ ರೂಪದಲ್ಲಿ ತರಲು ಯತ್ನಿಸುತ್ತಿದ್ದೇವೆ ಎಂದು ನನಗೆ ತೋರುತ್ತದೆ. ಒಕ್ಕೂಟ ವ್ಯವಸ್ಥೆ ಅಥವಾ ಇತರ ಕೆಲವು ಪ್ರಕಾರಗಳ ಸರ್ಕಾರಗಳಲ್ಲಿ ಕೆಲವು ಅಪೇಕ್ಷಣೀಯ ಅಂಶಗಳಿರುವುದನ್ನು ಪರಿಗಣಿಸಿ ನಾವು ಆ ದಿಶೆಯಲ್ಲಿ ಯೋಚಿಸುತ್ತಿದ್ದರೂ ಅದು ಅಪಾಯಕಾರಿ ಮಾರ್ಗ, ನಾವು ಕೆಲವು ಅಂಕಿಅಂಶಗಳನ್ನು ಮಾದರಿಯಾಗಿ ಉದಾಹರಿಸುತ್ತೇವೆ, ಕೆಲವು ವ್ಯವಸ್ಥೆಗಳನ್ನು ಪರಿಗಣಿಸುತ್ತೇವೆ. ಪ್ರಪಂಚದ ಕೆಲವು ಸಂವಿಧಾನಗಳಲ್ಲಿ ಇಂತಿಂಥ ಅಧಿಕಾರಗಳಿಗೆ ಸ್ಥಾನ ನೀಡಿಲ್ಲ; ಆದ್ದರಿಂದ ಅದು ನಮ್ಮ ದೇಶಕ್ಕೆ ಬೇಡ ಎನ್ನುತ್ತೇವೆ. ಇಂಥ ರಾಜಕೀಯ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ಜೋಡಿಸುವ ಪ್ರಯತ್ನದಲ್ಲಿ ಕೆಲ ಅಪಾಯಗಳಿವೆ. ಆಫ್ರಿಕಾದಲ್ಲಿ ಕೋತಿಗಳ ಒಂದು ಪಂಗಡ ತುಂಬಾ ಶ್ರದ್ಧೆಯಿಂದ ಅಲ್ಲಿಯ ಜನರ ಮನೆಗಳನ್ನು ಅನುಕರಿಸಿ ತದನಂತರ ಅವುಗಳ ಮನೆಗಳ ಒಳಗೆ ಇರುವ ಬದಲು ಹೊರಗೆ ವಾಸಿಸಲಾರಂಭಿಸುತ್ತವೆಯಂತೆ. ಬೇರೆ ದೇಶಗಳ ರಾಜಕೀಯ ವ್ಯವಸ್ಥೆಯನ್ನು ನಮ್ಮ ದೇಶಕ್ಕೆ ಜೋಡಿಸಿಕೊಳ್ಳುವುದೂ ಅನುಕರಣೆಯೇ ಆಗಿದ್ದು ಅವಶ್ಯವಿರುವುದನ್ನು ಬಿಟ್ಟುಕೊಟ್ಟು ಅಪಾಯಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ನಾವು ನಮ್ಮ ದೇಶದ ಪರಿಸ್ಥಿತಿಗನುಗುಣವಾದ ವ್ಯವಸ್ಥೆಯನ್ನು ರೂಪಿಸಬೇಕೇ ಹೊರತು ಯಾವುದೋ ಅಮೂರ್ತ ಸಿದ್ಧಾಂತವನ್ನು ಅನುಸರಿಸಲು ಆಗುವುದಿಲ್ಲ. ನಮ್ಮ ದೇಶದ ಸ್ಥಳೀಯ ಅಗತ್ಯಗಳು ಹಾಗೂ ಆಸಕ್ತಿಗಳಿಗೆ ವಿಶಿಷ್ಟ ವ್ಯವಸ್ಥೆ ಬೇಕಾಗುತ್ತದೆ. ಇಷ್ಟು ವಿಶಾಲ ದೇಶ ಹಾಗೂ ವಿಭಿನ್ನ ಬಗೆಯ ಜನರಿಗೆ ಏಕೀಕೃತ ವ್ಯವಸ್ಥೆಯ ಆಳ್ವಿಕೆಯನ್ನು ಯಾರೂ ಸೂಚಿಸುವುದಿಲ್ಲ. ಒಬ್ಬ ಫ್ರೆಂಚ್ ರಾಜಕೀಯ ಚಿಂತಕ ಹೇಳಿರುವಂತೆ ಕೇಂದ್ರೀಕರಣದ ಅತಿರೇಕವೆಂದರೆ ಕೇಂದ್ರಕ್ಕೆ ಅತಿ ಒತ್ತಡ ಉಂಟಾಗಿ ಬಲಹೀನತೆಗೆ ದಾರಿಯಾಗುತ್ತದೆ. ಅನುಚಿತ ಕೇಂದ್ರೀಕರಣ ವ್ಯವಸ್ಥೆಯಿಂದ ಏಕರೂಪತೆಯನ್ನು ಸಾಧಿಸಲಾಗದು. ಈ ದೇಶದಲ್ಲಿ ಏಕರೂಪತೆಯನ್ನು ತರಲು ನಾವು ಬಯಸದೆ, ಕೆಲ ಆವಶ್ಯಕ ವಿಷಯಗಳಲ್ಲಿ ಒಗ್ಗಟ್ಟನ್ನು ರೂಢಿಸಬೇಕು. ಒಟ್ಟಲ್ಲಿ ಹಾಗೂ ಅನ್ಯೈಕ್ಯತಾ ಭಾವನೆಗಳಿರುವುದು ಸಹಜವಾದರೂ, ನಾವು ಅದರ ಬಗ್ಗೆ ಎಚ್ಚರಿಕೆ ವಹಿಸಿ, ಈಗ ಸಾಧಿಸಿರುವುದು ಅತ್ಯಂತ ಅಮೂಲ್ಯ ಎಂದು ಪರಿಗಣಿಸಿ ದೇಶದ ಏಕತೆಯ ಬಗ್ಗೆ ಅರಿವು ಹೊಂದಿರಬೇಕು. ಅದನ್ನು ಜೋಪಾನ ಮಾಡಬೇಕು. ಮಾನ್ಯರೆ, ಆಡಳಿತಾತ್ಮಕ ಏಕತೆ, ಬ್ರಿಟಿಷ್ ಸರ್ಕಾರ ನಮ್ಮ ದೇಶಕ್ಕೆ ನೀಡಿರುವ ದೊಡ್ಡ ಕಾಣಿಕೆ ಎಂಬುದು ಕೆಲವು

ಆಂಗ್ಲಮಿತ್ರರ ವಾದ. ಅದು ಭಾಗಶಃ ನಿಜ. ಆದರೆ ರಾಷ್ಟ್ರೀಯ ಆಂದೋಲನ ಚುರುಕುಗೊಂಡಂತೆಲ್ಲ ಬ್ರಿಟಿಷರು ದೇಶದಲ್ಲಿ ಬಿರುಕು ಮತ್ತು ಅನೈಕ್ಯ ಬೆಳೆಯುವಂತೆ ಉತ್ತೇಜಿಸಿದ್ದರ ಫಲವೇ ಇಂದಿನ ದೇಶ ವಿಭಜನೆ. ದುರ್ದೈವವೆಂದರೆ ಇಂಥ ಅನೈಕ್ಯ ಹಾಗೂ ಪ್ರತ್ಯೇಕೀಕರಣದ ಭಾವನೆಗಳಿಗೆ ನಾವು ಸುಲಭವಾಗಿ ಬಲಿಯಾಗುತ್ತೇವೆ. ವಿಪರ್ಯಾಸವೆನಿಸಬಹುದಾದರೂ ಕೇಂದ್ರ ಬಲಶಾಲಿಯಾಗಿದ್ದರೆ ಯೋಗ್ಯ ರೀತಿಯ ಪ್ರಾಂತೀಯ ಸ್ವಾಯತ್ತತೆಯನ್ನು ರೂಪಿಸಿ ವಿಕೇಂದ್ರೀಕರಣವನ್ನು ಸಾಧಿಸಬಲ್ಲದು. ನಮ್ಮ ಮುಂದೆ ಮಂಡಿಸಲಾಗಿರುವ ಯೋಜನೆಯಲ್ಲಿ ಆರ್ಥಿಕ ಸ್ಥಿತಿಯನ್ನು ನಿಯಂತ್ರಿಸುವ ಅಧಿಕಾರವನ್ನು ಕೇಂದ್ರ ಹಾಗೂ, ಪ್ರಾಂತ್ಯಗಳ ನಡುವೆ ವಿಭಜಿಸಲಾಗಿದ್ದು, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಾಂತ್ಯಗಳ ಅಧಿಕಾರ ಹಾಗೂ ಜವಾಬ್ದಾರಿಗಳಿಗೆ ವ್ಯಾಪಕ ಅವಕಾಶವಿರುತ್ತದೆ. ನಾವು ಈ ಸಮಸ್ಯೆಯನ್ನು ಸಾಮಾನ್ಯ ಜನತೆಯ ಅಗತ್ಯಗಳ ದೃಷ್ಟಿಯಿಂದ ತೂಗಿ ನೋಡಿ, ಅವರನ್ನು ಹೇಗೆ ಸಂತೃಪ್ತಗೊಳಿಸಬೇಕೆಂದು ನಿರ್ಧರಿಸಬೇಕೇ ಹೊರತು ಆಡಳಿತ ಹಾಗೂ ಕುತಂತ್ರದ ರಾಜಕಾರಣದ ಮುಂದೆ ಸೋಲಬಾರದು.

ಈ ಪ್ರಶ್ನೆಯ ಬಗ್ಗೆ ನಿರ್ಧಾರ ಕೈಗೊಳ್ಳಲು ನಮಗಿರುವ ಮಾನದಂಡಗಳು ಎರಡು ಮಾತ್ರ. ದಕ್ಷ ಆಡಳಿತವನ್ನು ಸಾಧಿಸುವುದು ಹೇಗೆ ಮತ್ತು ಜನರ ಸಾಮಾಜಿಕ ಅಗತ್ಯಗಳನ್ನು ನೆರವೇರಿಸುವುದು ಹೇಗೆ? ಪ್ರಾಂತೀಯ ಸರ್ಕಾರಗಳು ಜನರಿಂದ ಬೇಡಿಕೆಯಿರುವ, ಭೌತಿಕ ಅಥವಾ ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುವ ಸ್ಥಿತಿಯಲ್ಲಿದ್ದರೆ, ಜನರ ಅಗತ್ಯಗಳನ್ನು ನೆರವೇರಿಸಬಹುದು.

ಮಾನ್ಯ ಸಭಾಧ್ಯಕ್ಷರೆ, ಆರ್ಥಿಕ ಬಲದಲ್ಲಿ ಹಾಗೂ ಕಾರ್ಯವಿಚಕ್ಷಣತೆಯ ಪರಿಗಣನೆಯಲ್ಲಿ ಕೇಂದ್ರ ಹೆಚ್ಚಿನ ಮಹತ್ತ್ವ ಪಡೆಯುತ್ತದೆ ಎಂಬ ಅಂಶವನ್ನು ನಾವು ಮರೆಯಬಾರದು. ಆರ್ಥಿಕ ಅಭಿವೃದ್ಧಿ ಹಾಗೂ ಸಮಾಜ ಕಲ್ಯಾಣವನ್ನು ಸಮರೋಪಾದಿಯಲ್ಲಿ ಸಂಘಟಿಸಲು ನಾವು ಬಯಸಿದರೆ ಆಗ ಭವಿಷ್ಯದಲ್ಲಿ ದೇಶ ಧನಾತ್ಮಕವೂ ಹಾಗೂ ಸಮಾಜಸೇವಾತತ್ಪರವೂ ಆಗಬೇಕಾಗುತ್ತದೆ. ಈ ಉದ್ದೇಶವನ್ನು ಸಾಧಿಸಬೇಕಾದರೆ ಹೇರಳ ಹಣಕಾಸು ಹಾಗೂ, ಅದಕ್ಕೆ ತಕ್ಕ ಆರ್ಥಿಕ ಸ್ಥಿತಿ ಇರಬೇಕಾಗುತ್ತದೆ.

ಶ್ರೀ ಸಂತಾನಮ್ ಅವರು ಯೋಜನೆಯ ವಿಷಯವು ಸಮವರ್ತಿ ಪಟ್ಟಿಯಲ್ಲಿರುವ ಬಗ್ಗೆ ಆಕ್ಷೇಪಿಸಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಬೇರೇನು ಆಗಿರಲು ಸಾಧ್ಯ? ಕೇಂದ್ರ ಯೋಜನೆಗಳಿರುತ್ತವೆ, ಪ್ರಾಂತೀಯ ಯೋಜನೆಗಳಿರುತ್ತವೆ. ಕೆಲವು ಭಾರತೀಯ ರಾಜ್ಯಗಳಿಗೆ ಅವುಗಳದೇ ಯೋಜನೆಗಳಿರುತ್ತವೆ. ಶ್ರೀ ಕೆ.ಸಿ. ನಿಯೋಗಿಯವರು ಅಧ್ಯಕ್ಷರಾಗಿದ್ದ ಯೋಜನಾ ಸಲಹಾಸಮಿತಿಯು ಈ ವರ್ಷಾರಂಭದಲ್ಲಿ ತನ್ನ ವರದಿ ಸಲ್ಲಿಸಿದ್ದು ಅದರಲ್ಲಿ, ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳೆರಡೂ ಪರಸ್ಪರ ಸಹಕಾರ ಮನೋಭಾವ ತಾಳಿ, ಅಭಿವೃದ್ಧಿಯ ವಿಷಯವನ್ನು ಪರಸ್ಪರಾವಲಂಬಿ ಕಾರ್ಯವೆಂದು ಭಾವಿಸಿ ತಮ್ಮ ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಗೆ ಸಾಮಾನ್ಯ ಕಾರ್ಯನೀತಿಗೆ ಪರಸ್ಪರ ಸಮ್ಮತಿಸಬೇಕು ಎಂದು ತಿಳಿಸಲಾಗಿದೆ ವಾಸ್ತವವಾಗಿ ಯೋಜನೆಯು ಒಂದು ಸಮವರ್ತಿ.....

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಯೋಜನೆಯನ್ನು ಕೇವಲ ಒಂದು ವಿಷಯಾಂಶವಾಗಿ ಪರಿಗಣಿಸದೇ ಸಂವಿಧಾನದಲ್ಲಿ ಆ ಕುರಿತು ಒಂದು ಅಧ್ಯಾಯವನ್ನು ಮೀಸಲಿರಿಸಬೇಕೆಂದು ನನ್ನ ಇಚ್ಛೆಯಾಗಿತ್ತು ಎಂಬುದನ್ನು ಭಾಷಣಕಾರರ ಗಮನಕ್ಕೆ ತರಬಯಸುತ್ತೇನೆ. ಯೋಜನೆಯನ್ನು ಕೇಂದ್ರ ಹಾಗೂ ಪ್ರಾಂತ್ಯಗಳು ಒಟ್ಟಾಗಿ ಮಾಡುವ ಬಗ್ಗೆ ನನಗೆ ಯಾವ ಆಕ್ಷೇಪವೂ ಇರಲಿಲ್ಲ.

**ಶ್ರೀ ಜಿ.ಎಲ್. ಮೆಹ್ತಾ :** ಹಾಗಾದರೆ ರಾಷ್ಟ್ರೀಯ ಯೋಜನೆ ಸಮವರ್ತಿಪಟ್ಟಿಯ ವಿಷಯವಾಗಿರುವ ಬಗ್ಗೆ ನನ್ನ ಸ್ನೇಹಿತರಿಗೆ ಯಾವುದೇ ಆಕ್ಷೇಪಣೆ ಇಲ್ಲವೆನಿಸುತ್ತದೆ. ಯಾವುದೇ ಸಂದರ್ಭದಲ್ಲೂ ಯಾವುದೇ ಉಪಕ್ರಮ, ನಿರ್ದೇಶನ, ಮಾರ್ಗದರ್ಶನ ಕೇಂದ್ರದಿಂದ ಬರಬೇಕು ಮತ್ತು ಘಟಕಗಳು ಅಂಥ ನಿರ್ಧಾರಗಳನ್ನು ಕಾರ್ಯಗತಗೊಳಿಸಬೇಕು. ಆರ್ಥಿಕ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಬೆಳವಣಿಗೆಯಿಂದಾಗಿ ಕೇಂದ್ರ ಹಾಗೂ

ಘಟಕಗಳ ನಡುವಣ ಅಧಿಕಾರ ವಿಭಜನೆ ಹಳೆಯ ಮಾದರಿಯದೆನಿಸುತ್ತದೆ. ಉದಾಹರಣೆಗೆ: ಅಮೆರಿಕದಲ್ಲಿದ್ದ ಟೆನಿಸ್ಸೀ ವ್ಯಾಲಿ ಅಥಾರಿಟಿ ಯೋಜನೆ ಅದರ ಯಶಸ್ಸಿನಿಂದ ಕಂಡುಬಂದ ಅಂಶವೆಂದರೆ ಒಂದು ಒಕ್ಕೂಟ ಏಜನ್ಸಿಯನ್ನು ಪ್ರಾರಂಭಿಸುವುದರಿಂದಾಗಿ ರಾಜ್ಯ ಸರ್ಕಾರದ ಎಂದರೆ ಘಟಕದ ಅಧಿಕಾರಗಳು ಹಾಗೂ ಹಕ್ಕುಗಳು ದುರ್ಬಲವಾಗುತ್ತವೆ ಮತ್ತು ಹಾಳಾಗುತ್ತವೆ ಎಂದು ಭಯಪಡುವುದರಲ್ಲಿ ಅರ್ಥವಿಲ್ಲ ಎಂಬುದು ಮನವರಿಕೆಯಾಗುತ್ತದೆ. ನಾವು, ಉತ್ಪಾದನಾಕಾರ್ಯ ಕೇಂದ್ರದ್ದಾಗಿದ್ದು, ಜವಾಬ್ದಾರಿ ಸ್ಥಳೀಯ ಘಟಕದ್ದಾಗಿರುವಂತೆ ಸಂಘಟಿಸಬಹುದು. ರಚನೆಯ ವಿಧಾನ ಯಾವುದೇ ಆಗಿದ್ದರೂ, ಕೇಂದ್ರ ಹಾಗೂ ಪ್ರಾಂತ್ಯಗಳ ನಡುವಣ ಸಂಬಂಧವು ಆರ್ಥಿಕ ಒತ್ತಡ, ನಿಲುವು ಹಾಗೂ ಹಣಕಾಸಿನ ಲೆಕ್ಕಾಚಾರವನ್ನಾಧರಿಸಿ ನಿರ್ಧಾರವಾಗುತ್ತದೆ. ಇಂದು ವಾಣಿಜ್ಯ, ವ್ಯಾಪಾರ ಹಾಗೂ ಕೈಗಾರಿಕೆಗಳು ಮತ್ತು ಅವು ಹೊಂದಿರುವ ಆರ್ಥಿಕ ಸಂಬಂಧಗಳಿಗೆ ರಾಷ್ಟ್ರೀಯವ್ಯಾಪ್ತಿ ಇದ್ದು. ನಿಯಂತ್ರಣದ ಉದ್ದೇಶಕ್ಕಾಗಿ ಪ್ರಾಂತೀಯ ಹಾಗೂ ಒಕ್ಕೂಟ ವಿಷಯಗಳೆಂದು ವಿಭಜಿಸಲಾಗದು. ಮಾನ್ಯರೆ, ನಿನ್ನೆ ಶ್ರೀ ಸಂತಾನಮ್ ಅವರು ಉದ್ದಿಮೆಗಳನ್ನು ಒಕ್ಕೂಟ ಪಟ್ಟಿಯಲ್ಲಿ ಸೇರಿಸಿರುವ ಬಗ್ಗೆ ಏನನ್ನೋ ಹೇಳಿದರು. ೬ನೇ ಬಾಬಿನಲ್ಲಿ ರಕ್ಷಣಾ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ತಿಳಿಸಲಾಗಿದ್ದು, ಒಕ್ಕೂಟದ ನಿಯಂತ್ರಣದಡಿ ಅಭಿವೃದ್ಧಿಯು ಸಾರ್ವಜನಿಕ ಹಿತದ ದೃಷ್ಟಿಯಿಂದ ಯುಕ್ತವೆಂದು ಒಕ್ಕೂಟ ಕಾನೂನು ಘೋಷಿಸಿದೆ, ಈ ಸಮಸ್ಯೆಯ ಬಗ್ಗೆ ವ್ಯವಹರಿಸುವಲ್ಲಿ ಇದೊಂದೇ ಯೋಗ್ಯಮಾರ್ಗ. ೧೯೪೫ರಷ್ಟು ಹಿಂದೆ ಕೈಗಾರಿಕಾ ಕಾರ್ಯನೀತಿ ಕುರಿತ ಹೇಳಿಕೆಯಲ್ಲಿ ಭಾರತ ಸರ್ಕಾರವು ಕೈಗಾರಿಕಾ ಕ್ಷೇತ್ರದಲ್ಲಿ ಸಾಮಾನ್ಯ ಕಾರ್ಯನೀತಿ ಇರಬೇಕಾದುದು ಉಚಿತವೆಂದು ಅದಕ್ಕಾಗಿ ಅದನ್ನು ಕೇಂದ್ರದ ನಿಯಂತ್ರಣಕ್ಕೆ ತರುವುದು ಅಗತ್ಯವೆಂದು ತಿಳಿಸಿದೆ. ಮುಂಬರುವ ಕೇಂದ್ರ ಸರ್ಕಾರವು ಮಹತ್ತ್ವದ ರಕ್ಷಣಾ ಕೈಗಾರಿಕೆಗಳು ಯಾವುವು, ಅತ್ಯಾವಶ್ಯಕ ಕೈಗಾರಿಕೆಗಳು ಯಾವುವು, ಅಂತರಪ್ರಾಂತೀಯ ಕೈಗಾರಿಕೆಗಳು ಯಾವುವು ಹಾಗೂ ಅವುಗಳನ್ನು ಕೇಂದ್ರದ ನಿಯಂತ್ರಣಕ್ಕೆ ತರಬೇಕೇ ಎಂಬುದನ್ನು ನಿರ್ಧರಿಸುತ್ತದೆಂದು ನಂಬಬಹುದೇ? ದುಡಿಮೆಗೆ ಸಂಬಂಧಿಸಿದ ವಿಷಯಗಳಲ್ಲಿ ಏಕರೂಪತೆ ಇರಬೇಕು ಎಂಬುದು ನಮಗೆಲ್ಲ ಗೊತ್ತು. ಇಲ್ಲವಾದಲ್ಲಿ ಒಂದು ಪ್ರಾಂತ್ಯ ತೀರ ಹಿಂದುಳಿದು ಮತ್ತೊಂದು ಪ್ರಾಂತ್ಯ ತುಂಬ ಮುನ್ನಡೆ ಸಾಧಿಸುವ ಸ್ಥಿತಿ ಉಂಟಾಗುತ್ತದೆ. ಆದ್ದರಿಂದ ರಾಷ್ಟ್ರಮಟ್ಟದಲ್ಲಿ ನಿಯಂತ್ರಣ ಆಗಬೇಕಾಗುತ್ತದೆ. ಕಾರ್ಮಿಕ ಶಾಸನ ಹಾಗೂ ತೆರಿಗೆಗೆ ಸಂಬಂಧಿಸಿದಂತೆ ಬಹುತೇಕ ಭಾರತೀಯ ರಾಜ್ಯಗಳು ನಿಬಂಧನೆಗಳನ್ನು ನಿರೀಕ್ಷಿತ ಮಟ್ಟದಲ್ಲಿ ಪಾಲಿಸದಿರುವುದು ಕಂಡು ಬರುತ್ತಿದ್ದು, ಅದಕ್ಕಾಗಿ ಈಗ ಕೈಗಾರಿಕಾ ಕಾರ್ಯನೀತಿ, ತೆರಿಗೆ ಹಾಗೂ ಕಾರ್ಮಿಕ ಶಾಸನಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಮಾನಕಗಳನ್ನು ನಿಗದಿಪಡಿಸಲು ಪ್ರಯತ್ನಿಸಬೇಕು.

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ನನ್ನ ಸ್ನೇಹಿತರು ಹಸ್ತಪ್ರತಿಯನ್ನು ಓದುತ್ತಿದ್ದಾರೆ. ಇದಕ್ಕೆ ಅನುಮತಿ ಇದೆಯೇ?

**ಶ್ರೀ ಜಿ.ಎಲ್. ಮೆಹ್ತಾ :** ನಾನು ಓದುತ್ತಿಲ್ಲ. ಮಾನ್ಯರೆ, ನಾನು ಓದಬಾರದು ಎಂಬುದು ನಿಮ್ಮ ನಿರ್ಧಾರವಾಗಿದ್ದರೆ...

**ಮಾನ್ಯ ಸಭಾಧ್ಯಕ್ಷರು :** ನನಗೆ ಕಾಣುವಂತೆ, ಅವರು ಓದುತ್ತಿಲ್ಲ, ಕೇವಲ ಟಿಪ್ಪಣಿಗಳನ್ನು ತಮ್ಮೆದುರಿಗೆ ಇರಿಸಿಕೊಂಡಿದ್ದಾರೆ.

**ಶ್ರೀ ಜಿ.ಎಲ್ ಮೆಹ್ತಾ :** ಶ್ರೀ ಎಚ್.ವಿ. ಕಾಮತ್ ಅವರ ವಾಕ್ಪಟುತ್ವಕ್ಕೆ ನಾನು ಸರಿತೂಗಲಾರೆ. ಆತ ಸಮಯಸ್ಫೂರ್ತಿಯಿಂದ ಮಾತನಾಡಬಲ್ಲರು, ನನ್ನನ್ನು ಅನುಸರಿಸುವಂತೆ ನಾನು ಅವರಿಗೆ ಕರೆ ನೀಡುತ್ತೇನೆ.

ಮಾನ್ಯರೆ, ನಮ್ಮ ಅನುಭವಕ್ಕೆ ಬಂದಂತೆ ಯುದ್ಧ ಸಮಯದಲ್ಲಿ ಮತ್ತು ಆ ತರುವಾಯದ ಕಾಲದಲ್ಲಿ ದೇಶದ ಆರ್ಥಿಕ ಐಕ್ಯವನ್ನು ಕಾಪಾಡುವುದರ ಮಹತ್ತ್ವ ಸ್ಪಷ್ಟವಾಗಿದೆ. ಉದಾಹರಣೆಗೆ: ಆಹಾರ ಸಮಸ್ಯೆ. ಅದಕ್ಕೆ ಸಂಬಂಧಿಸಿದಂತೆ ಬೆಲೆ ನಿಯಂತ್ರಣ, ಪಡಿತರ ವ್ಯವಸ್ಥೆ ಅಖಿಲ ಭಾರತ ಮಟ್ಟದಲ್ಲಿ ಇವುಗಳ

ಅಭಿವೃದ್ಧಿ ಹಾಗೂ ಸಂಘಟನೆ ಆಗಬೇಕು. ಇಲ್ಲಿ ಪ್ರಾದೇಶಿಕ ಅಡೆತಡೆ ಪ್ರಾಂತ್ಯಗಳ ನಡುವಣ ಮಾತ್ಸರ್ಯ ಇವುಗಳಿಗೆ ಅವಕಾಶವಾಗಬಾರದು ಈ ಸಮಸ್ಯೆಗಳ ನಿವಾರಣೆಗೆ ಒಂದು ಸಮಗ್ರ ಆರ್ಥಿಕ ಕಾರ್ಯನೀತಿ ಅಗತ್ಯವಿದ್ದು, ಇದು ಕೇವಲ ಭೌತಿಕ ಅಭಿವೃದ್ಧಿಗೆ ಮಾತ್ರವಾಗಿರದೆ ದೇಶದ ಅಸ್ತಿತ್ವಕ್ಕೆ ಸಂಬಂಧಿಸಿದುದಾಗಿದೆ. ನೌಕಾ ವಿಷಯಕ್ಕೆ ಹಾಗೂ ವ್ಯಾಪಾರೀ ನೌಕಾ ತರಬೇತಿ, ವಿಮಾನಯಾನದ ವಿವಿಧ ಶಾಖೆಗಳಲ್ಲಿ ತರಬೇತಿ, ಉನ್ನತ ತಂತ್ರಜ್ಞಾನ ಸಂಸ್ಥೆಗಳ ಆಡಳಿತದಲ್ಲಿ ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣ ಹಾಗೂ ಉನ್ನತ ತಾಂತ್ರಿಕ ಶಿಕ್ಷಣಗಳನ್ನು ಸಮನ್ವಯಗೊಳಿಸಿ ವ್ಯವಹರಿಸುವಲ್ಲಿ ತರಬೇತಿ ಹೀಗೆ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಹಾಗೂ, ಏಕರೂಪದ ಮಾನಕಗಳು ಇಡೀ ದೇಶಕ್ಕೆ ಅನ್ವಯವಾಗುವಂಥ ಕಾರ್ಯನೀತಿ ಹಾಗೂ ಕ್ರಮಗಳ ಅಗತ್ಯವಿದೆ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅಭಿಪ್ರಾಯಪಡುವಂತೆ ಬಲಶಾಲಿ ಕೇಂದ್ರ ಸರ್ಕಾರ ಅಥವಾ ದುರ್ಬಲ ಕೇಂದ್ರ ಸರ್ಕಾರದ ಬಗ್ಗೆ ಚರ್ಚಿಸಿ, ಇತ್ಯರ್ಥಮಾಡಲು ಆಗುವುದಿಲ್ಲ. ನಿರ್ದಿಷ್ಟ ವಿಷಯಗಳ ಆಳಕ್ಕಿಳಿದು ಆ ವಿಷಯ ಅಥವಾ ಕಾರ್ಯವನ್ನು ಕೇಂದ್ರ ಉತ್ತಮವಾಗಿ ನಿರ್ವಹಿಸಬಲ್ಲದೇ ಅಥವಾ ಪ್ರಾಂತ್ಯಗಳು ಉತ್ತಮವಾಗಿ ನಿರ್ವಹಿಸಬಲ್ಲವೇ ಎಂಬ ಬಗ್ಗೆ ಪರಿಶ್ರಮವಹಿಸಿ ಪರಿಶೀಲಿಸಬೇಕು.

ನಾನು ಇನ್ನು ಒಂದೇ ಮಾತನ್ನು ಸೇರಿಸಲಿಚ್ಛಿಸುತ್ತೇನೆ. ಪ್ರಾಂತ್ಯಗಳು ಹೆಚ್ಚಿನ ಅಧಿಕಾರವನ್ನು ಬೇಡುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ಆರ್ಥಿಕ ಅಭಿವೃದ್ಧಿಯಾಗಬೇಕಾದುದು ಅಗತ್ಯವಾಗಿದೆ. ಈ ದೇಶದ ಆರ್ಥಿಕ ಅಸಮತೋಲನವನ್ನು ನಿವಾರಿಸಬೇಕಾಗಿದೆ. ನಾವು ಪ್ರಾದೇಶಿಕ ಯೋಜನೆ ತಯಾರಿಸಬೇಕು, ಹೆಚ್ಚು ಹಿಂದುಳಿದಿರುವ ಅಭಿವೃದ್ಧಿ ಹೊಂದದಿರುವ ಪ್ರದೇಶಗಳಿಗೆ ಆದ್ಯತೆ ನೀಡಬೇಕು. ಇಲ್ಲಾದರೆ ಅಲ್ಲಿಯ ಕೆಳಸ್ತರದ ಜೀವನ ಮತ್ತು ರಾಷ್ಟ್ರೀಯ ವರಮಾನ ಬೇರೆ ಭಾಗಗಳ ಉನ್ನತ ಸ್ತರವನ್ನು ಹಾಳುಮಾಡುತ್ತವೆ. ಪ್ರಾಂತ್ಯ ಪ್ರಾಂತ್ಯಗಳ ನಡುವಣ ಅಸಹನೆಯನ್ನು ತಡೆಯಲು ಇಡೀ ದೇಶಕ್ಕೆ ಅನ್ವಯವಾಗುವಂತೆ ಆರ್ಥಿಕ ಅಭಿವೃದ್ಧಿಯ ಸಂತುಲಿತ ಯೋಜನೆಯನ್ನು ಮಾಡುವುದು ಅಗತ್ಯ. ಆದರೆ ಮತ್ತೆ ಇದನ್ನು ನಿರ್ವಹಿಸಬೇಕಾದ ಪ್ರಾಧಿಕಾರ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ಒಂದು ರಾಷ್ಟ್ರೀಯ ಪ್ರಾಧಿಕಾರವಿದ್ದು ಅದು ಸಂಪನ್ಮೂಲಗಳನ್ನು ಹಂಚಿಕೆ ಮಾಡಿ, ಆದ್ಯತೆಗಳನ್ನು ನಿರ್ಧರಿಸಿ, ಬೇರೆ ಬೇರೆ ಯೋಜನೆಗಳಲ್ಲಿ ಸಮನ್ವಯ ಕಲ್ಪಿಸುವಂತಿದ್ದರೆ ಮಾತ್ರ ನಾವು ದೇಶದ ಕಡಿಮೆ ಅಭಿವೃದ್ಧಿಯಾಗಿರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸಾಧ್ಯ. ಕೊನೆಯಲ್ಲಿ ನಾನು, ಶ್ರೀ ಕಾಮತ್ ಅವರ ಆಕ್ಷೇಪಣೆ ಇರುವುದಿಲ್ಲವೆಂದು ಆಶಿಸುತ್ತ ಕೆನಡಾದ ಆಧಿಪತ್ಯ ಮತ್ತು ಪ್ರಾಂತ್ಯಗಳ ನಡುವಣ ಸಂಬಂಧಗಳನ್ನು ಕುರಿತ ರಾಯಲ್ ಕಮಿಷನ್‌ನ ವರದಿಯ ಒಂದು ಭಾಗವನ್ನು ಓದಿ ತೋರಿಸುತ್ತೇನೆ:

> "ರಾಷ್ಟ್ರೀಯ ಏಕತೆ ಹಾಗೂ ಪ್ರಾಂತೀಯ ಸ್ವಾಯತ್ತತೆ ಇವೆರಡು ಜನತೆಯ ನಿಷ್ಠೆಯ ದೃಷ್ಟಿಯಿಂದ ಪರಸ್ಪರ ಸ್ವಾರ್ಥಿಗಳೆಂದು ಭಾವಿಸಬಾರದು. ಏಕೆಂದರೆ ಅವೆರಡೂ ಪ್ರಜ್ಞಾವಂತ ಒಕ್ಕೂಟ ವ್ಯವಸ್ಥೆಯ ಎರಡು ಮುಖಗಳು ರಾಷ್ಟ್ರೀಯ ಏಕತೆ ಪ್ರಾಂತೀಯ ಸ್ವಾಯುತ್ತತೆಯನ್ನು ಆಧರಿಸಿದ್ದು, ಅಂತೆಯೇ ಇಡೀ ದೇಶದಲ್ಲಿ ರಾಷ್ಟ್ರೀಯ ಏಕತೆ ಇಲ್ಲದಿದ್ದರೆ ಪ್ರಾಂತೀಯ ಸ್ವಾಯತ್ತತೆಯೂ ಇರುವುದಿಲ್ಲ."

**ಒಬ್ಬ ಗೌರವಾನ್ವಿತ ಸದಸ್ಯರು :** ಮುಕ್ತಾಯ.

**ಶ್ರೀ ಎ. ರಾಮಸ್ವಾಮಿ ಮುದಲಿಯಾರ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ತುಸು ಹಿಂಜರಿಕೆಯಿಂದಲೇ ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇನೆ. ರಾಜ್ಯಗಳನ್ನು ಕುರಿತು ಮಾತನಾಡಬೇಕಾದುದು ನನ್ನ ಪ್ರಾಥಮಿಕ ಜವಾಬ್ದಾರಿಯಾಗಿದ್ದರೂ ನಾನು ಅವುಗಳ ಪರವಾಗಿ ಮಾತ್ರ ಮಾತನಾಡುತ್ತೇನೆಂದು ತಿಳಿಯಬಾರದು. ಸಭೆಯು ನನಗೆ ಒಕ್ಕೂಟದ ಎಲ್ಲ ಘಟಕಗಳನ್ನು ಕುರಿತು ಮಾತನಾಡಿ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ನನ್ನ ನೇರ ಅಭಿಪ್ರಾಯವನ್ನು ತಿಳಿಸಲು ಅನುಮತಿಸುವುದೆಂದು ಭಾವಿಸುತ್ತೇನೆ. ಈ ಸಭೆಯಲ್ಲಿರುವ ಪ್ರತಿಯೊಬ್ಬ ಸದಸ್ಯರ ಭಾವನೆಗಳನ್ನು ನಾನು ಅರ್ಥಮಾಡಿಕೊಂಡಿರುವ ಮೇರೆಗೆ ಯಾರೊಬ್ಬರೂ

ಕೇಂದ್ರವು ಬಲಶಾಲಿಯಾಗಿರಬಾರದು ಎಂಬ ಅಭಿಪ್ರಾಯ ಹೊಂದಿಲ್ಲ ಎಂಬುದನ್ನು ನಾನು ಮೊಟ್ಟಮೊದಲು ತಿಳಿಸುತ್ತೇನೆ. ಇದು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವಣ ಹಗ್ಗ ಜಗ್ಗಾಟವಲ್ಲ. ಬಲಶಾಲಿಯಾಗಿರುವ, ದೃಢವಾದ ತನ್ನ ವಿವೇಚನಾನುಸಾರ ಕಾರ್ಯನೀತಿಗಳನ್ನು ಕಾರ್ಯಗತಗೊಳಿಸಲು ಹೆದರದಿರುವ ಕೇಂದ್ರದ ಅಗತ್ಯದ ಬಗ್ಗೆ ವಿಮರ್ಶಿಸುವ ಪ್ರಶ್ನೆ ಇಲ್ಲ. ನಮಗೆ ಅಂಥ ಕೇಂದ್ರ ಸರ್ಕಾರ ಬೇಕು. ಈ ಆಧಿಪತ್ಯಕ್ಕೆ ಸೇರಿರುವ ರಾಜ್ಯಗಳು ಯಾವುದೇ ಮಾನಸಿಕ ನಿರ್ಬಂಧ ಹೊಂದಿಲ್ಲ (ಘೋಷಾನುಮೋದನೆ) ಈ ಒಕ್ಕೂಟವನ್ನು ಯಶಸ್ವಿಗೊಳಿಸುವ ಇಚ್ಛೆಯಿಂದ ಮತ್ತು ರಾಷ್ಟ್ರಗಳ ಸಮೂಹದ ಮಧ್ಯೆ ಈ ಒಕ್ಕೂಟಕ್ಕೆ ಘನತೆಯ ಸ್ಥಾನ ಸಿಗಬೇಕೆಂಬ ಕಾತರತೆಯಿಂದ ಪ್ರತಿನಿಧಿಗಳು ಅಂತಾರಾಷ್ಟ್ರೀಯ ಸಮಾವೇಶಗಳಲ್ಲಿ ನಾವು ಈ ಆಧಿಪತ್ಯಕ್ಕೆ ಸೇರಿದ್ದೇವೆ ಎಂದು ಅಧಿಕಾರಯುತವಾಗಿ ಘೋಷಿಸಿ ಪೌರುಷ ಮೆರೆಯಬೇಕು. (ಭಾರಿ ಘೋಷಾನುಮೋದನೆ). ಆದ್ದರಿಂದ ಮಾನ್ಯರೆ, ಈ ಸದನದಲ್ಲಿ ಒಂದು ರಾಜ್ಯವನ್ನು ಪ್ರತಿನಿಧಿಸುವ ಅಥವಾ ಅದರ ಪರವಾಗಿ ಮಾತನಾಡುವ ಅಥವಾ ಒಂದು ಘಟಕವನ್ನು ಪ್ರತಿನಿಧಿಸುವ ಅಥವಾ ಅದರ ಪರವಾಗಿ ಮಾತನಾಡುವ, ಯಾರೊಬ್ಬರೂ ಕೇಂದ್ರದ ಕೆಲಸವನ್ನು ಅಥವಾ ಅಧಿಕಾರವನ್ನು ಅಥವಾ ಅದು ಚಲಾಯಿಸಬೇಕಾದ ಅಧಿಕಾರವನ್ನು ಕಡಿಮೆಗೊಳಿಸುವ ಇಚ್ಛೆ ಹೊಂದಿಲ್ಲ. ಹಾಗಿದ್ದರೂ ಪ್ರಾಂತೀಯ ಸ್ವಾಯತ್ತತೆಯನ್ನು ಕುರಿತು ಯಾವಾಗಲಾದರೂ ಧ್ವನಿ ಕೇಳಿಬಂದರೂ, ಪ್ರಾಂತೀಯ ಸ್ವಾಯತ್ತತೆ ಎಂಬುದು ಕೇವಲ ಅಪಪ್ರಯೋಗ ಅಷ್ಟೆ. ಅಧಿಕಾರಗಳನ್ನು ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ಹಂಚಲಾಗಿದೆ ಎಂದು ತಿಳಿಯಬೇಕು. ಯಾವಾಗಲಾದರೂ ಆ ಕುರಿತು ಪಿಸುಮಾತು ಕೇಳಿಬಂದರೂ ಸಭೆಯು ಅದರ ಪರ ಯೋಚಿಸಬೇಕಾದ ಮತ್ತೊಂದು ವಿಷಯವೆಂಬಂತೆ ಪರಿಗಣಿಸಬೇಕು. ಈ ಯೋಜನೆಯ ಅರ್ಥ ಹಾಗೂ ಉದ್ದೇಶವನ್ನು ಪೂರ್ಣವಾಗಿ ಹಾಗೂ ಸಮಗ್ರವಾಗಿ ಅರ್ಥಮಾಡಿಕೊಳ್ಳುವುದಕ್ಕೆ ಮುಂಚೆ ಆ ಬಗ್ಗೆ ಆಮೂಲಾಗ್ರವಾಗಿ ಅಭ್ಯಸಿಸಬೇಕು, ಮಾನ್ಯರೆ, ಕೇಂದ್ರ ಸರ್ಕಾರದ ಸದಸ್ಯರಾಗಿ ಅಲ್ಲದಿದ್ದರೂ ಈ ಸಭೆಯ ಸಭಾಧ್ಯಕ್ಷರಾಗಿ ನೀವು ನನ್ನ ಮಾತನ್ನು ಒಪ್ಪುತ್ತೀರೆಂದು ಭಾವಿಸುತ್ತೇನೆ. ಕೇಂದ್ರದ ಆಡಳಿತಗಾರರಿಗಿರುವಷ್ಟೆ ತಲೆನೋವು ಘಟಕಗಳ ಆಡಳಿತಗಾರರಿಗೂ ಇರುತ್ತವೆ. ಅವರ ಕ್ಷೇತ್ರದಲ್ಲಿ ಅವರು ಎದುರಿಸುವ ಸಮಸ್ಯೆಗಳು ತೀವ್ರ ಗಂಭೀರ ಹಾಗೂ ಕಠಿಣ ಬೃಹತ್ ಆರ್ಥಿಕ ಸಮಸ್ಯೆಗಳು, ತೃಪ್ತಿಪಡಿಸಲು ಆಗದಂಥ ಆಕಾಂಕ್ಷೆ, ನಿರೀಕ್ಷೆ, ಆಸೆಗಳು ಪೂರೈಸಲಾಗದಂಥವಿರುತ್ತವೆ. ವ್ಯಕ್ತಿಗೆ ಸಂತೋಷ ಕಲ್ಪಿಸುವ ಇಂಥ ಚಟುವಟಿಕೆಗಳ ಹೊಣೆ ಪ್ರಾಂತ್ಯ ಅಥವಾ ಘಟಕದ ಆಡಳಿತದ ಮೇಲಿರುತ್ತದೆಯೇ ಹೊರತು ಕೇಂದ್ರ ಆಡಳಿತದ ಹೊಣೆಯಾಗಿರುವುದಿಲ್ಲ. ಪ್ರಾಂತ್ಯದಲ್ಲಿರುವ ನಿಮ್ಮ ಮೇಲೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹೊಣೆ ಇದ್ದು ಅದು ನಿಮಗೆ ನೀವೆ ವಿಧಿಸಿಕೊಂಡಿರುವ ಹೊಣೆಯಾಗಿರುತ್ತದೆ. ಸೂಕ್ತವಾದ ವೈದ್ಯಕೀಯ ನೆರವು ನೈರ್ಮಲ್ಯ ವ್ಯವಸ್ಥೆ ಆರೋಗ್ಯ ಸಂವರ್ಧನೆ ನಮ್ಮ ದೇಶದಲ್ಲಿ ಈವರೆಗಿದ್ದ ಸರಾಸರಿ ಆಯುಸ್ಸು ೨೫ರಿಂದ ೨೭ ವರ್ಷಗಳಿರುವ ಮಿತಿಯನ್ನು ವಿಸ್ತೃತಗೊಳಿಸುವುದು ಇವೆಲ್ಲ ಜವಾಬ್ದಾರಿಗಳಿರುತ್ತವೆ. ಸರಿಯಾದ ವಸತಿ ಸೌಕರ್ಯ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲಾಗಿರುವ ಬಗ್ಗೆ ನೋಡಬೇಕಾಗುತ್ತದೆ. ಪ್ರಾಂತೀಯ ಆಡಳಿತದ ಮೇಲೆ ಈ ಎಲ್ಲ ಹೊರೆ ಇರುತ್ತದೆ. ಈ ಜವಾಬ್ದಾರಿಯ ಹೊರೆಯಿಂದಾಗಿ ಘಟಕಗಳ ಆಡಳಿತಗಾರರು, ಅಧಿಕಾರಗಳ ಹಂಚಿಕೆಯಲ್ಲಿ ಅದರಲ್ಲೂ ವಿಶೇಷವಾಗಿ ತೆರಿಗೆ ಸಂಬಂಧದಲ್ಲಿ ತಮಗೆ ಆ ಹೊರೆಗಳ ನಿರ್ವಹಣೆಗೆ ಸಾಕಷ್ಟು ಸಂಪನ್ಮೂಲಗಳು ಲಭ್ಯವಿರುವುದಿಲ್ಲವೆಂದು ಭಾವಿಸುತ್ತದೆ. ಕೇಂದ್ರ ಸರ್ಕಾರ ಬಲವಾಗಿರಬೇಕೆಂದು ಪ್ರಸ್ತಾವಿಸಿದರೆ ನಾವು ಉತ್ತಮ ದೇಶಪ್ರೇಮಿಗಳೆನಿಸಿಕೊಳ್ಳುತ್ತೇವೆಂದು ನಮ್ಮ ಬೆನ್ನನ್ನು ನಾವು ತಟ್ಟಿಕೊಳ್ಳಬೇಕಿಲ್ಲ. ಇದರ ಬಗ್ಗೆ ಪರಿಶೀಲನೆಯಾಗಬೇಕೆನ್ನುವವರಲ್ಲಿ ರಾಷ್ಟ್ರೀಯ ಸ್ಫೂರ್ತಿ ಅಥವಾ ದೇಶಾಭಿಮಾನ ಸಾಕಷ್ಟಿಲ್ಲವೆಂದು ಭಾವಿಸಬೇಕಿಲ್ಲ. ಆದ್ದರಿಂದ ನನ್ನ ಸ್ನೇಹಿತರಾದ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್, ಶ್ರೀ ಜಿ.ಎಲ್ ಮೆಹ್ತಾ ವ್ಯಕ್ತಪಡಿಸಿದ ಭಾವನೆಗಳನ್ನೇ ನಾನೂ ಪುನರುಚ್ಚರಿಸಿದ್ದು, ಈಗ ಚರ್ಚೆಯಾಗಬೇಕಾಗಿರುವ,

ವಿಶ್ಲೇಷಣೆಯಾಗಬೇಕಾದ ವಿಷಯ ಬಲಶಾಲಿ ಅಥವಾ ದುರ್ಬಲ ಕೇಂದ್ರ ಅಥವಾ ಕೇಂದ್ರ ಒಕ್ಕೂಟ ಮತ್ತು ಪ್ರಾಂತ್ಯಗಳ ನಡುವೆ ಜವಾಬ್ದಾರಿ ಮತ್ತು ಪರಮಾಧಿಕಾರದ ವಿಭಜನೆಯ ವಿಶೇಷವಾಗಿರದೆ ಕೇಂದ್ರ ಅಧಿಕಾರಗಳ ಸಮಿತಿಯು ಈ ವರದಿಯಲ್ಲಿ ಕಲ್ಪಿಸಿರುವ ಸಂಪನ್ಮೂಲಗಳನ್ನು ಕುರಿತ ವಿಷಯ. ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ನನಗೆ ಮೆಚ್ಚುಗೆಯಾದ ಅಂಶವೆಂದರೆ ನನ್ನ ಸ್ನೇಹಿತ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಒಕ್ಕೂಟವನ್ನು ಕುರಿತು ಪಠ್ಯಪುಸ್ತಕಗಳಲ್ಲಿ ಸಂವಿಧಾನಗಳಲ್ಲಿ ಹೇಳಲಾಗಿರುವ ಸೈದ್ಧಾಂತಿಕ ವಿವರಗಳನ್ನು ಒತ್ತಟ್ಟಿಗಿರಿಸಿ, ಈ ಪೇಪರ್‌ನಲ್ಲಿರುವ ಪ್ರಸ್ತಾವದ ಬಗ್ಗೆ ಮನಸ್ಸುಗೊಟ್ಟು ಯೋಚಿಸಿ ಪ್ರಸ್ತಾವವನ್ನು ವಿಶ್ಲೇಷಿಸಬೇಕೆಂದು ಹೇಳಿದರು. ಆ ದೃಷ್ಟಿಯಿಂದ ನಾನು ಈ ಪ್ರಸ್ತಾವಗಳ ಬಗ್ಗೆ ಪರಿಶೀಲಿಸಲು ತೊಡಗುತ್ತೇನೆ.

ಘಟಕದ ದೃಷ್ಟಿಯಿಂದ ಈ ಸಮಸ್ಯೆಯನ್ನು ಅಧ್ಯಯನ ಮಾಡಿದವರಿಗೆ ಕಂಡುಬಂದ ಮಹತ್ತ್ವದ ಅಂಶವೆಂದರೆ ಅದರ ತೆರಿಗೆ ಪ್ರಸ್ತಾವಗಳು. ನಾನು ಈ ಮೊದಲು ಹೇಳಿದ್ದನ್ನೇ ಈಗ ಪುನರುಚ್ಚರಿಸುತ್ತಿದ್ದೇನೆ. ಘಟಕಗಳ ಮೇಲಿರುವ ದೊಡ್ಡ ಹೊಣೆಯೆಂದರೆ ರಾಷ್ಟ್ರನಿರ್ಮಾಣ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದು. ಇವು ರಾಷ್ಟ್ರನಿರ್ಮಾಣ ಚಟುವಟಿಕೆಗಳಾಗಿರುವುದರಿಂದ, ಅವುಗಳಿಗೆ ಅವಕಾಶ ಕಲ್ಪಿಸುವ ನೇರ ಹೊಣೆ ಘಟಕಗಳದ್ದೇ ಹೊರತು ಕೇಂದ್ರದ್ದಲ್ಲ ಏಕೆಂದರೆ ದೇಶದ ರಕ್ಷಣೆಯ ದೊಡ್ಡ ಹೊಣೆ ಕೇಂದ್ರದ ಮೇಲಿರುತ್ತದೆ. ಕಷ್ಟಪಟ್ಟು ಗಳಿಸಿರುವ ಸ್ವಾತಂತ್ರ್ಯವನ್ನೇ ನಾವು ಕಳೆದುಕೊಂಡರೆ ಹೇಗೆ? ಅದರಷ್ಟು ಅಮೂಲ್ಯವಾದದ್ದು ಬೇರಾವುದು ಇಲ್ಲ. ದೇಶ ರಕ್ಷಣೆಗೆ ಅಗತ್ಯವಿರುವ ಎಲ್ಲ ಅಧಿಕಾರ ಕೇಂದ್ರಕ್ಕೆ ಇರಬೇಕು ದೇಶವನ್ನು ರಕ್ಷಿಸುವ ಪ್ರಾಥಮಿಕ ಗುರಿಯನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಸಂಪನ್ಮೂಲಗಳು ಕೇಂದ್ರಕ್ಕೆ ಸಿಗಬೇಕು ಆ ಬಗ್ಗೆ ಮರುಪ್ರಶ್ನೆಯೇ ಇಲ್ಲ. ಆದರೆ ಇದಕ್ಕೆ ಇನ್ನೊಂದು ಮುಖವಿದೆ, ರಾಷ್ಟ್ರವನ್ನು ಪ್ರತಿನಿಧಿಸುವ ಪ್ರಜೆ ಬಲಶಾಲಿಯಾಗಿದ್ದರೆ, ಉತ್ತಮ ಆಹಾರ, ಶಿಕ್ಷಣ ಪಡೆಯುತ್ತಿದ್ದರೆ, ದೇಶದ ಗಣ್ಯವ್ಯಕ್ತಿಗಳಾಗಿ ಕಾಣಿಸಿಕೊಳ್ಳುವಂತಿದ್ದರೆ ದೇಶವೂ ಬಲಶಾಲಿಯಾಗುತ್ತದೆ. ಹೀಗೆ ಮಾಡುವ ಹೊಣೆ ಪ್ರಾಂತ್ಯಗಳದೇ ಹೊರತು ಕೇಂದ್ರದ್ದಲ್ಲ.

ಮಾನ್ಯರೆ, ತೆರಿಗೆ ಪ್ರಸ್ತಾವಗಳನ್ನು ಹಾಗೂ ಪ್ರಾಂತ್ಯಗಳಿಗೆ ನೀಡಲಾಗಿರುವ ಅಧಿಕಾರಿಗಳನ್ನು ಪರಿಶೀಲಿಸೋಣ. ಅವುಗಳನ್ನು ४೦ರಿಂದ ೫೮ನೇ ಬಾಬಿನವರೆಗೆ ಬಾಬು ರೀತಿ ವರ್ಗೀಕರಿಸಲಾಗಿದೆ. ಪ್ರಾಂತ್ಯಕ್ಕೆ ಇದಕ್ಕಿಂತ ಹೆಚ್ಚು ಇನ್ನೇನು ಬೇಕು? ತೆರಿಗೆಯ ೧೮ ಬಾಬುಗಳಿವೆ. ಅವುಗಳನ್ನು ಪರೀಶೀಲಿಸೋಣ, ನಾನು ಬಾಬುವಾರು ಅವುಗಳನ್ನು ವಿಶ್ಲೇಷಿಸತೊಡಗಿದರೆ ಸದನವು ಅನ್ಯಥಾ ಭಾವಿಸುವುದಿಲ್ಲವೆಂದು ತಿಳಿಯುತ್ತೇನೆ. ೧ನೇ ಬಾಬು ಭೂಕಂದಾಯ. ಹಲವಾರು ವರ್ಷಗಳಿಂದ ಭೂಕಂದಾಯ ಪರಿಷ್ಕರಣೆ ವಿರುದ್ಧ ದಂಗೆ, ಹಾಗೂ ಸಾಧ್ಯವಾದಷ್ಟು ಭೂಕಂದಾಯವನ್ನು ತೆಗೆದುಹಾಕುವ ಬಗ್ಗೆ ದಂಗೆ ನಡೆಯುತ್ತಿದೆ. ಪ್ರೌಢ ಮಾತದಾನದ ಮೂಲಕ ಚುನಾಯಿತರಾದ ಪ್ರಧಾನಿ ಹಾಗೂ ಪ್ರಾಂತ್ಯಗಳ ಸಚಿವರಿಗೆ ಪರಿಷತ್ತಿನಲ್ಲಿ ಇಡೀ ಚುನಾಯಿತ ಪ್ರಾಧಿಕಾರದ ಬೆಂಬಲವೇ ಇದ್ದರೂ ಭೂಕಂದಾಯ ಏರಿಕೆ ಕಷ್ಟಕರವಾಗಿ ಪರಿಣಮಿಸಿದೆ. ಈ ಪ್ರತಿಭಟನೆಯಲ್ಲಿ ಪ್ರಧಾನಿ ಏನು ಮಾಡಬೇಕು? ಭೂಕಂದಾಯವು ಸಂವರ್ಧನೆಯ ಬಾಬು. ಇನ್ನು ಮುಂದೆ ಕಡಿಮೆಯಾಗುತ್ತದೆ. ದೊಡ್ಡ ಸ್ವತ್ತಾಗಿ ಉಳಿಯುವುದಿಲ್ಲ. ಇನ್ನು ४೧ನೇ ಬಾಬನ್ನು ನೋಡೋಣ ಅದರಲ್ಲಿ ಆಲ್ಕೊ ಮದ್ಯ, ಅಫೀಮು, ಔಷಧೀಯ ಹಾಗೂ ಪ್ರಸಾಧನ ಸರಕುಗಳ ಮೇಲಿನ ಅಬಕಾರಿ ಸುಂಕ ಸೇರುತ್ತವೆ. ಮದ್ಯ ಕೇಂದ್ರದಿಂದ ನಿಷೇಧಾಜ್ಞೆಗೆ ಒಳಪಟ್ಟಿದ್ದು ಅದನ್ನು ಬಹುಪಾಲು ಪ್ರಾಂತ್ಯಗಳು ಅಂಗೀಕರಿಸಿದ್ದು ಇಷ್ಟೇ ಅಲ್ಲ ಸಾರ್ವಜನಿಕ ಅಭಿಪ್ರಾಯ ಹಾಗೂ, ಕೇಂದ್ರದ ಆಜ್ಞೆಯ ಮೇರೆಗೆ ನಿಷೇಧಕ್ಕೆ ಗುರಿಯಾಗಿರುವಾಗ ಅದರಿಂದ ಎಷ್ಟು ಆದಾಯವನ್ನು ನಿರೀಕ್ಷಿಸಬಹುದು? ಅಫೀಮು ಕೂಡ ಕೇಂದ್ರದ ನಿಯಂತ್ರಣಕ್ಕೆ ಹಾಗೂ ಅಂತಾರಾಷ್ಟ್ರೀಯ ಸಮಾವೇಶಗಳ ನಿಯಂತ್ರಣಕ್ಕೆ ಒಳಪಟ್ಟಿದೆ. ಅದರಿಂದ ಬರುವ ಆದಾಯವೂ ಮರೆಯಾಗುವುದು ಸಹಜ. ಆದ್ದರಿಂದ ಪ್ರಾಂತ್ಯಗಳಿಗೆ ಆದಾಯ ಮೂಲವೆಂದು ಪಟ್ಟಿಯಲ್ಲಿ ಗುರುತಿಸಿರುವ ४೧ನೇ ಬಾಬನ್ನು

ತೆಗೆದುಹಾಕಬೇಕಾಗುತ್ತದೆ. ಮುಂದಿನ ಅಂಶ ಕೃಷಿವರಮಾನ ಮೇಲಿನ ತೆರಿಗೆ. ಆ ಬಾಬನ್ನು ನಾನು ಕೃಷಿಭೂಮಿ ಸಂಬಂಧದ ಎಸ್ಟೇಟ್ ಸುಂಕ ಹಾಗೂ ಕೃಷಿಭೂಮಿಗಳ ಉತ್ತರಾಧಿಕಾರ ಸಂಬಂಧದ ಸುಂಕಗಳೊಂದಿಗೆ ತೆಗೆದುಕೊಳ್ಳುತ್ತೇನೆ. ಜಮಿನ್ದಾರಿ ರದ್ದತಿ ಪ್ರಶ್ನೆ ಚರ್ಚೆಯಾಗುತ್ತಿರುವುದರಿಂದ, ಅದು ಸದ್ಯದಲ್ಲೇ ಕಾರ್ಯಗತವಾಗಲಿದೆ. ದೊಡ್ಡ ಭೂಹಿಡುವಳಿಗಳ ವಿಭಜನೆ ಜಾರಿಯಾದಾಗ ರೈತನ ಒಡೆತನವೂ ಜಾರಿಯಾಗುತ್ತದೆ, ತತ್ಪರಿಣಾಮವಾಗಿ ಕೃಷಿಭೂಮಿಯ ಮೇಲಿನ ತೆರಿಗೆ ಅತ್ಯಂತ ಗೌಣ–ಆದಾಯ ಮೂಲವಾಗುತ್ತದೆ. ಅದನ್ನು ಕೃಷಿಭೂಮಿ ಸಂಬಂಧದ ಎಸ್ಟೇಟ್ ಸುಂಕದೊಡನೆ ತೆಗೆದುಕೊಂಡರೆ ಎರಡರಿಂದ ನಾಲ್ಕು ಏಕರೆ ಭೂಹಿಡುವಳಿ ಹೊಂದಿರುವ ರೈತ ಒಡೆಯನಿಂದ ಎಷ್ಟು ಸುಂಕ ಸಂಗ್ರಹವಾದೀತು?

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ :** ಕೃಷಿಗೆ ಹೊರತಾದ ಭೂಮಿಯ ಸಂಬಂಧದ, ಎಸ್ಟೇಟ್ ಸುಂಕವನ್ನು ಕೇಂದ್ರವು ವಸೂಲಿ ಮಾಡಿದರೂ ಅದು ಪ್ರಾಂತ್ಯದ ವರಮಾನ ಮೂಲವಾಗುತ್ತದೆ.

**ಶ್ರೀ ಎ. ರಾಮಸ್ವಾಮಿ ಮುದಲಿಯಾರ್ :** ಈ ಪ್ರಶ್ನೆಯನ್ನು ಕುರಿತು ವರದಿಯಲ್ಲಿ ವಿವರಿಸಿದ ವಿಷಯ ನನಗೆ ಗೊತ್ತು ಮತ್ತು ಆ ಬಗ್ಗೆ ಈಗ ಉಲ್ಲೇಖಿಸುತ್ತೇನೆ. ನನ್ನ ಅಭಿಪ್ರಾಯದಂತೆ ಕೃಷಿಭೂಮಿಯ ಮೇಲಿನ ಎಸ್ಟೇಟ್ ಸುಂಕ ಎಂಬುದು ತಪ್ಪು ಪ್ರಯೋಗ ಅಷ್ಟೆ. ನೀವು ತೆರಿಗೆ ವಿಧಿಸುವ ಸ್ಥಿತಿಯಲ್ಲಿದ್ದರೂ ಅದು ನಿಮಗೆ ಸಿಗುವುದಿಲ್ಲ. ಬೆಂಕಿಗೂಡಿನ ಮತ್ತು ಕಿಟಕಿಗಳ ಮೇಲಿನ ತೆರಿಗೆಯ ವಿಷಯ ೧೯೩೫ರ ಅಧಿನಿಯಮದಲ್ಲಿದೆ. ಕೆಲವು ಬುಡಕಟ್ಟು ಪ್ರದೇಶಗಳಲ್ಲಿ ಸ್ಥಳೀಯ ನಿಕಾಯಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವಿದೆ. ಯಾವುದೇ ಸಂದರ್ಭದಲ್ಲೂ ಇದು ಪ್ರಾಂತ್ಯಗಳು ನಿರೀಕ್ಷಿಸುವ ಪ್ರಮಾಣದ ತೆರಿಗೆಯಲ್ಲ. ಇದು ಸ್ಥಳೀಯ ನಿಕಾಯಗಳ ತೆರಿಗೆಯೇ ಹೊರತು ಪ್ರಾಂತ್ಯದ ಆದಾಯದ ಮೂಲವಲ್ಲ. ಕೃಷಿಭೂಮಿಯ ಮೇಲಿನ ತೆರಿಗೆ ಸಂಬಂಧದ ಸುಂಕ ಹಾಗೂ ಎಸ್ಟೇಟ್ ಸುಂಕದ ಬಗ್ಗೆ ನಾನು ಈಗಾಗಲೇ ತಿಳಿಸಿದ್ದೇನೆ. (೪೬) ಖನಿಜ ಹಕ್ಕುಗಳ ಮೇಲಿನ ತೆರಿಗೆಗಳು ಖನಿಜ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಕ್ಕೂಟ ಸಂಸತ್ತು ಮಾಡುವ ಯಾವುದೇ ಅಧಿನಿಯಮದಿಂದ ವಿಧಿಸಲಾಗುವ ಪರಿಮಿತಿಗೆ ಒಳಪಟ್ಟಿರುತ್ತವೆ. ಇಲ್ಲಿ ಮತ್ತೆ ಪರಿಮಿತಿಯನ್ನು ವಿಧಿಸುವುದು ಒಕ್ಕೂಟ ಸಂಸತ್ತು. (೪೭) ಕ್ಯಾಪಿಟೇಷನ್ ತೆರಿಗೆ ಹೌದು. ಯಾರೇ ಪ್ರಾಂತೀಯ ಮುಖ್ಯಸ್ಥರು ಉಕ್ಕಡ ತೆರಿಗೆ ವಿಧಿಸುವುದಾದರೆ ಇದು ಉತ್ತಮ ಆದಾಯ ಮೂಲವಾಗುತ್ತದೆ. ಹಿಂದಿನ ಕಾಲದಲ್ಲಿ ವಿಧಿಸುತ್ತಿದ್ದ 'ಜಿಜಿಯಾ'ದ ಪರಿಷ್ಕೃತ ರೂಪವೇ ಇದು. ಎಷ್ಟು ಜನ ಸಚಿವರು ಮತ್ತು ಅವರ ಸಹೋದ್ಯೋಗಿಗಳು ತಮ್ಮ ಪ್ರಾಂತೀಯ ವಿಧಾನಸಭೆಗಳಿಗೆ ಕ್ಯಾಪಿಟೇಷನ್ ತೆರಿಗೆಯನ್ನು ಕುರಿತು ಪ್ರಸ್ತಾವಿಸುವ ಸಾಹಸ ಮಾಡಬಲ್ಲರು? (೪೮) ವೃತ್ತಿ, ವ್ಯಾಪಾರ, ಆಜೀವಿಕೆ ಹಾಗೂ ಉದ್ಯೋಗಗಳ ಮೇಲಿನ ತೆರಿಗೆಗಳು, ಅತ್ಯಂತ ಕಡಿಮೆ ಆದಾಯ ತರುವಂಥದಾಗಿದ್ದು ಇದನ್ನು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ದೃಷ್ಟಿಯಿಂದ ಮಾಡಲಾಗಿದೆ. (೪೯) ಪ್ರಾಣಿಗಳು ಹಾಗೂ ದೋಣಿಗಳ ತೆರಿಗೆಗಳು. ಕೃಷಿ ಹಾಗೂ ಗ್ರಾಮೀಣ ಪ್ರದೇಶಗಳಿಂದ ಉಂಟಾಗಿರುವ ತೀವ್ರ ಒತ್ತಡದಿಂದಾಗಿ ಯಾರೂ ಪ್ರಾಣಿ ಹಾಗೂ ದೋಣಿಗಳ ಮೇಲೆ ತೆರಿಗೆ ವಿಧಿಸಲು ಸಿದ್ಧರಾಗುವುದಿಲ್ಲ. (೫೦) ಸರಕು ಮಾರಾಟ ಹಾಗೂ ಜಾಹೀರಾತುಗಳ ಮೇಲಿನ ತೆರಿಗೆಗಳು, ಇದೊಂದನ್ನೇ ಹೆಚ್ಚಾಗಿ ಬಳಸಿಕೊಳ್ಳಲಾಗುತ್ತದೆ. ಆದರೆ ಆ ತೆರಿಗೆಗೂ ಒಂದು ಮಿತಿಯಿದೆ. ಎಲ್ಲ ಪ್ರಾಂತ್ಯಗಳಲ್ಲೂ ಸಾಧ್ಯವಾದಷ್ಟು ಏಕರೂಪದ ತೆರಿಗೆ ಇರಬೇಕು. ಮಾರಾಟ ತೆರಿಗೆಯನ್ನು ಹೆಚ್ಚಿಸುತ್ತ ಹೋದರೆ ಮುಂಬರುವ ಲಾಭ ಕುಸಿದು ಆಯ್ದ ಸರಕುಗಳ ದರದ ಸಂಬಂಧದಲ್ಲಿ ಆದಂತೆ ಉತ್ಪತ್ತಿ ಇಳಿಮುಖವಾಗುತ್ತದೆ.

ಮುಂದಿನ ಬಾಬು (೫೧) ಯಂತ್ರಚಾಲಿತವಾಗಲಿ ಅಥವಾ ಇಲ್ಲದಿರಲಿ ರಸ್ತೆ ಮೇಲೆ ಬಳಸಲು ಯೋಗ್ಯವಾದ ಟ್ರಾಮ್‌ಕಾರ್‌ಗಳನ್ನು ಒಳಗೊಂಡಂತೆ ವಾಹನಗಳ ಮೇಲೆ ತೆರಿಗೆ ಸ್ಥಳೀಯ ನಿಕಾಯಗಳನ್ನು ಉದ್ದೇಶಿಸಿರುವ ಆದಾಯಮೂಲ. ಅನಂತರದ ಬಾಬು (೫೨) ವಿದ್ಯುಚ್ಛಕ್ತಿ ಬಳಕೆ ಅಥವಾ ಮಾರಾಟದ ಮೇಲಿನ ತೆರಿಗೆ. ಪ್ರಾಂತ್ಯಗಳಲ್ಲಿ ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಪಡಿಸಿ, ಅಗ್ಗದ ದರದಲ್ಲಿ ಉದ್ದಿಮೆಗಳಿಗೆ ವಿದ್ಯುಚ್ಛಕ್ತಿ

ಒದಗಿಸಲು ಬಯಸಿದರೆ, ವಿವಿಧ ಪ್ರಾಂತ್ಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉದ್ದಿಮೆಗಳ ಸ್ಥಾಪನೆಯಾಗಬಹುದು. ಇದರಿಂದ ವಿದ್ಯುಚ್ಛಕ್ತಿ ಮಾರಾಟದ ಮೇಲಿನ ತೆರಿಗೆಯಿಂದ ಉತ್ತಮ ಆದಾಯ ಬರುವ ಬಗ್ಗೆ ಆಶಿಸಬಹುದು.

ಬಾಬು(೫೩) ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ. ಮುನಿಸಿಪಾಲಿಟಿಗಳು ಹಾಗೂ ಇತರ ಸ್ವಯಮಾಡಳಿತ ಸಂಸ್ಥೆಗಳಿಗೆ ಇದು ಒಂದು ರೀತಿಯ ಆಕ್ಟ್ರಾಯ್. (೫೪) ಮನೋರಂಜನೆ, ಕ್ರೀಡೆ, ಬಾಜಿ ಹಾಗೂ ಜೂಜು ಇವುಗಳ ಮೇಲಿನ ತೆರಿಗೆ ಸೇರಿದಂತೆ ಸುಖೋಪಭೋಗಗಳ ಮೇಲೆ ತೆರಿಗೆ. ಬಾಜಿ ಹಾಗೂ ಜೂಜನ್ನು ಕಿತ್ತುಹಾಕಬೇಕೆಂದು ತೆರಿಗೆ ಪ್ರಾಂತೀಯ ಸಚಿವಾಲಯಗಳನ್ನು ಕೋರಲಾಗಿದೆ. ಏನೇ ಆದರೂ ಜನಾಭಿಪ್ರಾಯವು ಬಾಜಿ ಹಾಗೂ ಜೂಜನ್ನು ತೊಡೆದುಹಾಕುವುದರ ಪರವಾಗಿ ಇರಬೇಕು. ಟರ್ಫ್ ಕೋರ್ಸ್ ಕುರಿತಂತೆ ಒಂದಕ್ಕಿಂತ ಹೆಚ್ಚು ಘಟಕಗಳಲ್ಲಿ ಪರಿಸ್ಥಿತಿ ಡೋಲಾಯಮಾನವಾಗಿದ್ದು, ಇದೊಂದೆ, ಹೆಚ್ಚಿನ ವರಮಾನ ತರುವ ಆದಾಯಮೂಲವಾಗಿದೆ. ಮನೋರಂಜನೆ ಮೇಲಿನ ತೆರಿಗೆ ಕುರಿತಂತೆ ಹೇಳುವುದಾದರೆ, ಒಕ್ಕೂಟದ ಬಹುತೇಕ ಪ್ರದೇಶಗಳಲ್ಲಿ ಜೀವನ ನಿರುತ್ಸಾಹಕರವಾಗಿದ್ದು, ಸುಖೋಪಭೋಗದ ಸರಕುಗಳ ಮೇಲೆ ತೆರಿಗೆ ಹೆಚ್ಚಳದಿಂದಾಗಿ ಸಾಮಾನ್ಯನ ಸಂತೋಷಕ್ಕೆ ಧಕ್ಕೆ ಬಂದಿದ್ದು ಆತ ಬದಲಾವಣೆಗಾಗಿ ಮದ್ಯದಂಗಡಿಗೆ ಹೋಗುವ ಬದಲು ಸಿನಿಮಾಗೆ ಹೋಗುತ್ತಾನೆ. ಬಾಬು (೫೫) ಸ್ಟ್ಯಾಂಪ್ ಸುಂಕದ ದರಗಳಿಗೆ ಸಂಬಂಧಿಸಿದೆ. ಬಾಬು (೫೬) ಒಳನಾಡು ಜಲಮಾರ್ಗದಲ್ಲಿ ಸಾಗಿಸಲಾಗುವ ಪ್ರಯಾಣಿಕರು ಹಾಗೂ ಸರಕುಗಳ ಮೇಲಿನ ಶುಲ್ಕ ವಸೂಲಿಗೆ ಸಂಬಂಧಿಸಿದೆ. ಈ ಮೂಲದಿಂದ ಏನು ದೊರಕುವುದೆಂದು ಪ್ರಾಂತ್ಯಗಳಲ್ಲಿರುವ ನನ್ನ ಸ್ನೇಹಿತರಿಗೆ ಗೊತ್ತು. ಈ ಬಾಬಿನಿಂದ ಕೆಲವೇ ಪ್ರಾಂತ್ಯಗಳಿಗೆ ದೊಡ್ಡ ಮೊತ್ತದ್ದೆ ಆದಾಯ ಸಿಗುವುದೆಂದು ನನ್ನ ಅನಿಸಿಕೆ.

ಮಾನ್ಯರೆ, ಸುಂಕ ರದ್ದಿಯ ಮಂಡನೆಗೆ ಸಲ್ಲಿಸಿದ ಕೋರಿಕೆ ಒಂದು ಸುಧಾರಣೆ ಎಂದು ನನ್ನ ಅನಿಸಿಕೆ. ಬಹುಪಾಲು ಪ್ರಾಂತ್ಯಗಳಲ್ಲಿ ಸುಂಕ ರದ್ದತಿಯಾಗಿದೆ. ಹಿಂದೆ ನಮ್ಮ ದೇಶದ ಹಲವು ನಗರಗಳಲ್ಲಿ ಕಂಡುಬರುತ್ತಿದ್ದ ವಾಹನಗಳನ್ನು ತಡೆದು ನಿಲ್ಲಿಸುವ ವ್ಯವಸ್ಥೆಯನ್ನು ಪುನರಾರಂಭಿಸುವುದು ಕಷ್ಟ. ಸುಂಕದಿಂದ ಹೆಚ್ಚಿನ ಆದಾಯ ಬರುವುದಿಲ್ಲ. ಅಷ್ಟೇ ಅಲ್ಲ ಎಲ್ಲ ಪ್ರಾಂತ್ಯಗಳಲ್ಲಿ ಅದರ ಅಳವಡಿಕೆ ಸಾಧ್ಯವಾಗುವುದಿಲ್ಲ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ರಾಜ್ಯಗಳಲ್ಲಿ ಸುಂಕ ಇನ್ನೂ ಅಸ್ತಿತ್ವದಲ್ಲಿದೆ.

**ಶ್ರೀ ಎ. ರಾಮಸ್ವಾಮಿ ಮುದಲಿಯಾರ್** : ಬಹುಪಾಲು ರದ್ದಯಾತಿಯಾಗಿದೆ. ಕೆಲವು ಕಡೆ ಮಾತ್ರ ಉಳಿದಿದ್ದು ಅವುಗಳ ರದ್ದತಿಗೆ ಪ್ರಕ್ರಿಯೆ ತೀವ್ರಗೊಳ್ಳುತ್ತಿದೆ. ಬಾಬು ೫೮, 'ಈ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಇರುವುದು ಶುಲ್ಕ ಆದರೆ ಇದರಲ್ಲಿ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಗುವ ಶುಲ್ಕ ಸೇರುವುದಿಲ್ಲ.' ಇದು ಅರಿವಿಗೆ ಬರದ, ಅನಿಶ್ಚಿತ ಆದಾಯಮೂಲವಾಗಿದ್ದು, ಈ ಕುರಿತು ನನ್ನ ಅಭಿಪ್ರಾಯವೇನೂ ಇಲ್ಲ.

ಈ ವರದಿಯ ಕೊನೆಯ ೬ನೇ ಕಂಡಿಕೆಯಲ್ಲಿ ಹೀಗೆ ಹೇಳಲಾಗಿದೆ. "ಹಾಗಿದ್ದರೂ ನಾವು ನಿರ್ದಿಷ್ಟವಾಗಿ ಹೇಳಿದ ಎಲ್ಲ ತೆರಿಗೆಗಳ ಉತ್ಪತ್ತಿಗಳನ್ನು ಒಕ್ಕೂಟವು ಉಳಿಸಿಕೊಳ್ಳುವುದು, ಘಟಕಗಳ ಆರ್ಥಿಕ ಸ್ಥಿರತೆಯನ್ನು ಕೆಲವು ಸಲ ತೀವ್ರವಾಗಿ ಬಾಧಿಸುತ್ತಿದೆ, ಆದ್ದರಿಂದ ಒಕ್ಕೂಟವು ಕಾಲಕಾಲಕ್ಕೆ ಮಾಡುವ ನಿರ್ಧಾರವನ್ನು ಆಧರಿಸಿ ಕೆಲವು ತೆರಿಗೆಗಳ ಉತ್ಪತ್ತಿಯ ವರ್ಗಾವಣೆಗೆ ಪಾಲುಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ನಾವು ಶಿಫಾರಸು ಮಾಡುತ್ತೇವೆ." ಇವೆಲ್ಲ ಸಂದಿಗ್ಧಗಳು ಹಾಗೂ ಸೇರ್ಪಡೆ ಹಾಗೂ ಷರತ್ತುಗಳೊಂದಿಗಿನ ಈ ಆದಾಯ ಮೂಲವು ಪ್ರಾಂತ್ಯಗಳಿಗೆ ಕೇವಲ ಒಂದು ಸಮಾಧಾನಕಾರಕ ಆದಾಯ ಮೂಲವಷ್ಟೇ. ಇದು ಸಂದಿಗ್ಧ, ಅನಿಶ್ಚಿತ. ಹಾಗಿದ್ದರೂ ಒಕ್ಕೂಟವು ಯಾವ ಪ್ರಮಾಣ ಹಾಗೂ ಯಾವುದನ್ನಾಧರಿಸಿದೆ ಎಂಬುದನ್ನು ನಿರ್ಧರಿಸಬೇಕು, ಇಂಥ ಸ್ಥಿತಿಗೆ ಯಾವ ಪ್ರಾಂತೀಯ ಸಚಿವರು ಒಪ್ಪುತ್ತಾರೋ ಗೊತ್ತಿಲ್ಲ.

ಈಗ ಕೇಂದ್ರದ ವಿಷಯಕ್ಕೆ ಬರುತ್ತೇನೆ. ವಿವಿಧ ಒಕ್ಕೂಟಗಳ ಆದಾಯಮೂಲಗಳ ಬಗ್ಗೆ ಸಾದೃಶ್ಯಗಳನ್ನು ನೀಡಲಾಗಿದೆ. ಶ್ರೀ ಜಿ.ಎಲ್ ಮೆಹ್ತಾ ಹೇಳಿರುವಂತೆ ನಮ್ಮ ಒಕ್ಕೂಟ ಹಲವು ವಿಧಗಳಲ್ಲಿ ವಿಶಿಷ್ಟವಾಗಿದೆ, ನಾವು ಎಲ್ಲ ಕಡೆ ಇರುವ ಮಾನದಂಡಗಳನ್ನು ಹಾಗೂ ವಾಸ್ತವಾಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಅವುಗಳ ಆಧಾರದ ಮೇಲೆ ಸದ್ಯಕ್ಕೆ ಸಂವಿಧಾನವನ್ನು ರಚಿಸಬೇಕು. ನಾನು ಈಗಾಗಲೇ ಹೇಳಿರುವಂತೆ ಈ ಸದನದಲ್ಲಿರುವ ಯಾರೂ ಬಲಶಾಲಿ ಕೇಂದ್ರ ಹಾಗೂ ಅದರ ಸ್ಥಾನಮಾನವನ್ನು ಕಾಪಾಡುವಷ್ಟು ಹೇರಳ ಸಂಪನ್ಮೂಲಗಳ ಬಗ್ಗೆ ಆಕ್ಷೇಪವೆತ್ತುವುದಿಲ್ಲ. ಆದರೆ ಒಂದು ಮೂಲಭೂತ ವಾಸ್ತವಾಂಶ ಅಲಕ್ಷ್ಯಕ್ಕೊಳಗಾಗಿದೆ. ಆದಾಯಮೂಲವನ್ನು ಹೆಚ್ಚಿಸುವ ಹೊಸ ವಿಧಾನ ಯುದ್ಧಕಾಲದಲ್ಲಿ ಜಾರಿಗೆ ಬಂತು. ಮಾನ್ಯರೆ, ಪ್ರಾಂತ್ಯಗಳಿಗೆ ನಿಗದಿಯಾದ ಹಾಗೂ ಘೋಷಿತ ಆದಾಯಮೂಲದ ಹೊರತಾಗಿ ಬೇರೇನೂ ಇರುವುದಿಲ್ಲ. ಆದರೆ ಕೇಂದ್ರದ ಅಕ್ಷಯ ಆದಾಯಮೂಲವೆಂದರೆ ನಾಸಿಕ್ ಪ್ರಿಂಟಿಂಗ್ ಪ್ರೆಸ್. ನಾನು ಇದನ್ನು ಸಲಹೆಯ ರೂಪದಲ್ಲಿ ಹೇಳುತ್ತಿದ್ದೇನೆ. ಹಲವು ವರ್ಷಗಳಿಂದ ಏನು ನಡೆಯುತ್ತಿದೆ ಎಂಬುದ್ದು ನನಗೆ ಗೊತ್ತು. ಒಂದು ದೇಶದ ಕರೆನ್ಸಿಗೆ ನ್ಯಾಸರೂಪದ ಬೆಂಬಲ ಎಂದರೆ ಚಿನ್ನ, ಬೆಳ್ಳಿ, ಅಥವಾ ಅಂತಹುದೇ ಬೇರೇನಾದರೂ, ನೋಟು ಬಿಡುಗಡೆಗೆ ಮುನ್ನ ನ್ಯಾಸರೂಪದಲ್ಲಿರಬೇಕು ಎಂಬ ಹಳೆಯ ವಿಚಾರ ಈಗ ಎಲ್ಲ ದೇಶಗಳಲ್ಲೂ ಅರ್ಥ ಕಳೆದುಕೊಂಡಿದೆ. ಇಂದು ನಮ್ಮ ಕರೆನ್ಸಿಗೆ ಅಂಥ ಯಾವುದೇ ಬೆಂಬಲವಿಲ್ಲ. ಅಮೆರಿಕ ಹಾಗೂ ಸ್ವಿಟ್ಜರ್‌ಲೆಂಡ್ ಹೊರತುಪಡಿಸಿದರೆ ಪ್ರಪಂಚದ ಯಾವ ದೇಶದ ಕರೆನ್ಸಿಗೂ ನ್ಯಾಸರೂಪದ ಬೆಂಬಲ ಇಲ್ಲ. ಒಂದು ಕಾಲದಲ್ಲಿ ಪೇಪರ್ ಕರೆನ್ಸಿಗೆ ಈ ವಿಧಾನವನ್ನನುಸರಿಸುವ ಬಗ್ಗೆ ಒತ್ತು ನೀಡಲಾಗುತ್ತಿತ್ತು. ಈಗ ನೀವು ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಕರೆನ್ಸಿಯನ್ನು ಹೆಚ್ಚಿಸಿಕೊಳ್ಳಬಹುದು. ನೀವು ಖಜಾನೆ ಮಸೂದೆಗಳನ್ನು ಹೊರಡಿಸಬಹುದು. ನಿಮ್ಮ ಕರೆನ್ಸಿಯನ್ನು ನೀವೇ ಹೊರಡಿಸಬಹುದು. ಆದರೆ ಹಾಗೆ ಮಾಡಬಹುದು ಎಂದು ನಾನು ಯಾವ ಕ್ಷಣದಲ್ಲಿಯೂ ಹೇಳಲಾರೆ. ಏಕೆಂದರೆ ಅದರಿಂದ ಹಣದುಬ್ಬರ ಹಾಗೂ ತನ್ಮೂಲಕವಾದ ಎಲ್ಲ ಅಪಾಯ ಉಂಟಾಗುತ್ತದೆ. ಈಗಲೂ ನಾನು ಇತರ ಹಲವರಂತೆ ಸಾಧ್ಯವಾದಷ್ಟು ಬೇಗ ಹಾಗೂ ಸಾಧ್ಯವಾದ ಮಟ್ಟಿಗೂ ಈಗಿರುವ ಹಣದುಬ್ಬರವನ್ನು ತಗ್ಗಿಸಬೇಕೆಂದು ನಂಬಿರುವವನು. ಕೇಂದ್ರವೇ ಅದನ್ನು ತಗ್ಗಿಸಬೇಕು. ಆದ್ದರಿಂದ ನಾನು ಆ ಬಗ್ಗೆ ಪ್ರತಿಪಾದಿಸುವುದಿಲ್ಲ. ಆದರೆ ನನ್ನ ಸಲಹೆ ಏನೆಂದರೆ ತುರ್ತು ಸಂದರ್ಭದಲ್ಲಿ ಎಂದರೆ ಬೇರಾವ ಆದಾಯಮೂಲ ಇಲ್ಲದಿರುವಾಗ ಇತರ ದೇಶಗಳಲ್ಲಿ ಇರುವಂತೆ ಇಲ್ಲಿಯೂ ಈ ಮೂಲವನ್ನು ಬಳಸಬಹುದು. ಆದರೆ ಪ್ರಾಂತ್ಯಕ್ಕಿರುವ ಮಾರ್ಗ ಯಾವುದು? ಕೆಲವು ಬಾರಿ ಸಾಲ ಎತ್ತಬಹುದು. ಆದರೆ ಅದು ಯಾವಾಗಲೂ ಫಲಕಾರಿಯಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ಕೆಲವು ವಿಷಯಗಳನ್ನು ಪ್ರಾಂತ್ಯಕ್ಕೆ ವಹಿಸಲಾಗಿದ್ದರೂ ಪ್ರಾಂತೀಯ ಎಂಬುದು ಅತೃಪ್ತಿಕರವೇ ಆಗಿರುತ್ತದೆ. ಈ ಬಗ್ಗೆ ವರದಿಯಲ್ಲಿ ಹೇಳಿರುವುದರ ಬಗ್ಗೆ ಮೆಚ್ಚುಗೆ ಸೂಚಿಸುವುದರೊಂದಿಗೆ ಈ ವಿಷಯಕ್ಕೆ ಇನ್ನೊಂದು ಬದಿಯ ಚಿತ್ರವಿದ್ದು, ಅದನ್ನು ವರದಿ ತಯಾರಕರು ಪರಿಗಣಿಸಿದ್ದಾರೆ. ಆದರೆ ಅದನ್ನು ಅವರು ಇನ್ನೂ ಒಂದಿಷ್ಟು ಪರಿಶೀಲಿಸಬಹುದಿತ್ತು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮಾತನಾಡಲು ಬಯಸುವ ಸದಸ್ಯರ ಹೆಸರುಗಳ ಪಟ್ಟಿ ನನ್ನ ಬಳಿ ಇದ್ದರೂ, ಗೌರವಾನ್ವಿತ ರಾಮಸ್ವಾಮಿ ಮುದಲಿಯಾರ್ ಅವರನ್ನು ಮಾತನಾಡುವಂತೆ ನಾನು ಕೇಳುವುದಕ್ಕೆ ಮುಂಚೆ ಮುಕ್ತಾಯವನ್ನು ಮಂಡಿಸಲಾಯಿತು.

**ಶ್ರೀ ಆರ್.ಕೆ. ಸಿಧ್ವಾ :** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಮುಕ್ತಾಯವನ್ನು ಮಂಡಿಸುವುದಕ್ಕೆ ಮುಂಚೆ ಒಂದು ವಿಷಯವನ್ನು ನೆನೆಪಿನಲ್ಲಿಟ್ಟುಕೊಳ್ಳಬೇಕೆಂದು ನಾನು ನಿಮ್ಮನ್ನು ಕೋರುತ್ತೇನೆ. ಈ ವಿಷಯ ಬಹಳ ಮಹತ್ತ್ವದ್ದು. ಭಾರತದ ಆರ್ಥಿಕ ಸ್ಥಿತಿಗೆ ಇದು ಬಾಧಕವಾಗಿರುವುದರಿಂದ ಸದಸ್ಯರಿಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಾಕಷ್ಟು ಅವಕಾಶ ನೀಡಬೇಕು. ಮುಕ್ತಾಯ ನಿಲುವಳಿಯನ್ನು

ಅಂಗೀಕರಿಸುವುದಕ್ಕೆ ಮುಂಚೆ ಎರಡೂ ಬದಿಗಳ ಪ್ರತಿನಿಧಿಗಳಿಂದ ಚರ್ಚೆ ನಡೆದಿದೆಯೇ ಎಂದು ನೋಡಬೇಕೆಂದು ಮಾನ್ಯ ಸಭಾಧ್ಯಕ್ಷರನ್ನು ವಿನಂತಿಸುತ್ತೇನೆ.

ಒಂದು ಅಭಿಪ್ರಾಯವನ್ನು ಪ್ರಕಟಿಸಲಾಗಿದೆ. ಇನ್ನೊಂದು ಬದಿಯ ಅಭಿಪ್ರಾಯ ವ್ಯಕ್ತವಾಗಿಲ್ಲ. ಅದೂ ಆಗಬೇಕು. ಆದ್ದರಿಂದ ಮಾನ್ಯರೆ, ಎರಡೂ ಬದಿಗೂ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡಿದರೆ ಅವರು ಇಂಥ ಮಹತ್ತ್ವದ ವಿಷಯದ ಬಗ್ಗೆ ಯಾವ ವಿಚಾರ ಹೊಂದಿದ್ದರೆ ಎಂಬುದು ಸದನಕ್ಕೆ ತಿಳಿಯುತ್ತದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಸಂಪೂರ್ಣವಾಗಿ ಸದನದ ಅಧೀನ, ಆದರೆ ಭಾಷಣಕಾರರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಎರಡೂ ಬದಿಗಳಲ್ಲೂ ಮೂರು, ಮೂರು ಸದಸ್ಯರಿಗೂ ಸಮನಾದ ತೂಕವಿದೆ. ಆದ್ದರಿಂದ ಒಂದೇ ಬದಿಗೆ ಭಾಷಣಕಾರರಿದ್ದಾರೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ ಸದನವು ಇನ್ನಷ್ಟು ಚರ್ಚೆಯನ್ನು ಬಯಸುತ್ತದೆಯೇ ಎಂಬ ಪ್ರಶ್ನೆಯನ್ನು ಸದನದ ಮುಂದಿಡುತ್ತೇನೆ.

ಮುಂದಿಟ್ಟಿರುವ ವಿಷಯ :

"ವಿಷಯವನ್ನು ಮತಕ್ಕೆ ಹಾಕಬೇಕು."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈ ಬದಿಗಿರುವ (ಬಲಬದಿ) ಹಲವು ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇನ್ನೊಂದು ಬದಿಗೆ (ಎಡಬದಿ) ನನ್ನ ಬಳಿ ಕೆಲವು ಹೆಸರುಗಳಿವೆ. ಶ್ರೀ ಬಿ.ದಾಸ್.

**ಶ್ರೀ ಆರ್.ಕೆ. ಸಿಧ್ವಾ :** ಮಾನ್ಯ ಸಭಾಧ್ಯಕ್ಷರೆ, ನಿಮ್ಮ ಬಳಿಯಿರುವ ಹೆಸರುಗಳ ಚೀಟಿ ಮೇರೆಗೆ ನೀವು ಹೋಗುವುದಿಲ್ಲವೆಂದು ಭಾವಿಸುತ್ತೇನೆ. ಏಕೆಂದರೆ ನಾವು ಮಾತನಾಡಬೇಕು.

**ಮಾನ್ಯ ಸಭಾಧ್ಯಕ್ಷರು :** ನನ್ನ ಬಳಿಯಿರುವ ಹೆಸರುಗಳ ಪಟ್ಟಿಯನ್ನು ನಾನು ಅನುಸರಿಸುವುದಿಲ್ಲ. ಹಿಂದಿನ ಒಂದು ಸಂದರ್ಭದಲ್ಲಿ ನಾನು ಚೀಟಿಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೆ. ಯಾರೇ ಸದಸ್ಯ ತಮ್ಮ ಜಾಗದಲ್ಲಿ ಎದ್ದುನಿಂತರೆ, ಆ ಕಡೆಗೆ ನನ್ನ ಗಮನ ಹೋಗುತ್ತದೆ.

**ಶ್ರೀ ಬಿ. ದಾಸ್ :** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ನನ್ನ ಮಿತ್ರ ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಪ್ರಾಂತ್ಯಗಳ ರೆವಿನ್ಯೂ ಹಾಗೂ ವರಮಾನದ ಬಗ್ಗೆ ಆಡಿದ ಮಾತುಗಳು ತುಂಬ ಸಂತೋಷ ಉಂಟುಮಾಡಿವೆ. ೧೯೩೩ಕ್ಕೆ ಮುಂಚೆ ಅವರು ೧೯೩೫ರ ಅಧಿನಿಯಮದ ಅಡಿಯಲ್ಲಿನ ತೆರಿಗೆ ಹಂಚಿಕೆ ವಿಷಯಕ್ಕೆ ಪಕ್ಷಕಾರರಾಗಿದ್ದರು. ಈ ಸದನದ ಸದಸ್ಯರು ೧೯೩೫ರ ಅಧಿನಿಯಮದ ಅಡಿಯಲ್ಲಿನ ತೆರಿಗೆ ವ್ಯವಸ್ಥೆಯನ್ನು ನೆಲೆಗೊಳಿಸಬೇಕು ಎನ್ನುತ್ತಿರುವುದು ಅವಮಾನಕರ. ಆ ಅಧಿನಿಯಮಕ್ಕೆ ಆಧಾರ ಯಾವುದು? ಆ ಅಧಿನಿಯಮ ಒಂದು ವಿದೇಶೀ ಸರ್ಕಾರಕ್ಕೆ ಎಲ್ಲ ಅಧಿಕಾರಗಳನ್ನು ಸಂಪನ್ಮೂಲಗಳನ್ನು ನೀಡಿದೆ. ಆ ಸರ್ಕಾರ ಭಾರತವನ್ನು ಬಿಟ್ಟು ತೊಲಗಿದರೂ ಆ ವ್ಯವಸ್ಥೆ ಹಾಗೇ ಮುಂದುವರಿದಿದೆ. ೧೯೩೫ರ ಅಧಿನಿಯಮವು ಎಲ್ಲ ಸಂಪನ್ಮೂಲಗಳನ್ನು ಕೇಂದ್ರಕ್ಕೆ ನೀಡಿದುದರಿಂದ ಕೇಂದ್ರವು ಆಳಿಕೆ ಅಧಿಕಾರ ನಡೆಸಿ ದೇಶದ ಸಂಪನ್ಮೂಲಗಳನ್ನು ತನ್ನ ಮನಬಂದಂತೆ ವ್ಯಯಮಾಡಿತು. ಭಾರತದ ಜನತೆಯನ್ನು ತನ್ನ ಮನಬಂದಾಗ ಜೈಲಿಗೆ ಕಳಿಸುವುದರ ಹೊರತು ಯಾವುದೇ ಜವಾಬ್ದಾರಿಯಿರಲಿಲ್ಲ ಈ ತಿಂಗಳ ೧೫ರಿಂದ ನಮಗೆ ಜನತೆಯ ಸರ್ಕಾರ ಸಿಕ್ಕಿತು. ನಾವು ಚರ್ಚಿಸುತ್ತಿರುವ ವರದಿ ೪ನೇ ವರದಿ. ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ಪ್ರಜಾಸತ್ತಾತ್ಮಕ ಭಾವನೆಯಿಂದ ಪ್ರಾರೂಪಿಸಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಹಾಗೂ ಶ್ರೀ ಗಗನವಿಹಾರಿ ಲಾಲುಭಾಯಿ ಮೆಹ್ತಾ–ಇಬ್ಬರೂ ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಿದ್ದು ಸಂತೋಷವೇ. ಉನ್ನತ ಸ್ಥಾನದಲ್ಲಿರುವ ಹಾಗೂ ಸಾಮಾನ್ಯರಿಗಿಂತ ಮೇಲುಸ್ತರದಲ್ಲಿರುವ ಇವರಿಬ್ಬರು ಸಮಾಜ ಕಲ್ಯಾಣ ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದು ಅಚ್ಚರಿಯ ಸಂಗತಿ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಕೇಂದ್ರ ಅಧಿಕಾರಗಳ ಸಮಿತಿಯ ಸದಸ್ಯರಾಗಿದ್ದು

ರಾಜ್ಯದ ಪ್ರಾಥಮಿಕ ಕರ್ತವ್ಯವಾಗಿರುವ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳಲು ವಿಫಲರಾಗಿದ್ದಾರೆ. ನಾವು ಸರ್ಕಾರಕ್ಕಾಗಲೀ ಸಚಿವಸಂಪುಟಕ್ಕಾಗಲೀ ಅಧಿಕಾರಗಳನ್ನು ಕೊಟ್ಟಿಲ್ಲ, ಅವರು ಏನಿದ್ದರೂ ದುಬಾರಿ ಹಾಗೂ ಭಾರವೆನಿಸುವ ವಿದೇಶೀ ಸರ್ಕಾರದ ಕಾರ್ಯನೀತಿಗಳನ್ನು ಮುಂದುವರಿಸಬೇಕಾಗಿದೆ. ರಕ್ಷಣೆಯ ವಿಷಯಕ್ಕೆ ಬಂದರೆ, ಹೌದು, ಅದು ಬೇಕು. ಆದರೆ ಅದು ನಮ್ಮ ದೇಶದ ಮನೋಭಾವ, ಅಗತ್ಯಕ್ಕೆ ಹೊಂದಿಕೆಯಾಗುವಂತಿದೆಯೇ ಅಥವಾ ಅಮೆರಿಕ, ಇಂಗ್ಲೆಂಡ್‌ಗಳಂಥ ಬಂಡವಾಳಶಾಹಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವಂತೆ ಇದೆಯೇ? ಕೇಂದ್ರ ಅಧಿಕಾರಗಳ ಸಮಿತಿ, ಕೇಂದ್ರ ಸಂವಿಧಾನ ಸಮಿತಿಯ ಸದಸ್ಯರು ಯಾವುದೇ ಹಂತದಲ್ಲಿಯೂ, ಭಾರತದ ಮನೋಭಾವಕ್ಕೆ ಹೊಂದುವಂತೆ ಕೇಂದ್ರದಲ್ಲಿ ವೆಚ್ಚ ಕಾರ್ಯನೀತಿಯು ವಿಭಿನ್ನ ಸ್ವರೂಪದ್ದೇ ಆಗಿರಬೇಕಾಗುತ್ತದೆ ಎಂದು ಯೋಚಿಸಿಲ್ಲ.

ಮಾನ್ಯರೆ, ಕೇಂದ್ರ ಸರ್ಕಾರದಿಂದ ಯಾರೂ, ಅನುಕಂಪವನ್ನು ಬಯಸುವುದಿಲ್ಲ. ನಾನು ಒರಿಸ್ಸಾದಂಥ ಬಡ ಪ್ರಾಂತ್ಯಕ್ಕೆ ಸೇರಿದ್ದರೂ, ಯುದ್ಧಕ್ಕೆ ಮುಂಚೆ ಅಲ್ಲಿಯ ತಲಾವಾರು ಆದಾಯ ೧–೮–೦ ರೂ. ಇದ್ದು, ತೆರಿಗೆಯ ನ್ಯಾಯಯುತ ಹಂಚಿಕೆ ಇರಬೇಕಾಗುತ್ತದೆ. ಕೇಂದ್ರ ಸರ್ಕಾರ ಗವರ್ನರ್ ಜನರಲ್ ಅಥವಾ ಅಧ್ಯಕ್ಷರು ಸೇರಿದಂತೆ, ಅವರು ಇಲ್ಲಿರುವ ಆರು ತಿಂಗಳ ಅವಧಿಯಲ್ಲಿ ಅವರು ಹಾಗೂ ಸಚಿವರು ಸಮಾಜ ಕಲ್ಯಾಣದ ತಮ್ಮ ಪ್ರಾಥಮಿಕ ಕರ್ತವ್ಯದ ಬಗ್ಗೆ ಯೋಚಿಸಬೇಕು. ಯೂನಿಯನ್ ಸಂವಿಧಾನದಲ್ಲಿ ಅಥವಾ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಲ್ಲಿಯಾಗಲೀ ಕೇಂದ್ರ ಸರ್ಕಾರದ ಪ್ರಾಥಮಿಕ ಕರ್ತವ್ಯದ ಪರಿಭಾಷೆ ಕಂಡುಬರುವುದಿಲ್ಲ. ಅದು ಕೇವಲ ಎಲ್ಲ ಅಧಿಕಾರಗಳನ್ನು ಧಾರಣಮಾಡುತ್ತದೆಯೇ? ಇಲ್ಲ. ವ್ಯವಸ್ಥೆಯನ್ನು ಕಂಡುಹಿಡಿಯಬೇಕು. ಜನರಿಂದ ತೆರಿಗೆ ರೂಪದಲ್ಲಿ ಬರುವ ದೊಡ್ಡ ಮೊತ್ತದ ಹಣವನ್ನು ಜನತೆಗೇ ಹಿಂತಿರುಗಿಸುವ ಒಂದು ಆಡಳಿತ, ಆಯುಧಗಳನ್ನೋ ಆಟಂಬಾಂಬ್‌ಗಳನ್ನೋ ಉತ್ಪಾದಿಸುವುದಕ್ಕೆ ಅದನ್ನು ವೆಚ್ಚಮಾಡಬಾರದು. ಶ್ರೀ ರಾಮಸ್ವಾಮಿ ಮುದಲಿಯಾರ್ ಪ್ರಾಂತೀಯ ತೆರಿಗೆಗಳನ್ನು ಕುರಿತು ವಿಶ್ಲೇಷಿಸಿ ಪ್ರಾಂತ್ಯಗಳು ಹೇಗೆ ಕೇವಲ ಪೋಷಣಾ ಭತ್ಯದ ಮೇಲೆ ನಡೆಯುತ್ತಿವೆ ಎಂಬುದನ್ನು ತೋರಿಸಿದರು. ಕೇಂದ್ರದಲ್ಲಿದ್ದ ವಿದೇಶಿ ಸರ್ಕಾರವು ಪ್ರಾಂತ್ಯಗಳಿಂದ ಕೇವಲ ಬಯಸಿದ್ದು ಇಷ್ಟೆ ಅದೆಂದರೆ ಹಸಿವೆ ಉಪವಾಸದಿಂದ ಬಳಲುತ್ತಿದ್ದ ಜನರು ಸೈನ್ಯ ಸೇರಬೇಕೆಂಬುದು. ಅದು ಸ್ವ-ಇಚ್ಛೆಯ ಸೇರ್ಪಡೆ. ಬ್ರಿಟಿಷ್ ಸಾಮ್ರಾಜ್ಯದ ಅಥವಾ ಭಾರತ ಸಾಮ್ರಾಜ್ಯದ ರಕ್ಷಣೆಗಾಗಿ ಇದ್ದ ಸೇನೆಯಲ್ಲ. ನಾನು ಮೂರನೆಯ ಬಾರಿ, ಸಾಮಾಜಿಕ ನ್ಯಾಯ ಹಾಗೂ ಸಾಮಾಜಿಕ ಸುರಕ್ಷತೆಗಾಗಿ ಬಿನ್ನವಿಸುತ್ತಿದ್ದೇನೆ. ಕೇಂದ್ರ ಸಂವಿಧಾನ ವಿಧೇಯಕವು ಪ್ರಾರೂಪಣಾ ಅಥವಾ ಅರೆ ಪ್ರಾರೂಪಣಾ ಹಂತದಲ್ಲಿದೆಯೆಂದು ಪತ್ರಿಕಾವರದಿಗಳಿಂದ ತಿಳಿದುಬಂದಿತು. ಸರ್ಕಾರವು ಎಲ್ಲ ಅಧಿಕಾರಗಳನ್ನು ಧಾರಣಮಾಡುವುದರಿಂದ ಪ್ರಯೋಜನವಿಲ್ಲ. ನಾವು ಶಾಸಕಾಂಗದಂತೆ ಕೆಲಸ ಮಾಡುತ್ತೇವೆಂದು ಯೋಚಿಸಬಹುದು. ಆದರೆ ಮಿಕ್ಕ ಅಧಿಕಾರ ಸರ್ಕಾರದ ಬಳಿ ಎಂದರೆ ಕಾರ್ಯಾಂಗದ ಬಳಿ ಇರುತ್ತದೆ. ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಿಂದ ನನಗೆ ತಿಳಿದಿರುವುದೇನೆಂದರೆ ಅವರಿಗೆ ಇನ್ನಷ್ಟು ಅಧಿಕಾರಗಳು ಬೇಕು, ಎಂದರೆ ಅವರು ಬಯಸುವಂತೆ ೧೨೬ಎ, ಪ್ರಕರಣವನ್ನು ಕೇಂದ್ರ ಸಂವಿಧಾನದ ವಿಧೇಯಕದಲ್ಲಿ ಸೇರಿಸಿದರೆ ರಾಷ್ಟ್ರಪತಿಗಳು ಎಂದರೆ ಈಗಿರುವ ಗವರ್ನರ್ ಜನರಲ್‌ರಿಗೆ ಹಾಗೂ ಸಚಿವಸಂಪುಟಕ್ಕೆ ಅತ್ಯಧಿಕ ಅಧಿಕಾರಗಳು ಬರುತ್ತವೆ.

ರಾಷ್ಟ್ರಪತಿಗಳು ಅಥವಾ ಸಚಿವಸಂಪುಟದಲ್ಲಿ ಸಮಸ್ತ ಕಾರ್ಯಕಾರಿ ಅಧಿಕಾರಿಗಳು ಮಡುಗಟ್ಟಿರಬೇಕೆಂದು ನನ್ನ ಕೆಲ ಸಹೋದ್ಯೋಗಿಗಳ ಮನಸ್ಸು ಏಕೆ ಕಾತರಿಸುತ್ತಿದೆ? ಶಾಸಕಾಂಗವು ತನ್ನ ಪ್ರಜಾಸತ್ತಾತ್ಮಕ ಕರ್ತವ್ಯಗಳನ್ನು ನಡೆಸಬೇಕು ಮತ್ತು ಜನರು ಶಾಸಕಾಂಗದ ಮೂಲಕ ಕಾರ್ಯಾಂಗದ ಕ್ರಮಗಳನ್ನು ನಿಯಂತ್ರಿಸಬೇಕು ಮತ್ತು ಕಾರ್ಯಾಂಗವು ಪ್ರಜಾಸತ್ತಾತ್ಮಕ ತತ್ತ್ವಗಳನ್ನು ಅನುಸರಿಸಬೇಕು. ಅಲ್ಲಿ ನನಗೆ ಯಾವುದೇ ಪ್ರಜಾಸತ್ತಾತ್ಮಕ ಅಂಶ ಕಾಣುತ್ತಿಲ್ಲ.

ಸಲಹಾಸಮಿತಿಯ ಎರಡನೇ ವರದಿ ನಮಗೆ ಸಿಕ್ಕಿದೆ. ನಮಗೆ ಈವರೆಗೆ ಹಲವಾರು ವರದಿಗಳು ಸಿಕ್ಕಿವೆ. ಆದರೆ ಅದು ಇಲ್ಲಿಯ ಚರ್ಚೆಯ ವಿಷಯವಲ್ಲ, ಅಲ್ಪಸಂಖ್ಯಾತ ಕೋಮುಗಳಿಗೆ ಕೆಲವು ರಿಯಾಯಿತಿಗಳನ್ನು ಶಿಫಾರಸು ಮಾಡಲಾಗಿದೆ. ಸಣ್ಣ ರಿಯಾಯಿತಿಗಳು ಯಾರಿಗೆ ಬೇಕು? ನಮಗೆ ನಮ್ಮ ಹಕ್ಕು ಸವಲತ್ತುಗಳು ಬೇಕು. ನಮ್ಮ ಎಲ್ಲ ಸಂಪನ್ಮೂಲಗಳನ್ನು ಒಂದು ಸಚಿವರ ಗುಂಪಿನ ಕೈಗೆ ಒಪ್ಪಿಸಲು ಬಯಸುವುದಿಲ್ಲ. ನಮ್ಮ ಎಲ್ಲ ಸಂಪನ್ಮೂಲಗಳನ್ನು ಸರ್ಕಾರಕ್ಕೆ ಕೊಡಲೂ ಬಯಸುವುದಿಲ್ಲ ಜನರ ಒಳಿತಿಗೇ ಬಳಕೆಯಾಗುವಂತೆ ನಮ್ಮ ಸಂಪನ್ಮೂಲಗಳು ಹಂಚಿಕೆಯಾಗಬೇಕೆಂದು ಬಯಸುತ್ತೇವೆ. ಈ ಬಗ್ಗೆ ತಿಳಿಸಿದುದಕ್ಕೆ ನಾನು ಶ್ರೀ ಅಲ್ಲಾದಿಯವರಿಗೆ ಆಭಾರಿಯಾಗಿದ್ದೇನೆ. ನನ್ನ ಮಿತ್ರ ಶ್ರೀ ಗಗನವಿಹಾರಿ ಲಾಲುಭಾಯಿ ಮೆಹ್ತಾ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷರು, ಅವರು ಅಭಿವೃದ್ಧಿ ಮೂಲಕ ಯೋಗಕ್ಷೇಮ ಹಾಗೂ ಹಣಕಾಸು ವ್ಯವಸ್ಥೆಯನ್ನು ಕುರಿತು ಆಲೋಚಿಸುವವರು. ಅವರಿಗೂ ನಾನು ಕೃತಜ್ಞನಾಗಿದ್ದೇನೆ. ಬಂಡವಾಳಶಾಹಿಗಳಿಂದ ಭಾರತ ಅಭಿವೃದ್ಧಿಯಾಗಬೇಕೆಂದು ಅವರು ಬಯಸುತ್ತಾರೆ. ನನ್ನ ಮೇರೆಗೆ ಭಾರತದ ತೆರಿಗೆಯ ಶೇಕಡಾ ೫೦ರಷ್ಟು ಹಸಿವೆ ಉಪವಾಸವನ್ನು ತೊಲಗಿಸಿ. ದೇಶದ ಒಟ್ಟಾರೆ ಒಳಿತನ್ನು ಸಾಧಿಸಿ, ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಬಳಸಬೇಕು ಬಂಡವಾಳಶಾಹಿಗಳು ಇನ್ನಷ್ಟು ಶ್ರೀಮಂತರಾಗುವಂತೆ ಮಾಡಿದರೆ ನಾವೆಂದಿಗೂ ಸಾಮಾನ್ಯರನ್ನು ಆ ಮಟ್ಟಕ್ಕೆ ಏರಿಸಲಾರೆವು ನಾನು ಬೃಹತ್ ಉದ್ದಿಮೆಗಳ ವಿರೋಧಿಯಲ್ಲ, ಆದರೆ ಸದನಕ್ಕೆ ದೊಡ್ಡ ಬಂಡವಾಳಶಾಹಿಗಳ ಸಹಾನುಭೂತಿ ಬೇಕಿಲ್ಲ. ಏಕೆಂದರೆ ಅವರ ದೃಷ್ಟಿಯಲ್ಲಿ ದೇಶದ ಅಭಿವೃದ್ಧಿ ಎಂದರೆ ಆರ್ಥಿಕ ವಿಸ್ತರಣೆ ಮತ್ತು ಆರ್ಥಿಕ ಅಭಿವೃದ್ಧಿ ಸರ್ಕಾರ ಇಂದು ನಮ್ಮ ಸ್ವಂತದ್ದು. ಸರ್ಕಾರಿ ಸದಸ್ಯರಾರೂ ಇಂದಿನ ನಮ್ಮ ಚರ್ಚೆಯಲ್ಲಿ ಪಾಲ್ಗೊಂಡಿಲ್ಲ. ಸಂವಿಧಾನ ರಚನಾಸಭೆಯ ಸದಸ್ಯರಾಗಿ ಅವರು ತಮ್ಮ ಮನೋಭಾವವನ್ನು ವಿಚಾರಧಾರೆಯನ್ನು ನಮಗೆ ತಿಳಿಸಬೇಕು. ನಾನು ಶಾಸನಸಭೆಯ ಸದಸ್ಯನಾಗಿ ಅಲ್ಲ, ಈ ಸದನದ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ಸರ್ಕಾರದಲ್ಲಿ ನಮ್ಮ ಪ್ರತಿನಿಧಿಗಳಾಗಿರುವವರ ಮನೋಭಾವ ಭಾರತದ ಸಾಮಾನ್ಯ ಜನತೆಯ ಒಳಿತನ್ನು ಸಾಧಿಸುವುದಾಗಿದ್ದರೆ, ಅದೇ ಅವರ ಮುಖ್ಯ ಮತ್ತು ಪ್ರಾಥಮಿಕ ಕರ್ತವ್ಯವಾಗಿದ್ದರೆ, ಈ ಕೇಂದ್ರ ಅಧಿಕಾರಗಳ ಸಮಿತಿಯ ವರದಿ ಹಾಗೂ ಆ ವರದಿಯ ಅಂತರ್ಗತ ಸತ್ತ್ವವನ್ನು ಕೈಬಿಡಬೇಕು. ಭಾರತದ ಸಂಪನ್ಮೂಲ ಭಾರತದ ಬುದ್ಧಿಮತ್ತೆ ಭಾರತದ ಆರ್ಥಿಕ ವಿಚಾರಧಾರೆಯನ್ನು ಭಾರತದ ಜನತೆಯ ಪ್ರಗತಿಪರ ಒಳಿತಿನ ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸುವ ರೀತಿಯಲ್ಲಿ ಸಂವಿಧಾನವನ್ನು ರೂಪಿಸಬೇಕು. ಆದರೆ ಅಂಥ ಉತ್ಸಾಹ ನನಗೆ ಕಾಣಲಿಲ್ಲ. ಸಮಿತಿಯ ಸದಸ್ಯರು ತಜ್ಞರು, ಮೇಧಾವಿಗಳು, ಕಾನೂನು ಪರಿಣತರು ಆರ್ಥಿಕ ಅನುಭವಿಗಳು ಆಗಿದ್ದರೂ ಅವರ ವಿಚಾರಧಾರೆ ಈ ದಿಶೆಯಲ್ಲಿ ಇಲ್ಲ ಎಂಬುದು ಖೇದದ ಸಂಗತಿ. ಇವತ್ತಿನ ಚರ್ಚೆಯ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ಮತ್ತೆ ಸಮಿತಿಗೆ ಹಿಂದಿರುಗಿಸಬೇಕು ಅಥವಾ ಕೇಂದ್ರ ಸಂವಿಧಾನ ವಿಧೇಯಕ ಪ್ರಾರೂಪಣೆಯಾಗಿ ಅದನ್ನು ನಮ್ಮ ಮುಂದೆ ಮಂಡಿಸಿದಾಗ ಅವರು ಅಪಾರ ಜನಕೋಟಿಯ ಬಗ್ಗೆ ತಾವು ಮಾಡಬೇಕಾದ ಕರ್ತವ್ಯದ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾರೆ ಎಂದು ಆಶಿಸುತ್ತೇನೆ.

**ಶ್ರೀ ನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : *[ಮಾನ್ಯರೆ, ಕೇಂದ್ರ ಅಧಿಕಾರಗಳ ಸಮಿತಿಯ ವರದಿಯನ್ನು ಪರಿಶೀಲನೆಗೆ ಎತ್ತಿಕೊಳ್ಳಬೇಕೆಂಬ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ. ಕೇಂದ್ರಕ್ಕೆ ಯಾವ ಅಧಿಕಾರಗಳನ್ನು ಕೊಡಬೇಕು ಎಂಬ ಬಗ್ಗೆ ವಿವಾದ ಉಂಟಾಗಿದೆ. ಈ ಬಗ್ಗೆ ಮಾತನಾಡುವುದು ಅಗತ್ಯವೆಂದು ನನಗೆ ತೋರುತ್ತಿದೆ ಅಧಿಕಾರಗಳ ಹಂಚಿಕೆ ಕಾರ್ಯ ಪ್ರಾರಂಭವಾಗಿದೆ, ಆದ್ದರಿಂದ ನಾವು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಸರ್ಕಾರಕ್ಕೆ ಎಷ್ಟು ಕಡಿಮೆ ಅಧಿಕಾರಗಳಿರುತ್ತವೆಯೋ ಅಷ್ಟು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಒಂದು ಸರ್ಕಾರದ ವಿರುದ್ಧ ಹೋರಾಡುವುದರಲ್ಲೇ ನಮ್ಮ ಇಡೀ ಜೀವನ ಕಳೆದುಹೋಯಿತು. ಒಂದು ಸರ್ಕಾರದಿಂದ ಬಿಡಿಸಿಕೊಂಡು ಇನ್ನೊಂದನ್ನು ಸ್ಥಾಪಿಸಲು ಹೊರಟಿದ್ದೇವೆ.

ನೈಜಸಂಗತಿ ಎಂದರೆ ಈಗ ಬಿಟ್ಟುಹೋಗಿರುವ ಸರ್ಕಾರ ಯಾವುದೇ ಒಳ್ಳೆಯ ಸಂತೋಷಕರ ಭಾವನೆಯನ್ನು ಉಳಿಸಿಹೋಗಿಲ್ಲ. ನಾವೀಗ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ಅಧಿಕಾರಗಳನ್ನು ಹೇಗೆ ಹಂಚಬೇಕು ಎಂಬ ಬಗ್ಗೆ ಚರ್ಚಿಸುತ್ತಿದ್ದೇವೆ. ಸರ್ಕಾರದ ಪ್ರಾಥಮಿಕ ಘಟಕಗಳನ್ನು ಗ್ರಾಮಗಳಲ್ಲಿ ಸ್ಥಾಪಿಸಬೇಕು ಎಂಬುದು ನನ್ನ ಇಚ್ಛೆ, ಅಧಿಕಾರದ ಬಹುಭಾಗ ಗ್ರಾಮರಾಜ್ಯಗಳಲ್ಲಿ ರಿಪಬ್ಲಿಕ್‌ಗಳಲ್ಲಿ ಅನಂತರದ ಭಾಗ ಪ್ರಾಂತ್ಯಗಳಲ್ಲಿ ಉಳಿದ ಭಾಗ ಕೇಂದ್ರದಲ್ಲಿ ಇರಬೇಕು ಆದರೆ ದುರ್ದೈವವಶಾತ್ ನಮ್ಮಲ್ಲಿ ಇನ್ನೂ ಗ್ರಾಮ ಗಣರಾಜ್ಯಗಳು ಅಸ್ತಿತ್ವದಲ್ಲಿ ಬಂದಿಲ್ಲ. ಜನತೆಗೆ ಪ್ರಾಂತೀಯ ಸರ್ಕಾರಕ್ಕಿಂತ ಕೇಂದ್ರ ಸರ್ಕಾರದೊಡನೆ ಸಂಪರ್ಕಿಸಲು ಹೆಚ್ಚಿನ ಸ್ವಾತಂತ್ರ್ಯವಿಲ್ಲ. ಸರ್ಕಾರಕ್ಕೆ ಯಾವ ಅಧಿಕಾರಗಳನ್ನು ಕೊಡಬೇಕು ಎಂಬ ಬಗ್ಗೆ ಪರಿಶೀಲಿಸುವುದರ ಜೊತೆಗೆ ಜನರು ಕೇಂದ್ರದ ಮೇಲೆ ಎಷ್ಟು ಹಿಡಿತ ಹೊಂದಿರಬೇಕು ಎಂಬುದರ ಬಗ್ಗೆಯೂ ಪರಿಶೀಲಿಸಬೇಕು. ಈ ಕುರಿತು ನಾವು ಪರಿಶೀಲಿಸಬೇಕಾದುದು ಬಹಳ ಇರುತ್ತದೆ. ಕೇಂದ್ರ ಸರ್ಕಾರವು ಇಡೀ ದೇಶದ ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ಅಧಿಕಾರ ಹೊಂದಿದೆ. ಇದರೊಂದಿಗೇ ದೇಶದಲ್ಲಿ ಶಾಂತಿ ಹಾಗೂ, ಸುವ್ಯವಸ್ಥೆಯನ್ನು ರಕ್ಷಿಸಿ, ಕಾಪಾಡುವ ಅಧಿಕಾರವನ್ನೂ ಹೊಂದಿದೆ. ಇದು ವ್ಯಾಪಕವಾದ ಅಧಿಕಾರವಲ್ಲವೇ? ಸರ್ಕಾರಕ್ಕೆ ಈ ಮಟ್ಟಿನ ಸ್ವಾತಂತ್ರ್ಯ ಸಾಕು. ಈ ಸರ್ಕಾರಕ್ಕೆ ಸಂಪರ್ಕ ಹಾಗೂ ವಿದೇಶ ವ್ಯವಹಾರಗಳ ಅಧಿಕಾರವಿದೆ. ಈ ಅಧಿಕಾರಗಳು ಸರ್ಕಾರವನ್ನು ತುಂಬ ಬಲಗೊಳಿಸುತ್ತವೆ. ಇಷ್ಟೊಂದು ಅಧಿಕಾರ ನೀಡಲಾಗಿದ್ದರೂ ಸದಸ್ಯರು ಸರ್ಕಾರವನ್ನು ಇನ್ನಷ್ಟು ಬಲಗೊಳಿಸುವ ಕಾತರ ತೋರಿಸುತ್ತಿದ್ದಾರೆ. ನನಗೂ ಇದು ಇಷ್ಟವೇ. ಕೇಂದ್ರದಲ್ಲಿ ಬಲಶಾಲಿಯದ ಒಳ್ಳೆಯ ಸರ್ಕಾರವನ್ನು ಸ್ಥಾಪಿಸುವುದೇ ಎಲ್ಲರ ಗುರಿಯಾಗಿರಬೇಕು. ಸರ್ಕಾರಕ್ಕೆ ಒಳ್ಳೆಯತನವಿಲ್ಲದಿದ್ದರೆ ಅದರ ಶಕ್ತಿಯಿಂದ ನಮಗೆ ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಡುಕೇ ಆಗುತ್ತದೆ. ರಾಜಧಾನಿಯನ್ನು ದಿಲ್ಲಿಯಿಂದ ಮದ್ರಾಸ್‌ಗೆ ವರ್ಗಾಯಿಸುವಂಥ ಕೇಂದ್ರ ಸರ್ಕಾರ ಇರಬಹುದು. ಇದು ಅಸಾಧ್ಯವೂ ಅಲ್ಲ. ಸರ್ಕಾರದಲ್ಲಿ ಒಳ್ಳೆಯತನ ಮತ್ತು ಪ್ರಾಮಾಣಿಕತೆ ಇದ್ದರೆ ಅದು ಜನತೆಗೆ ಸಾಕಷ್ಟು ಒಳಿತನ್ನುಂಟುಮಾಡಬಹುದು. ಆದರೆ ಸರ್ಕಾರಕ್ಕೆ ಒಳ್ಳೆಯತನವಿಲ್ಲದಿದ್ದರೆ ಅದು ಆತಂಕಕಾರಿಯಾಗುತ್ತದೆ. ಇದಕ್ಕೊಂದು ಉದಾಹರಣೆ ನೀಡುತ್ತೇನೆ. ಹಿಂದೊಮ್ಮೆ ಪುಸಾ ಕೃಷಿ ಕಾಲೇಜಿನಿಂದಾಗಿ ಬಿಹಾರ ಉತ್ತಮ ಸ್ಥಳವೆನಿಸಿತ್ತು. ಕೃಷಿ ಕುರಿತು ವಿಶೇಷಜ್ಞಾನವುಳ್ಳವರು ದಿಲ್ಲಿಗಿಂತ ಬಿಹಾರದಲ್ಲಿ ಪುಸಾ ಕೃಷಿಕಾಲೇಜನ್ನು ಹೆಚ್ಚು ಲಾಭದಾಯಕವಾಗಿ ನಡೆಸಬಹುದು ಎಂದು ಭಾವಿಸಿದ್ದರು. ಕೇಂದ್ರಸರ್ಕಾರ ಬಿಹಾರದಲ್ಲಿ ಪುಸಾ ಶಾಲೆಯನ್ನು ಸ್ಥಾಪಿಸಿತು. ಆದರೆ ಅನಂತರ ಬಂದ ಸರ್ಕಾರ ಅದನ್ನು ದೆಹಲಿಗೆ ಸ್ಥಳಾಂತರಿಸಿತು. ಸರ್ಕಾರದ ಇಂಥ ಖಯಾಲಿ ಕೆಲಸಗಳೂ ನಮ್ಮ ಗಮನದಲ್ಲಿರಬೇಕಾಗುತ್ತದೆ. ದೆಹಲಿಯಲ್ಲಿ ಕಾಲೇಜು ನಡೆಸಲು ಬೇಕಾಗುವ ಹಣ ಹಾಗೂ ಕರ್ಮಚಾರಿತ್ವ ಎರಡೂ ದುಬಾರಿಯಾಗುತ್ತದೆ. ಅಲ್ಲದೆ ಬೇರೆ ಬೇರೆ ಪ್ರಾಂತ್ಯಗಳ ಅಗತ್ಯಗಳು ಬೇರೆ ಬೇರೆಯಾಗಿರುತ್ತವೆ. ಪಡಿತರ ವ್ಯವಸ್ಥೆ ಹಾಗೂ ಆಹಾರ ಇಲಾಖೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿವೆ. ಅವುಗಳ ಆಡಳಿತ ಹೇಗಿದೆ? ಉತ್ತರಪ್ರದೇಶ ಮತ್ತು ಪಂಜಾಬದ ಜನತೆಗೆ ಅಕ್ಕಿ ಬೇಡ, ಗೋಧಿ ಬೇಕು. ಮದ್ರಾಸಿನ ಜನರಿಗೆ ಗೋಧಿ ಬೇಡ, ಅಕ್ಕಿ ಬೇಕು. ಸರ್ಕಾರವು ಮದ್ರಾಸಿಗರಿಗೆ ಅಕ್ಕಿಯನ್ನಷ್ಟೇ ಅಲ್ಲ. ಗೋಧಿಯನ್ನು ಬಳಸಿ ಎಂದು ಹೇಳುತ್ತದೆ. ಉತ್ತರಪ್ರದೇಶ ಹಾಗೂ ಪಂಜಾಬ್ ಜನರಿಗೆ ಅಕ್ಕಿ ಪೂರೈಸುತ್ತದೆ ಇದು ಸರ್ಕಾರ ಮಾಡುತ್ತಿರುವ ಕೆಲಸ. ಕೇಂದ್ರ ಬಲವಾಗಿರಬೇಕೆಂಬ ಅಂಶವನ್ನು ನಾನು ಒಪ್ಪುತ್ತೇನೆ ಮತ್ತು ಅದು ನನ್ನ ಇಚ್ಛೆ ಕೂಡ. ಕೇಂದ್ರ ಬಲಶಾಲಿಯಾಗಿರುವುದು ಉತ್ತಮವೇ. ಆದರೆ ನಾವು ಪ್ರಾಂತ್ಯಗಳ ಅಧಿಕಾರಗಳನ್ನು ಕುಂಠಿತಗೊಳಿಸಬಾರದು. ನಿಮಗೆ ಸೂಕ್ತವೆನಿಸುವ ಹಾಗೂ ಕೇಂದ್ರ ಅಧಿಕಾರಗಳ ಸಮಿತಿ ಸೂಚಿಸುವ ಅಧಿಕಾರಗಳು ಪ್ರಾಂತ್ಯಗಳಿಗೆ ಇರಬೇಕು. ಪ್ರಾಂತ್ಯಗಳಿಗೆ ಇರುವ ಮಿಕ್ಕ ಅಧಿಕಾರಗಳನ್ನು ಅಲ್ಲೇ ಉಳಿಸಬೇಕೆಂಬುದು ನನ್ನ ಅಭಿಪ್ರಾಯ. ಒಂದು ಪ್ರಾಂತ್ಯದ ಅಗತ್ಯಗಳು ಇನ್ನೊಂದರಿಂದ ವಿಭಿನ್ನವಾಗಿರುತ್ತವೆ. ನಾನು ಈ ಬಗ್ಗೆ ಹೆಚ್ಚಿಗೆ ಹೇಳಬೇಕಾದದ್ದಿಲ್ಲ. ಮಿಕ್ಕ ಅಧಿಕಾರ ಕುರಿತು ಪರಿಶೀಲಿಸುವಾಗ ನೀವು ಗಮನಿಸಬೇಕಾದ ಅಂಶವೆಂದರೆ

ಪಾಕಿಸ್ತಾನ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಮಿಕ್ಕ ಅಧಿಕಾರಗಳು ಪ್ರಾಂತ್ಯಗಳಲ್ಲಿರಬೇಕೆಂಬ ಅಂಶವನ್ನು ನಾವು ಒಪ್ಪಿದ್ದೆವು, ಈಗ ಪಾಕಿಸ್ತಾನ ಅಸ್ತಿತ್ವಕ್ಕೆ ಬಂದಿರುವುದರಿಂದ ಅದು ಅಗತ್ಯವಿಲ್ಲ ಎಂಬುದು ಸರಿಯಲ್ಲ. ಜನತೆಗೆ ಹೆಚ್ಚಿನ ಲಾಭವಾಗುವಂತೆ ಅಧಿಕಾರಗಳನ್ನು ಯಾರಿಗೆ ಬಿಟ್ಟುಕೊಡಬೇಕು ಎಂಬ ಪ್ರಶ್ನೆಯನ್ನು ಚೆನ್ನಾಗಿ ಪರಿಶೀಲಿಸಬೇಕು. ಮಿಕ್ಕ ಅಧಿಕಾರಗಳು ಪ್ರಾಂತ್ಯಗಳಲ್ಲಿರಬೇಕು. ಅವುಗಳನ್ನು ಸಮವರ್ತಿ ಪಟ್ಟಿಗೆ ಸೇರಿಸಿದರೂ ಸಾಕು, ಅದರಿಂದ ಉದ್ದೇಶ ಸಫಲವಾಗುತ್ತದೆ. ಈ ಅಂಶವನ್ನು ಪೂರ್ಣವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ. ಕೇಂದ್ರ ಬಲಶಾಲಿಯಾಗಿರಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಅದಕ್ಕೆ ಗೊತ್ತಿರದ ವಿಷಯಗಳನ್ನು ಅದಕ್ಕೆ ವಹಿಸಬಾರದು. ಹಾಗೆ ಮಾಡಿದರೆ ಪ್ರಾಂತ್ಯಗಳು ಹಾನಿ ಅನುಭವಿಸಬೇಕಾಗುತ್ತದೆ.

ವರದಿಯಲ್ಲಿರುವ ಇನ್ನೊಂದು ಅಂಶ ನನಗೆ ಅಸಮಾಧಾನಕರವೆನಿಸಿದೆ, ನಾನು ಸ್ವತಂತ್ರ ದೇಶಕ್ಕೆ ಸೇರಿದವನು, ನನಗೆ ರಾಜಕುಮಾರರು ಇಷ್ಟವಿಲ್ಲ. ಆದರೆ ರಾಜ್ಯಗಳ ಆಡಳಿತಗಾರರು ತಮ್ಮ ಅಧಿಕಾರಗಳು ಕಡಿತಗೊಂಡಿವೆ ಎಂದು ಸಂದೇಹ ತಾಳಿದ್ದಾರೆ ಎಂದು ವರದಿ ತಿಳಿಸುತ್ತದೆ. ರಾಜರಿಗೆ ಅಂಥ ಸಂದೇಹವಿರದಂತೆ ನಾವು ಕ್ರಮ ಕೈಗೊಳ್ಳಬೇಕು. ಅವರು ಅಸ್ತಿತ್ವದಲ್ಲಿದ್ದರೆ ಅವರಲ್ಲಿ ಅಸಮಾಧಾನವಿರುತ್ತದೆ. ಕೆಲಸ ಸುಗಮವಾಗಿ ಸಾಗುವುದಿಲ್ಲ. ರಾಜರೂ ನಮ್ಮೊಂದಿಗಿದ್ದು, ಜನರ ಒಳಿತಿಗಾಗಿ ಕೆಲಸಮಾಡುವಂತಾಗಬೇಕು. ಜನರ ಹಿತಕ್ಕೆ ವಿರುದ್ಧವಾಗಿ ನಡೆಯುವ ರಾಜರನ್ನು ಕಿತ್ತುಹಾಕುವ ಹಕ್ಕು ನಮಗಿರಬೇಕು. ಆದರೆ ಬ್ರಿಟಿಷರ ಆಳಿಕೆಯಲ್ಲಿ ಅವರು ಅನುಭವಿಸುತ್ತಿದ್ದ ಹಕ್ಕುಗಳನ್ನು ಕಡಿತಗೊಳಿಸಲು ನಾವು ಯೋಚಿಸಬಾರದು. ಅಂಥ ಪ್ರಯತ್ನ ನಮಗೆ ತೊಂದರೆಯನ್ನುಂಟುಮಾಡುತ್ತದೆ. ಮಿಕ್ಕ ಅಧಿಕಾರಗಳು ಕೇಂದ್ರದ ಬಳಿ ಇರುವುದರಿಂದ ರಾಜರಿಗೆ ತಮ್ಮ ಭವಿಷ್ಯದ ಬಗೆಗೆ ಸಂದೇಹವಿರಬಹುದು. ಆದ್ದರಿಂದ ಸಾಧ್ಯವಾದಷ್ಟೂ ಮಿಕ್ಕ ಅಧಿಕಾರಗಳು ಪ್ರಾಂತ್ಯಗಳಲ್ಲಿ ಇರಬೇಕೆಂಬುದು ನನ್ನ ವಾದ.]*

**ಪಂಡಿತ್ ಹೀರಾಲಾಲ್ ಶಾಸ್ತ್ರಿ** *(ಜಯಪುರ ರಾಜ್ಯ) : *[ಇಂದು ನಮ್ಮೆದುರಿಗೆ ಮಂಡಿಸಿರುವ ವರದಿಯಲ್ಲಿ ತಿಳಿಸಿರುವ ತತ್ತ್ವಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರಗಳಿರಬೇಕೇ ಅಥವಾ ಕಡಿಮೆ ಅಧಿಕಾರಗಳಿರಬೇಕೇ ಎಂಬ ಚರ್ಚೆಯಲ್ಲಿ ತೊಡಗಲು ನಾನು ಬಯಸುವುದಿಲ್ಲ. ಈ ಎರಡೂ ವಿಷಯಗಳ ಬಗ್ಗೆ ಅಭಿಪ್ರಾಯಗಳು ವ್ಯಕ್ತವಾಗಿವೆ. ಆದರೆ ವೈಯಕ್ತಿಕವಾಗಿ ನಾನು ಕೇಂದ್ರಕ್ಕೆ ಹೆಚ್ಚು ಅಧಿಕಾರಗಳಿರಬೇಕೆಂದು ಭಾವಿಸುತ್ತೇನೆ, ನಾನು ಈ ವರದಿಯನ್ನು ಬೆಂಬಲಿಸುತ್ತೇನೆ. ಏಕೆಂದರೆ ಇದರಲ್ಲಿ ಕೇಂದ್ರದ, ಪ್ರಾಂತ್ಯಗಳ, ಘಟಕಗಳ, ಅಧಿಕಾರಗಳನ್ನು ಸುಂದರವಾಗಿ ಹೊಂದಾಣಿಕೆ ಮಾಡಲಾಗಿದೆ. ದೇಶದಲ್ಲಿ ಶಾಂತಿ ಕಾಪಾಡಲು ಹಾಗೂ ಇತರ ಉದ್ದೇಶಗಳಿಗಾಗಿಯೂ ಕೇಂದ್ರ ಬಲಿಷ್ಠವಾಗಿರಬೇಕು. ಆದರೆ ನಮ್ಮ ದೇಶ ದೊಡ್ಡದಾಗಿರುವುದರಿಂದ ನಾವು ಘಟಕಗಳಿಗೂ ಸಾಕಷ್ಟು ಅಧಿಕಾರಗಳನ್ನು ಕೊಡಬೇಕಾಗುತ್ತದೆ. ಘಟಕಗಳು ಎಂದರೆ ಅದರಲ್ಲಿ ಪ್ರಾಂತ್ಯಗಳು, ಭಾರತೀಯ ರಾಜ್ಯಗಳು ಸೇರುತ್ತವೆ. ನಿನ್ನೆ ಮಾತನಾಡಿದ ಹುಸೇನ್ ಇಮಾಮ್ ಸಾಹಿಬ್ ಅವರು, ಅವೆರಡರಲ್ಲಿ, ವ್ಯತ್ಯಾಸವಿರಬಾರದೆಂದು ಆಗ್ರಹಿಸಿದರು. ಅದು ನಮಗೂ ಸಮ್ಮತವೇ. ಆದರೂ ಅವೆರಡರಲ್ಲಿ ಹಲವು ವ್ಯತ್ಯಾಸಗಳಿವೆಯೆಂದು ಹಾಗೂ ರಾಜ್ಯಗಳು ವಿವಿಧ ಬಗೆಯವಿವೆಯೆಂದು ನಮಗೆ ಗೊತ್ತಿದೆ. ಪ್ರದೇಶ, ಜನಸಂಖ್ಯೆ ಹಾಗೂ ವರಮಾನದಲ್ಲಿ ವ್ಯತ್ಯಾಸವಿದೆ. ರಾಜ್ಯ ರಾಜ್ಯಗಳ ನಡುವೆ ಆಡಳಿತದಲ್ಲಿ ವಿಭಿನ್ನತೆ ಇದೆ. ಈ ಭಿನ್ನತೆಯ ಅರಿವು ನಮಗಿದೆ. ಆದರೂ ಭಾರತೀಯ ರಾಜ್ಯದ ವಿಷಯದಲ್ಲಿ ಅಳವಡಿಸಿಕೊಂಡ ಕಾರ್ಯನೀತಿ ಸರಿಯಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಮೇ ೧೬ರ ಹೇಳಿಕೆಯಾಚೆಗಿನ ಏನನ್ನಾದರೂ ಅವರು ಒಪ್ಪಿಕೊಳ್ಳುವಂತೆ ಮಾಡಿರುವುದು ಒಳಿತು. ಅವರು ಸ್ವ-ಇಚ್ಛೆಯಿಂದ ಯಾವುದನ್ನು ಬಿಟ್ಟುಕೊಡುತ್ತಾರೋ ಅದಕ್ಕೆ ನಾವು ತೃಪ್ತರಾಗಿರಬೇಕು. ಭಾರತೀಯ ರಾಜ್ಯಗಳ ಅಧಿಕಾರಿಗಳು, ತಾವು ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಿದರೆ ತಮ್ಮ ಕರ್ತವ್ಯ ಮುಗಿದಂತೆ, ಭಾರತ ದೇಶಕ್ಕೆ ತಾವು ಸೇರಿದಾಕ್ಷಣ ತಮ್ಮ ನಿಷ್ಠೆ ತೋರಿದಂತೆ ಎಂದು ಅವರು ಭಾವಿಸಿದ್ದರೆ

ತಪ್ಪಾಗುತ್ತದೆ. ಮುಂಬರುವ ದಿನಗಳಲ್ಲಿ ಒಂದು ರಾಜ್ಯದ ಆಡಳಿತ ಒಂದು ವಿಧ ಇನ್ನೊಂದು ರಾಜ್ಯದ ಆಡಳಿತ ಇನ್ನೊಂದು ವಿಧ ಇರುವುದು ಅಸಾಧ್ಯವಾಗುತ್ತದೆ. ಭಾರತದುದ್ದಕ್ಕೂ ಪ್ರತಿಯೊಂದು ಭಾರತೀಯ ರಾಜ್ಯ, ಪ್ರಾಂತ್ಯ ಅದು ದೊಡ್ಡದಿರಲಿ ಅಥವಾ ಚಿಕ್ಕದಿರಲಿ–ಆಡಳಿತ ಮಾತ್ರ ಒಂದೇ ಪ್ರಕಾರವಾಗಿರಬೇಕಾದುದು ಅನಿವಾರ್ಯ. ಅದು ಪ್ರಜಾಪ್ರಭುತ್ವ ತತ್ತ್ವಗಳನ್ನಾಧರಿಸಿರಬೇಕು. ಈಗ ಭಾರತೀಯ ರಾಜ್ಯಗಳ ಜನರು ತುಂಬ ಸಂಕಷ್ಟದಲ್ಲಿದ್ದಾರೆಂಬುದು ಬಹಳ ದುಃಖದ ಸಂಗತಿ. ಭಾರತ ಸ್ವತಂತ್ರವಾಗಿದೆ ಎಂದು ನಾವು ಘೋಷಿಸಿದ್ದೇವೆ ಮತ್ತು ಇಡೀ ದೇಶದ ತುಂಬ ಅದರ ಸಂಭ್ರಮಾಚರಣೆ ಕಂಡುಬರುತ್ತಿದೆ. ಭಾರತ ಖಂಡಿತವಾಗಿಯೂ ಸ್ವತಂತ್ರವಾಗಿದೆ ಮತ್ತು ಅದರ ಸಡಗರದಲ್ಲಿ ನಾವೂ ಭಾಗಿಗಳಾಗಿದ್ದೇವೆ. ಭಾರತಕ್ಕೆ ಸ್ವಾತಂತ್ರ್ಯ ಬರಲು ಮತ್ತು ಅದು ಬೇಗ ಘಟಿಸುವಂತಾಗಲು ನಾವು ಎಷ್ಟೇ ಸಣ್ಣದಾದರೂ ಕೊಡುಗೆ ನೀಡಿದ್ದೇವೆ. ಆ ಬಗ್ಗೆ ನಮಗೆ ಹೆಮ್ಮೆ ಇದೆ. ಆದರೂ ಭಾರತ ಸ್ವತಂತ್ರವಾಗಿದೆ ಎಂದು ಹೇಳುತ್ತಿದ್ದರೂ ಭಾರತೀಯ ರಾಜ್ಯಗಳ ಜನರು ಆ ಸ್ಥಾನಮಾನವನ್ನು ಇನ್ನೂ ಪಡೆದಿಲ್ಲ. ಇದು ಬಹಳ ವಿಷಾದದ ಸಂಗತಿ.

ನಾವು ಆಗಸ್ಟ್ ೧೫ರ ಆಗಮನಕ್ಕಾಗಿ ಕಾಯುತ್ತಿದ್ದೆವು. ಅದರ ಆಗಮನವೂ ಆಯಿತು. ಹೊಸ ಯುಗ ಹುಟ್ಟುತ್ತಿದೆ, ಬದಲಾವಣೆಗಳಾಗುತ್ತಿವೆ. ಭಾರತೀಯ ರಾಜ್ಯಗಳಲ್ಲಿ ಬದಲಾವಣೆಗಳಾಗಬಾರದೆಂದರೆ ಹೇಗೆ ಸಾಧ್ಯ? ನಾವು ಭಾರತೀಯ ರಾಜ್ಯಗಳ ಅಧಿಕಾರಿಗಳು ಆಡಳಿತಗಾರರು, ಸಚಿವರ ದೂರದರ್ಶಿತ್ವದಲ್ಲಿ ತುಸುಮಟ್ಟಿಗೆ ಭರವಸೆ ಹೊಂದಿರಬೇಕಾಗುತ್ತದೆ. ತಾವು ಕಾಲದ ಒತ್ತಡಕ್ಕೆ ತಲೆಬಾಗಬೇಕಾಗುತ್ತದೆ ಎಂಬುದನ್ನು ಅವರು ಅರಿತಿರಬೇಕು. ಹಾಗೆ ತಲೆಬಾಗದಿದ್ದರೆ ಛಿದ್ರವಾಗುತ್ತಾರೆ. ಈ ಬಗೆಗೂ ನಮಗೆ ತುಸು ವಿಶ್ವಾಸವಿದೆ. ಕೇಂದ್ರ ಸರ್ಕಾರ ನಮಗೆ ಸಹಾಯಮಾಡಬಹುದು ಎಂಬ ನಂಬಿಕೆ ಇದೆ. ಮುಂಚಿನ ಕೇಂದ್ರ ಸರ್ಕಾರ ನಮಗೆ ಸಹಾಯಮಾಡಲಿಲ್ಲ. ಸರ್ಕಾರಕ್ಕೆ ಬೆಂಬಲ ನೀಡಿದವರಿಗೆ ಅವರು ಸಹಾಯಮಾಡಿದರು. ಅವರೂ ಸಹ ನಮಗೆ ಏನೂ ಮಾಡಲಿಲ್ಲ. ಹೀಗಾಗಿ ಅವರು ಅಧಿಕಾರದಲ್ಲಿದ್ದಷ್ಟು ಕಾಲವೂ ನಮ್ಮ ಪ್ರಗತಿ ಕುಂಠಿತವಾಯಿತು. ಆ ಸರ್ಕಾರ ಕೊನೆಗೊಂಡಿದೆ, ಅಧಿಕಾರಿಗಳೂ ಅದೃಶ್ಯರಾಗಿದ್ದಾರೆ. ಅದು ಈಗ ನಮ್ಮ ಕಣ್ಮುಂದೆ ಇಲ್ಲ. ಹೊಸ ಸರ್ಕಾರ ಸ್ಥಾಪನೆಯಾಗಿದೆ, ಹಾಗೂ ಅದು ನಮಗೆ ಸಹಾಯಮಾಡುತ್ತದೆ ಎಂಬುದು ನಮ್ಮ ಆಶಯ. ನಮಗೆ ಅದು ಹೆಚ್ಚಿನ ಸಹಾಯಮಾಡಲಿಕ್ಕಿಲ್ಲ ಆದರೆ ಅದು ನಮ್ಮ ಕೆಲಸಕ್ಕೆ ಅಡ್ಡಿ ಮಾಡುವುದಿಲ್ಲವೆಂದು ಆಶಿಸುತ್ತೇವೆ.

ಬಲಿಷ್ಠ ಕೇಂದ್ರ ಸರ್ಕಾರವಿರಬೇಕೆಂಬುದನ್ನು ನಾನು ಬೆಂಬಲಿಸುತ್ತೇನೆ ಎಂದು ನಿಮಗೆ ತಿಳಿಸಬಯಸುತ್ತೇನೆ. ರಾಜ್ಯಗಳು ಪ್ರಸ್ತುತ ಪರಿಮಿತ ಸಂಖ್ಯೆಯ ವಿಷಯಗಳನ್ನು ಹೊಂದಿರಲು ಬಯಸಿದರೆ ಅವು ಹಾಗೇ ಮಾಡಲಿ. ಅದೇ ವೇಳೆಗೆ ನಾನು ಹೇಳಬಯಸುವುದೇನೆಂದರೆ, ಒಂದು ವಿಷಯದ ಬಗ್ಗೆ ಅರ್ಥಮಾಡಿಕೊಂಡ ಅನಂತರವೇ ನಮಗೆ ಅದರ ಬಗ್ಗೆ ನಂಬಿಕೆ ಬರುತ್ತದೆ. ನಮಗೆ ಇಂಥ ಭರವಸೆ ನೀಡಿರುವುದಕ್ಕೆ ಭಾರತೀಯ ರಾಜ್ಯಗಳ ದೂರದರ್ಶಿತ್ವವಾಗಲಿ ಕೇಂದ್ರ ಸರ್ಕಾರ ನೀಡಬಹುದಾದ ಸಹಾಯವಾಗಲೀ ಕಾರಣವಾಗದೆ, ನಮಗೆ ಕಂಡುಬಂದ ನಮ್ಮ ಶಕ್ತಿ ನಮ್ಮ ಭುಜಬಲ ನಮ್ಮ ಅನುಭವಕ್ಕೆ ಬರುವುದು ಕಾರಣವಾಗಿದೆ ಆ ಬಲದ ಮೇಲೆ ನಾನು ಇದನ್ನು ಹೇಳುತ್ತಿದ್ದೇನೆ. ಭಾರತೀಯ ಆಡಳಿತಗಾರರಿಗೆ ಇದು ಇಷ್ಟವಾಗಬಹುದು ಅಥವಾ ಆಗದಿರಬಹುದು. ಕೇಂದ್ರ ಸರ್ಕಾರ ಪ್ರಜಾಪ್ರಭುತ್ವಕ್ಕೆ ಬದ್ಧವಾಗಿದೆ. ಅದು ಮಧ್ಯೆ ಪ್ರವೇಶಮಾಡಬಹುದು ಅಥವಾ ಮಾಡದಿರಬಹುದು. ಏನಾದರೂ ಘಟಿಸಬಹುದು ಅಥವಾ ಘಟಿಸದಿರಬಹುದು, ಆದರೆ ಏನೇ ಆದರೂ ನಾವು ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸದೇ ಇರಲಾಗದು. ನಾವು ಏನು ಮಾಡಬೇಕೋ ಅದನ್ನು ಖಂಡಿತವಾಗಿ ಮಾಡುತ್ತೇವೆ. ಜನತೆಯ ಬಲ ಎಷ್ಟು ಹೆಚ್ಚುತ್ತದೆ ಎಂದರೆ ರಾಜರು ಅವರ ಮಿತ್ರರು ಯಾರೂ ಅದನ್ನು ತಡೆಯಲಾರರು. ಆದ್ದರಿಂದ ರಾಜ್ಯಗಳಲ್ಲಿ ಈಗಿರುವ ಸರ್ಕಾರದ ವ್ಯವಸ್ಥೆ ಹಾಗೇ ಉಳಿಯುವುದಿಲ್ಲ. ಅದಕ್ಕಾಗಿ ನಾವು ತಾಳ್ಮೆ ಕಳೆದುಕೊಳ್ಳಬೇಕಿಲ್ಲ. ಕೆಲವು ನಿಷ್ಠುರ ಸಂಗತಿಗಳನ್ನು ಹೇಳಿ ರಾಜ್ಯಗಳನ್ನು ವಿಚಲಿತಗೊಳಿಸಲು ಬಯಸುವುದಿಲ್ಲ.

ಅವರನ್ನು ಚಿಂತಿತರನ್ನಾಗಿಸಲು ಅವರನ್ನು ಬೆದರಿಸಲು ಬಯಸುವುದಿಲ್ಲ. ಅದು ಅವರ ದೇಶಪ್ರೇಮ ತೋರುತ್ತದೆ. ಆ ಕಾರಣ ಎಚ್ಚರಗೊಂಡಿರುವುದರಿಂದಲೇ ಅವರು ಇಲ್ಲಿಗೆ ಬಂದಿದ್ದಾರೆ ಅಥವಾ ಬರುತ್ತಾರೆ. ಅವರೆಲ್ಲ ಇಲ್ಲಿಗೆ ಬರಲಿ.

ಅವರು ಇಲ್ಲಿಗೆ ಬಂದಿರುವ ಮಾತ್ರದಿಂದಲೇ ಎಲ್ಲವೂ ಮುಗಿದು ಹೋಗಿಲ್ಲ, ರಾಜ್ಯಗಳಲ್ಲಿ ಬದಲಾವಣೆಗಳಾಗಬೇಕು. ಇದೆಲ್ಲವನ್ನೂ ಹೇಳಿದ ತರುವಾಯ ನಾನು ಪ್ರಸ್ತಾವವನ್ನು ಬೆಂಬಲಿಸುತ್ತೇನೆ. ಹೇಗೆ ಆಗಲಿ ಕೇಂದ್ರ ಸರ್ಕಾರವನ್ನು ಬಲಪಡಿಸಬೇಕು. ಸರ್ಕಾರ ದುರ್ಬಲವಾಗಿದ್ದರೆ ದೇಶದಲ್ಲಿ ಶಾಂತಿ ಇರುವುದಿಲ್ಲ. ದೇಶದ ಶಾಂತಿಪಾಲನೆ ಎಲ್ಲ ಕಾರ್ಯಗಳಿಗಿಂತ ಶ್ರೇಷ್ಠವಾದ್ದು. ಅದರ ಅನಂತರವಷ್ಟೇ ನಮಗೆ ಹೊಸ ಸಾಮಾಜಿಕ ಸುವ್ಯವಸ್ಥೆ ಮತ್ತು ಹೊಸ ಆರ್ಥಿಕ ಸುವ್ಯವಸ್ಥೆಯನ್ನು ಕಾಪಾಡುವ ಅವಕಾಶ ದೊರೆಯುತ್ತದೆ. ಈ ಎಲ್ಲ ಕೆಲಸಗಳನ್ನು ಸಾಧಿಸುವ ಅವಕಾಶ ಬರುತ್ತದೆ. ಆದ್ದರಿಂದ ಬಲಿಷ್ಠ ಕೇಂದ್ರ ಸರ್ಕಾರವಿರಬೇಕು, ಪ್ರಾಂತೀಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರಗಳಿರಬೇಕು. ಭಾರತೀಯ ರಾಜ್ಯಗಳ ವಿಷಯದಲ್ಲಿ ಒಂದು ತೊಂದರೆಯಿದೆ. ಅದೆಂದರೆ ಎಲ್ಲ ಭಾರತೀಯ ರಾಜ್ಯಗಳು ಒಂದೇ ಬಗೆಯಾಗಿಲ್ಲ. ಕೆಲವು ದೊಡ್ಡವು ಕೆಲವು ಚಿಕ್ಕವು. ಅವುಗಳನ್ನು ಗುಂಪುಗಳನ್ನಾಗಿ ಮಾಡಿದರೆ ನವಭಾರತದಲ್ಲಿ ಸೂಕ್ತ ಘಟಕಗಳನ್ನು ಮಾಡಬಹುದು.

ಕೇಂದ್ರ ಸರ್ಕಾರವನ್ನು ಬಲಗೊಳಿಸುವುದರ ವಿರುದ್ಧ ಇಲ್ಲಿ ಹೇಳಲಾಗಿರುವುದಾವುದು ನನ್ನ ಮೇಲೆ ಪರಿಣಾಮ ಬೀರಿಲ್ಲ. ನಾನು ಬಲಿಷ್ಠ ಕೇಂದ್ರ ಸರ್ಕಾರದ ಪರವಾಗಿದ್ದೇನೆ.]*

**ಶ್ರೀ ದೇವಿ ಪ್ರಸಾದ್ ಖೈತಾನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಸದನದಲ್ಲಿ ನಡೆದ ಚರ್ಚೆಗಳು ಹಾಗೂ ಈ ಪ್ರಶ್ನೆಯ ಮೇಲೆ ನಡೆಯುತ್ತಿರುವ ಚರ್ಚೆ, ದೇಶದ ನಿಜವಾದ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಉತ್ತಮ ವಾಕ್ಚಾತುರ್ಯವನ್ನಾಧರಿಸಿದೆ ಎನಿಸುತ್ತಿದೆ. ಅಂತಾರಾಷ್ಟ್ರೀಯ ಖ್ಯಾತಿಯ ಸರ್ ರಾಮಸ್ವಾಮಿ ಮುದಲಿಯಾರ್‌ರ ಭಾಷಣದ ವಿಷಯದಲ್ಲಿ ಈ ಮಾತು ಹೇಳುತ್ತಿದ್ದೇನೆ. ಅವರು ತಮ್ಮ ವಾಕ್ಚಾತುರ್ಯದಿಂದ ತಮ್ಮ ವಾದದ ಪೊಳ್ಳುತನ ಹಾಗೂ ದೌರ್ಬಲ್ಯವನ್ನು ಮುಚ್ಚಿದ್ದಾರೆ. ಅವರು ಆ ಕ್ಷಣದಲ್ಲಿ ದೇಶದ ರಕ್ಷಣೆಯ ಅಗತ್ಯಗಳು, ಅದು ಆತ್ಮರಕ್ಷಣೆಯಾಗಲಿ ಅಥವಾ ಆಕ್ರಮಣಕಾರಿಯಾಗಿರಲಿ ಆ ಅಗತ್ಯಗಳನ್ನು ಮರೆತಿದ್ದಾರೆ. ಯುದ್ಧದ ಸಮಯದಲ್ಲಿ ಇಡೀ ದೇಶ ಹೇಗೆ ಸನ್ನದ್ಧವಾಗಬೇಕಾಗುತ್ತದೆ ಎಂಬುದನ್ನು ಅವರು ಮರೆತುಬಿಟ್ಟಿದ್ದಾರೆ. ಆದರೆ ಪ್ರಪಂಚದಲ್ಲಿ ಈಗಾಗಲೇ ಅದರ ಸುಳಿವುಗಳು ಗೋಚರಿಸುತ್ತಿವೆ. ಆದರೆ ನಮ್ಮ ನತದೃಷ್ಟ ದೇಶ ಇನ್ನೂ ಪೂರ್ಣವಾಗಿ ಅಭಿವೃದ್ಧಿಯಾಗದಿರುವುದರಿಂದ ನಿಕಟ ಕಾಲದಲ್ಲೇ ಅದಕ್ಕೆ ಬಲಿಯಾಗಬಹುದೇನೋ. ನಾನೇನೂ ಈ ವಿಷಯದಲ್ಲಿ ಎಚ್ಚರಿಕೆಯ ಗಂಟೆಯಲ್ಲ, ಆದರೆ ನಾನು ನಂಬಿರುವ ಮಟ್ಟಿಗೆ ನಮ್ಮ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಿರಲಿ, ಶಿಕ್ಷಣ ಮತ್ತು ಉತ್ತಮ ಆರೋಗ್ಯವನ್ನು ಒದಗಿಸುವುದರಲಿ, ಹೆಚ್ಚು ಸರಕುಗಳನ್ನು ಉತ್ಪಾದಿಸುವುದಿರಲಿ, ಇಡೀ ದೇಶ ಒಂದು ಎಂದು ಪರಿಗಣಿಸಬೇಕು. ಮತ್ತು ನಾವು ಪ್ರತಿಯೊಬ್ಬರೂ ಪ್ರಾಂತೀಯ ಬಲದಲ್ಲಿ ನಂಬಿಕೆ ಹೊಂದಿರಲಿ ಅಥವಾ ರಾಷ್ಟ್ರೀಯ ಬಲದಲ್ಲಿ ನಂಬಿಕೆ ಹೊಂದಿರಲಿ ಆಂತರಿಕ ಶಾಂತಿ ಹಾಗೂ ಸುರಕ್ಷತೆ ಮತ್ತು ಬಾಹ್ಯ ಆಕ್ರಮಣದಿಂದ ರಕ್ಷಣೆ ಇವುಗಳನ್ನು ನಿರ್ವಹಿಸಲಾಗುತ್ತಿರುವ ಬಗ್ಗೆ ಗಮನಿಸಬೇಕು. ಕೃಷಿ ಮತ್ತು ಕೈಗಾರಿಕಾ ಸರಕುಗಳ ಉತ್ಪತ್ತಿ ಅಭಿವೃದ್ಧಿಯಾಗಿರುವ ಬಗ್ಗೆ ನೋಡಬೇಕು. ಏಕೆಂದರೆ ರಾಷ್ಟ್ರೀಯ ಸಂಪತ್ತು ರೂಪುಗೊಂಡರೆ ದೇಶನಿರ್ಮಾಣ ಚಟುವಟಿಕೆಗಳು ಬೆಳೆಯುತ್ತವೆ. ಆ ಬಗ್ಗೆ ಸರ್ ರಾಮಸ್ವಾಮಿ ಮುದಲಿಯಾರ್ ತಿಳಿಸಿದ್ದಾರೆ.

ಅವರು ಪ್ರಾಂತ್ಯ ಪಟ್ಟಿಯಲ್ಲಿನ ತೆರಿಗೆ ಬಾಬುಗಳನ್ನು ವಿಶ್ಲೇಷಿಸಿದರು. ಹಲವು ಬಾಬುಗಳ ಬಗ್ಗೆ ವ್ಯಂಗ್ಯವಾಗಿ ನುಡಿದರು. ಅವರು ಹೇಳಿದ ಮೊದಲನೆಯ ಬಾಬು ಭೂಕಂದಾಯ ಹಾಗೂ ಪ್ರಾಂತ್ಯಗಳ ಭೂಸ್ವಾಧೀನದ ಬಗ್ಗೆ ಸದನಕ್ಕೆ ನೆನಪಿಸಿದರು. ಮಧ್ಯಸ್ಥ ಗೇಣಿದಾರರು ಎಲ್ಲ ವರಮಾನವನ್ನು

ತೆಗೆದುಕೊಳ್ಳುವುದರಿಂದ ಪ್ರಾಂತೀಯ ಸರ್ಕಾರಕ್ಕೆ ಅದು ಸಿಗುವುದಿಲ್ಲ ಎಂದು ಹೇಳಿದಾಗ ಆ ಪ್ರಸ್ತಾವದ ಪರವಾಗಿ ತೀವ್ರವಾಗಿ ವಾದಿಸಲಿಲ್ಲವೇ? ಮಧ್ಯಸ್ಥ ಗೇಣಿ ಪದ್ಧತಿಯನ್ನು ರದ್ದುಮಾಡುವುದರಿಂದ ಅಥವಾ ಸರ್ಕಾರ ಅದನ್ನು ಖರೀದಿಸುವುರಿಂದ, ಭೂಕಂದಾಯದ ಈಗಿನ ವ್ಯವಸ್ಥೆಗಿಂತ ಹೆಚ್ಚಿನ ಲಾಭ ಪ್ರಾಂತೀಯ ಸರ್ಕಾರಕ್ಕೆ ಸಿಗುತ್ತದೆ ಎಂದು ನಿರೀಕ್ಷಿಸಬಹುದಲ್ಲವೆ? ಎರಡನೆದಾಗಿ ೪೦ನೇ ಸಂಖ್ಯೆಯ ಬಾಬಿನ ಬಗ್ಗೆ ಹಾಸ್ಯಮಾಡಿದರು. ಅದು ಕೃಷಿ ವರಮಾನದ ಮೇಲೆ ತೆರಿಗೆ. ಪ್ರಾಂತ್ಯಗಳು ತಾವು ಈ ತೆರಿಗೆಯನ್ನು ಹೊಂದಿರಬೇಕೆಂದು ಯೋಚಿಸಿದುವು. ಆದರೆ ಎಲ್ಲಿಯವರೆಗೆ ಮಧ್ಯಸ್ಥ ಗೇಣಿದಾರರಿರುತ್ತಾರೋ ಅಲ್ಲಿಯವರೆಗೆ ಈ ಬಾಬು ಸರ್ಕಾರಕ್ಕೆ ಉತ್ತಮ ಆದಾಯಮೂಲವಾಗಲಾರದು ಎಂದು ಯೋಚಿಸಿದುವು.

ಅನಂತರ ಅವರ ನಗುವಿಗೆ ಗುರಿಯಾದ ಪದಗಳು ಮನೆಯಲ್ಲಿನ ಬೆಂಕಿಗೂಡು ಮತ್ತು ಕಿಟಕಿಗಳು, ಆದರೆ ಅದಕ್ಕೆ ಮೊದಲಿನ "ಭೂಮಿ ಹಾಗೂ ಕಟ್ಟಡಗಳ ಮೇಲಿನ ತೆರಿಗೆ" ಎಂಬ ಪದಗಳನ್ನು ಮರೆತರು. ಆದರೆ ಭೂಮಿ ಹಾಗೂ ಕಟ್ಟಡಗಳ ಮೇಲಿನ ತೆರಿಗೆ ಪ್ರಾಂತೀಯ ಸರ್ಕಾರಕ್ಕಷ್ಟೇ ಅಲ್ಲದೆ ಉತ್ತಮ ಆದಾಯಮೂಲವಾಗಿದ್ದು ಇದರಿಂದ ಮುನಿಸಿಪಾಲಿಟಿಗಳು ಪ್ರಾಂತ್ಯದ ಜನರಿಗೆ ಅಗತ್ಯವಿರುವ ಶಿಕ್ಷಣ ಅಭಿವೃದ್ಧಿ, ಉತ್ತಮ ಮನೆ ನಿರ್ಮಾಣ ಹಾಗೂ ಇತರ ಲಾಭದಾಯಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ, ಎಂಬ ಮಾತನ್ನು ಯಾರೂ ಅಲ್ಲಗಳೆಯುವುದಿಲ್ಲ.

ಕೃಷಿಭೂಮಿಯ ಉತ್ತರಾಧಿಕಾರದ ಸಂಬಂಧದ ಸುಂಕವನ್ನು ಕುರಿತು ಸರ್ ರಾಮಸ್ವಾಮಿ ಮುದಲಿಯಾರ್ ಹೇಳಿದ ಮಾತು ಪ್ರಾಂತ್ಯಗಳಿಗೆ ಪ್ರಯೋಜನವಾಗುವುದಿಲ್ಲ. ಅವರು ಸಂಪೂರ್ಣವಾಗಿ ಅಲಕ್ಷ್ಯ ಮಾಡಿದ, ಕೃಷಿಭೂಮಿಯ ಉತ್ತರಾಧಿಕಾರದ ಎಸ್ಟೇಟ್ ಸುಂಕ ಪ್ರಾಂತ್ಯಕ್ಕೆ ಉತ್ತಮ ಆದಾಯಮೂಲ ಎಂಬುದು ಪ್ರಾಂತ್ಯಗಳ ಯೋಚನೆ. ಖನಿಜ ಹಕ್ಕುಗಳ ಮೇಲಿನ ತೆರಿಗೆ, ಹಿಂದೆ ತುಂಬ ಗೌಣ ಅಂಶವಾಗಿದ್ದರೂ, ಈಗ ಖನಿಜ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಿದಾಗ ಹಲವಾರು ಪ್ರಾಂತ್ಯಗಳಿಗೆ ಅವು ಉತ್ತಮ ಆದಾಯ ಮೂಲವಾಗುತ್ತವಷ್ಟೆ ಅಲ್ಲ, ದೇಶಕ್ಕೆ ಉತ್ತಮ ಸಂಪನ್ಮೂಲವಾಗುತ್ತವೆ.

ಮಾನ್ಯರೆ, ಪ್ರಾಂತ್ಯಪಟ್ಟಿಯಲ್ಲಿನ ಪ್ರತಿಯೊಂದು ಬಾಬನ್ನು ವಿವರಿಸುತ್ತ ಸದನವನ್ನು ಕಟ್ಟಿಹಾಕುವುದು ನನ್ನ ಉದ್ದೇಶವಲ್ಲ. ಪಟ್ಟಿ ಎಂದರೆ ಕೇಂದ್ರ ಪಟ್ಟಿಯಲ್ಲಿನ ಬಾಬುಗಳ ಬಗ್ಗೆ ಗಮನ ಸೆಳೆಯಲು ಬಯಸುತ್ತೇನೆ, ತೆರಿಗೆಗೆ ಸಂಬಂಧಿಸಿದ ಬಾಬುಗಳನ್ನು ಪ್ರಾಂತ್ಯಕ್ಕೆ ಸೇರಿಸಿದರೆ ಆ ತೆರಿಗೆಗಳನ್ನು ಪಡೆಯಲು ಆಡಳಿತಾತ್ಮಕವಾಗಿ ಸಾಧ್ಯವೆ ಮತ್ತು ಅವುಗಳನ್ನು ಪ್ರಾಂತ್ಯಗಳಿಗೆ ವಹಿಸಿದರೆ ದೇಶದ ಆರ್ಥಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ತುರ್ತುಕಾರ್ಯವನ್ನು ಮಾಡಬಹುದೆ ಎಂಬುದನ್ನು ವಿಶ್ಲೇಷಿಸೋಣ. ಕೇಂದ್ರ ತೆರಿಗೆಯ ಪಟ್ಟಿ ೧ರ ಬಾಬು ಸಂಖ್ಯೆ ೭೭ರಿಂದ ಪ್ರಾರಂಭವಾಗುತ್ತದೆ. ಕೃಷಿ ವರಮಾನವಲ್ಲದ ಬೇರೆ ವರಮಾನದ ಮೇಲಿನ ತೆರಿಗೆಗಳು ಒಬ್ಬನೇ ವ್ಯಕ್ತಿ ಅಥವಾ ಉದ್ದಿಮೆ ಅಥವಾ ಕಂಪನಿಯ ವ್ಯವಹಾರವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಇರುತ್ತವೆ ಎಂಬುದು ತಿಳಿದಿರುವ ವಿಷಯವೇ. ಒಂದು ಕಂಪನಿಯ ಮುಖ್ಯ ಅಥವಾ ಕೇಂದ್ರ ಕಚೇರಿ ಒಂದು ಪ್ರಾಂತ್ಯದಲ್ಲಿ ಇರುತ್ತದೆ ಹಾಗೂ ಉತ್ಪಾದನಾ ಘಟಕ ಇನ್ನೊಂದು ಪ್ರಾಂತ್ಯದಲ್ಲಿ ಇರುತ್ತದೆ. ಇವೆಲ್ಲ ತೊಂದರೆಗಳ ಕಾರಣದಿಂದಾಗಿ ಹಾಗೂ ಏಕರೂಪತೆಯ ಅಗತ್ಯವಿರುವುದರಿಂದಾಗಿ ವರಮಾನದ ಮೇಲಿನ ತೆರಿಗೆಯನ್ನು ಸರ್ಕಾರವೇ ನಿಗದಿಪಡಿಸಿ ವಸೂಲಿ ಮಾಡಬೇಕಾಗುತ್ತದೆ.

ಬಾಬು ಸಂಖ್ಯೆ ೭೩ರಲ್ಲಿರುವ ವರಮಾನದ ಮೇಲಿನ ತೆರಿಗೆ ಅಥವಾ ನಿಗಮದ ತೆರಿಗೆಯನ್ನು ಪ್ರಾಂತ್ಯಗಳಿಗೆ ವಹಿಸಬಹುದೆಂದು ಇಲ್ಲಿ ಯಾರೂ ಹೇಳುವುದಿಲ್ಲವೆಂದು ಭಾವಿಸುತ್ತೇನೆ. ನೀವು ಹಾಗೆ ಮಾಡಿದರೆ, ಅಮೆರಿಕದ ಕೆಲವು ಸಂಸ್ಥಾನಗಳಲ್ಲಿ ಆದಂತೆ ಇಲ್ಲಿಯೂ ವಿವಿಧ ಪ್ರಾಂತ್ಯಗಳ ನಡುವೆ ಪೈಪೋಟಿ ಪ್ರಾರಂಭವಾಗುತ್ತದೆ. ಅಮೆರಿಕೆಯಲ್ಲಿ ಕೆಲವು ಸಂಸ್ಥಾನಗಳಿಗೆ ವ್ಯವಹಾರವನ್ನು ಆಕರ್ಷಿಸುವ ದೃಷ್ಟಿಯಿಂದ ಮತ್ತು ಬೇರೆ ಸಂಸ್ಥಾನಗಳನ್ನು ಅದೇ ವ್ಯವಹಾರವನ್ನು ಪ್ರಾರಂಭಿಸದಂತೆ ಮಾಡಲು ಹಾಗೂ ಕೆಲವು ಹೆಚ್ಚು

ಅಭಿವೃದ್ಧಿ ಹೊಂದಿದ ಸಂಸ್ಥಾನಗಳು ಕೆಲವು ಉದ್ದಿಮೆಗಳಿಂದ ಹಾಗೂ ಬೇರೆ ವರಮಾನ ಮೂಲಗಳಿಂದ ಅನುಚಿತವಾಗಿ ಹೆಚ್ಚು ವರಮಾನವನ್ನು ಪಡೆಯದಿರುವಂತೆ ಮಾಡಲು ಬೇರೆ ಬೇರೆ ಸಂಸ್ಥಾನಗಳಲ್ಲಿ ಬೇರೆ ಬೇರೆ ತೆರಿಗೆ ದರಗಳನ್ನು ವಿಧಿಸಲಾಯಿತು. ಆದ್ದರಿಂದ ವರಮಾನ ತೆರಿಗೆ ಹಾಗೂ ನಿಗಮ ತೆರಿಗೆ ಕೇಂದ್ರ ಸರ್ಕಾರಕ್ಕೆ ಸೇರಬೇಕಾದುದು ಅಪೇಕ್ಷಣೀಯ. ಹಿಂದೆ, ಆ ತೆರಿಗೆಯ ಉತ್ಪತ್ತಿಗಳನ್ನು ಪ್ರಾಂತ್ಯಗಳಿಗೆ ಹಂಚಲಾಗುತ್ತಿತ್ತು. ಇದು ಸರಿಯಾದ ವಿಧಾನ ಎಂಬುದರಲ್ಲಿ ಸಂಶಯವಿಲ್ಲ. ವರದಿಯ ೭ನೇ ಕಂಡಿಕೆಯ ಕೊನೆಯ ವಾಕ್ಯವನ್ನು ಕುರಿತು ಸರ್ ರಾಮಸ್ವಾಮಿ ಮುದಲಿಯಾರ್ ಹಾಸ್ಯಮಾಡಿದರು. ಆ ವಾಕ್ಯವೇನೆಂದರೆ "ಈ ಪೈಕಿ ಕೆಲವು ತೆರಿಗೆಗಳ ಉತ್ಪತ್ತಿಗಳನ್ನು ವಹಿಸಿಕೊಡುವುದಕ್ಕೆ ಅಥವಾ ಪಾಲುಮಾಡುವುದಕ್ಕೆ ಒಕ್ಕೂಟವು ಕಾಲಕಾಲಕ್ಕೆ ಮಾಡುವ ನಿರ್ಧಾರವನ್ನಾಧರಿಸಿ ಅವಕಾಶ ಕಲ್ಪಿಸಬೇಕು." "ಕಾಲಕಾಲಕ್ಕೆ" ಎಂಬ ಪದಗಳ ಬಗ್ಗೆ ಸರ್ ರಾಮಸ್ವಾಮಿ ಕಟಕಿಯಾಡಿದರು. ನಾನು ಹೇಳುವುದೇನೆಂದರೆ ಅದು ಸಕಾಲಕ್ಕೆ ಆಗಬೇಕು. ಬೇರೆ ಬೇರೆ ಪ್ರಾಂತ್ಯಗಳ ಅಗತ್ಯಗಳು ಕಾಲಕಾಲಕ್ಕೆ ಬದಲಾಗುತ್ತವೆ. ಸನ್ನಿವೇಶಗಳಿಗನುಗುಣವಾಗಿ ಕೇಂದ್ರ ಸರ್ಕಾರವು ಯಾವುದೇ ಪ್ರಾಂತ್ಯಕ್ಕೆ ಯಾವುದೇ ತೊಂದರೆಯಾಗದಂತೆ ನೋಡಬೇಕಾಗುತ್ತದೆ. ೧೯೪೩ರ ಕ್ಷಾಮ ಪರಿಸ್ಥಿತಿಯಲ್ಲಿ ಬಂಗಾಳವು ಎದುರಿಸುತ್ತಿದ್ದ ದುಃಖಕರ ಸಂದರ್ಭವನ್ನು ಸದನಕ್ಕೆ ನೆನೆಪಿಸಬಹುದೇ? ಪ್ರಾಂತ್ಯಗಳ ಅಗತ್ಯಗಳಿಗನುಗುಣವಾಗಿ ಕಾಲಕಾಲಕ್ಕೆ ತೆರಿಗೆ ಉತ್ಪತ್ತಿಗಳನ್ನು ಹಂಚಬಹುದು ಎಂಬ ಏರ್ಪಾಡು ಇಲ್ಲವಾಗಿದ್ದರೆ ಕೇಂದ್ರ ಸರ್ಕಾರವು ಬಂಗಾಲಕ್ಕೆ ಸಹಾಯಮಾಡಲು ಸಾಧ್ಯವಾಗದೇ ಹೋಗಿದ್ದರೆ ೧೯೪೩ರಲ್ಲಿ ಮತ್ತು ತದನಂತರ ಆ ಪ್ರಾರಂಭದ ಸ್ಥಿತಿ ಏನಾಗುತ್ತಿತ್ತು? ಸದ್ಯದ ಪರಿಸ್ಥಿತಿಯಲ್ಲಿ ಉತ್ತರಭಾರತದಲ್ಲಿ ಕ್ಷಾಮ ಎದುರಾಗುವುದರಲ್ಲಿದೆ. ಮುಂಬರುವ ದಿನಗಳಲ್ಲಿ ಇತರ ಪ್ರಾಂತ್ಯಗಳಿಗಿಂತ ಉತ್ತರಭಾರತದ ಅಗತ್ಯಗಳು ಹೆಚ್ಚಿನವು ಎಂಬುದನ್ನು ಮುಂಗಾಣಬಲ್ಲವರು ಯಾರಿದ್ದಾರೆ? ಆದ್ದರಿಂದ ಮಾನ್ಯರೆ, ಬೇರೆ ಬೇರೆ ಪ್ರಾಂತ್ಯಗಳ ಹಾಗೂ ಘಟಕಗಳಿಗೆ ತಕ್ಕಮಟ್ಟಿನ ಸಾಮ್ಯತೆ ಇರಬೇಕು. ಕೆಲವು ಪ್ರಾಂತ್ಯಗಳು ಇತರ ಪ್ರಾಂತ್ಯಗಳಿಗಿಂತ ಔದ್ಯಮಿಕವಾಗಿ ಮುಂದುವರಿದಿವೆ. ನಾವು ಹೆಚ್ಚು ಹಿಂದುಳಿದ ಪ್ರಾಂತ್ಯಗಳನ್ನು ಹೆಚ್ಚು ಮುಂದುವರಿದ ಪ್ರಾಂತ್ಯಗಳ ಮಟ್ಟಕ್ಕೆ ಸಾಧ್ಯವಾದ ಮಟ್ಟಿಗೆ ತರುವ ಅಗತ್ಯವಿದೆ. ಸರ್ ರಾಮಸ್ವಾಮಿ ಮುದಲಿಯಾರ್ ಒತ್ತು ಕೊಟ್ಟು ಹೇಳಿದರು. ಭವಿಷ್ಯದಲ್ಲಿ ಆ ಪ್ರಾಂತ್ಯಗಳ ಬೇಡಿಕೆಗಳು ಕೃಷಿ ಕೈಗಾರಿಕೆಗಳ ಅಭಿವೃದ್ಧಿಗೆ ಮಾತ್ರವಲ್ಲದೆ ಪ್ರಮಾಣಾನುಸಾರವಾಗಿ ಆರೋಗ್ಯ, ಶಿಕ್ಷಣ ಹಾಗೂ ಇತರ ರಾಷ್ಟ್ರನಿರ್ಮಾಣ ಚಟುವಟಿಕೆಗಳ ಅಭಿವೃದ್ಧಿಗಾಗಿ ಹೆಚ್ಚಾಗಬಹುದು. ವರದಿಯ ಬಗ್ಗೆ ನಾವು ನೀಡಬೇಕಾದಷ್ಟು ಗಮನ ನೀಡದೆ ಅಂತಾರಾಷ್ಟ್ರೀಯ ಅನುಭವ ಹೊಂದಿರುವ ದೀರ್ಘಕಾಲದವರೆಗೆ ಭಾರತ ಸರ್ಕಾರದ ಕಾರ್ಯಕ್ಕಾಗಿ ಪರಿಷತ್ತಿನ ಸದಸ್ಯತ್ವದ ಅನುಭವ ಹೊಂದಿರುವ ಸರ್ ರಾಮಸ್ವಾಮಿಯಂಥವರು ತಮ್ಮ ಜಾಣ್ಮೆಯ ಕೊಡುಗೆ ನೀಡದೆ ವರದಿಯಲ್ಲಿರುವ ಪ್ರತಿಯೊಂದು ಪದದ ಬಗೆಗೂ ಸೂಕ್ತ ಗಮನ ನೀಡಿರುವ ಬರಹಗಾರರನ್ನು ಟೀಕಿಸುವುದರಿಂದ ಪ್ರಯೋಜನವಿಲ್ಲ. ನಾಸಿಕ್ ಮುದ್ರಣಾಲಯ ಕೇಂದ್ರ ಸರ್ಕಾರಕ್ಕೆ ಫಲಪ್ರದ ಆದಾಯದ ಮೂಲ ಎಂದು ಸರ್ ರಾಮಸ್ವಾಮಿ ಹೇಳಿದರು. ಆಸಮಯದಲ್ಲಿ ಸರ್ ರಾಮಸ್ವಾಮಿ ಮುದಲಿಯಾರರು ಭಾರತದ ಸ್ಟರ್ಲಿಂಗ್ ಶಿಲ್ಕುಗಳ ಬಗ್ಗೆ ದೃಢವಾಗಿ ಮಾತನಾಡುತ್ತ, ಅದು ನಮ್ಮ ದೇಶದ ಅಮೂಲ್ಯ ಆಸ್ತಿ ಎಂದು ಹೇಳುತ್ತಿದ್ದರು, ಇಂದು ಅದೇ ಸರ್ ರಾಮಸ್ವಾಮಿಯವರು ನಮ್ಮ ಕರೆನ್ಸಿಯನ್ನು ಗಂಟುಮಾಡುತ್ತಿರುವ ಬಗ್ಗೆ ಹೇಳುತ್ತ ಅದೇ ಸ್ಟರ್ಲಿಂಗ್ ಶಿಲ್ಕಿನ ಅಸ್ತಿತ್ವವನ್ನು ಅಲಕ್ಷಿಸುತ್ತಾರೆ. ಸ್ಟರ್ಲಿಂಗ್‌ನ ಲಾಭಗಳ ಬಗ್ಗೆ ಗಟ್ಟಿಯಾಗಿ ಮಾತನಾಡುತ್ತಲೇ ಇಂಗ್ಲೆಂಡಿಗೆ ಇನ್ನೆಲ್ಲಿಯೂ ದೊರಕಲಾರದ ಅಗ್ಗದ ಬೆಲೆಗೆ ಅದೂ ನಿಯಂತ್ರಿತ ಬೆಲೆಗಿಂತ ಕಡಿಮೆ ಬೆಲೆಗೆ ಸ್ಟರ್ಲಿಂಗ್ ಶಿಲ್ಕಿಗಿದ್ದದ್ದಕ್ಕಿಂತ ಕಡಿಮೆ ಬೆಲೆಗೆ ನಮ್ಮ ದೇಶದ ಸರಕುಗಳ ಮಾರಾಟಮಾಡಿದರು. ಈಗ ನಾಸಿಕ್ ಮುದ್ರಣಾಲಯದ ವಿಷಯಕ್ಕೆ ನಮ್ಮ ಗಮನ ಸೆಳೆಯಲು ನೋಡುತ್ತಾರೆ ಆದರೆ ತಾವು ಹಣದುಬ್ಬರವನ್ನು ಬೆಂಬಲಿಸುವುದಿಲ್ಲವೆಂದು ಹೇಳುತ್ತಾರೆ. ಒಂದು ದೇಶದ ಹಣಕಾಸಿನ ವಿಷಯ ಬಹಳ ಸೂಕ್ಷ್ಮಸ್ವರೂಪದ್ದಾಗಿರುತ್ತದೆ. ನಮ್ಮ ದೇಶದ ಸದ್ಯದ ಹಣಕಾಸು ಸ್ಥಿತಿ ಹೇಗಿದೆ

ಎಂಬುದು ಅವರಿಗೆ ಗೊತ್ತಿದೆಯೇ? ಮುಂಚೆ ಭಾರತ ಸರ್ಕಾರವು ಹಣಕಾಸು ಮಾರುಕಟ್ಟೆಯಿಂದ ವರ್ಷವೊಂದಕ್ಕೆ ೧೦೦ರಿಂದ ೧೫೦ ಕೋಟಿ ರೂ. ಎರವಲು ಪಡೆಯುತ್ತಿತ್ತು. ಆದರೆ ಈಗಿನ ಸ್ಥಿತಿ ಹೇಗಿದೆ? ಭಾರತೀಯ ರಿಜರ್ವ್ ಬ್ಯಾಂಕ್ ಸರ್ಕಾರದ ಭದ್ರತೆಗಳನ್ನು ಕಾಪಾಡುವುದಕ್ಕಾಗಿ, ಸಾಲ ಎತ್ತುವುದಕ್ಕಾಗಿ ಮಾರುಕಟ್ಟೆಗೆ ಹೋಗದೆ ಸರ್ಕಾರದ ಭಧ್ರತೆಗಳನ್ನು ಖರೀದಿಸಲು ಮಾರುಕಟ್ಟೆಯನ್ನು ಪ್ರವೇಶಿಸುತ್ತದೆ. ನಮ್ಮ ದೇಶದ ಪ್ರಾಂತ್ಯಗಳ, ಪ್ರಾಂತ್ಯಗಳ ಜನತೆಯ ಹಿತದೃಷ್ಟಿಯಿಂದ, ದೇಶದ ರಕ್ಷಣೆಯನ್ನು ನಿರ್ವಹಿಸುವ ಉದ್ದಿಮೆಗಳ ಅಭಿವೃದ್ಧಿಯನ್ನು ನೋಡಿಕೊಳ್ಳುವ ನೀರಾವರಿ, ಜಲ ವಿದ್ಯುತ್ ಯೋಜನೆ ಹಾಗೂ ಇತರ ವಿಧಾನಗಳ ಮೂಲಕ ಕೃಷಿಗೆ ಸಹಾಯಮಾಡುವ ಕೇಂದ್ರ ಸರ್ಕಾರವು ಬಲಶಾಲಿಯಾಗಿರಬೇಕು ಮತ್ತು ನಾವು ನಮ್ಮ ಸೈದ್ಧಾಂತಿಕ ವಾದಗಳಿಂದ ಕೇಂದ್ರ ಸರ್ಕಾರವನ್ನು ದುರ್ಬಲಗೊಳಿಸಬಾರದು. ಅಂತೆಯೇ, ಮಾನ್ಯರೆ, ಕೇಂದ್ರ ಪಟ್ಟಿಯಲ್ಲಿರುವ ತೆರಿಗೆಗಳ ನಿರ್ವಹಣೆಯನ್ನು ಕೇಂದ್ರ ಸರ್ಕಾರವು ಅನುಕೂಲಾನುಸಾರ ಬಳಸುತ್ತಿದ್ದು ಅವು ಬೇರೆ ಬೇರೆ ಪ್ರಾಂತ್ಯಗಳ ನಡುವೆ ಏಕರೂಪತೆ ಸಾಧಿಸಲು ಹಾಗೂ ಕೃಷಿಕೈಗಾರಿಕೆ ಮುಂತಾದ ಕ್ಷೇತ್ರಗಳ ಅಭಿವೃದ್ಧಿಯ ಉದ್ದೇಶಕ್ಕೂ ಅತ್ಯಗತ್ಯವಾಗಿವೆ, ಎಂಬುದು ನಿಮಗೆ ತಿಳಿದಿದೆ. ನಾವು ಬಹಳ ದೂರಪ್ರದೇಶಗಳಿಗೆ ರೈಲುಮಾರ್ಗ ಕಲ್ಪಿಸಬೇಕಾಗಿದೆ, ಇನ್ನೂ ಹಲವಾರು ಅಂಶಗಳನ್ನು ಅಭಿವೃದ್ಧಿಪಡಿಸಬೇಕಾಗಿದ್ದು ಅದನ್ನು ಕೇಂದ್ರ ಸರ್ಕಾರವೇ ಮಾಡಬೇಕಾಗುತ್ತದೆ, ಈ ಪ್ರತಿಯೊಂದನ್ನು ಸರಿಯಾಗಿ ಅಭಿವೃದ್ಧಿಪಡಿಸದಿದ್ದರೆ ನಾವು ನಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಆಗುವುದಿಲ್ಲ ಹಾಗೂ ಶಿಕ್ಷಣ, ಆರೋಗ್ಯ ಅಥವಾ ಕೃಷಿ ಕ್ಷೇತ್ರವನ್ನಾಗಲೀ ಅಥವಾ ಕಾತರರಾಗಿರುವ ಇತರ ರಾಷ್ಟ್ರನಿರ್ಮಾಣ ಚಟುವಟಿಕೆಗಳನ್ನಾಗಲೀ ಅಭಿವೃದ್ಧಿಪಡಿಸಲು ಸಾಧ್ಯವಾಗುವುದಿಲ್ಲ. ಮಾನ್ಯರೆ, ಕೊನೆಯಲ್ಲಿ ಈ ತೆರಿಗೆ ಉತ್ಪತ್ತಿಗಳು ಹೋಗುವುದಾದರೂ ಎಲ್ಲಿಗೆ? ಎಲ್ಲ ಪ್ರಾಂತ್ಯಗಳ ಪ್ರತಿನಿಧಿಗಳು ಸೇರಿ, ತೆರಿಗೆ ಉತ್ಪತ್ತಿಗಳನ್ನು ಹೇಗೆ ವೆಚ್ಚಮಾಡಬೇಕೆಂದು ನಿರ್ಧರಿಸುವ ವೇದಿಕೆಯಾಗಿರುವ ಕೇಂದ್ರ ಶಾಸಕಾಂಗದ ಹೊಣೆ ಹೊತ್ತಿರುವ, ಇಡೀ ದೇಶವನ್ನು ಪ್ರತಿನಿಧಿಸುವ ಕೇಂದ್ರ ಸರ್ಕಾರವು ದೇಶದ ಹಿತಕ್ಕೆ ಬಳಸುವ ಬದಲು, ತೆರಿಗೆ ಉತ್ಪತ್ತಿಗಳನ್ನು ಪೋಲು ಮಾಡಲು ಪ್ರಾಂತ್ಯಪ್ರತಿನಿಧಿಗಳು ಅನುಮತಿಸುವರೇ? ಅವರು ತೆರಿಗೆ ಉತ್ಪತ್ತಿಗಳನ್ನು ಪ್ರತ್ಯಕ್ಷವಾಗಿ ದೇಶದ ಹಿತಕ್ಕೆ ಅಥವಾ ಭಾಗಶಃ ಉತ್ಪತ್ತಿಗಳನ್ನು ಪ್ರಾಂತ್ಯಗಳಿಗೆ ಹಂಚುವ ಮೂಲಕ ವಿನಿಯೋಗಿಸುತ್ತಾರೆ. ಹಾಗೆ ಇಡೀ ದೇಶದ ಪ್ರಗತಿಗಾಗಿ ಬಳಸುವುದು ಬದ್ಧಕರ್ತವ್ಯವೇ ಆಗುತ್ತದೆ. ಆದ್ದರಿಂದ ಇಲ್ಲಿರುವ ನನ್ನ ಗೌರವಾನ್ವಿತ ಸ್ನೇಹಿತರನ್ನು ಕೇಂದ್ರ ಪ್ರಾಂತ್ಯಗಳು ಎಂಬ ಘೋಷಣೆಯಿಂದ ವಿಚಲಿತರಾಗದೆ ಇಡೀ ದೇಶ ಯಾವುದರಲ್ಲಿದೆ ಎಂಬ ಬಗ್ಗೆ ಮನದಾಳದಿಂದ ಪರಿಶೀಲಿಸಿ ಎಂದು ವಿನಂತಿಸುತ್ತೇನೆ. ನಮ್ಮ ಸ್ವಾತಂತ್ರ್ಯವನ್ನು ನಾವು ಕಾಪಾಡಿಕೊಳ್ಳಬೇಕು. ಅದಕ್ಕಾಗಿ ರಕ್ಷಣಾಸೇವೆಯನ್ನು ಅಭಿವೃದ್ಧಿಪಡಿಸಬೇಕು. ನಮ್ಮ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸೋಣ. ಇದರಿಂದ ಇಡೀ ದೇಶದ ಸಂಪತ್ತು ಹೆಚ್ಚುತ್ತದೆ. ದೇಶದ ಒಟ್ಟು ಸಂಪತ್ತನ್ನಾಧರಿಸಿ ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಕಲೆ ಹಾಗೂ ಪ್ರತಿಯೊಬ್ಬನ ಜೀವನವನ್ನು ಶ್ರೀಮಂತ ಸುಂದರ ಹಾಗೂ ಸಂತೋಷಭರಿತವಾಗಿಸುವ ಎಲ್ಲ ಅಂಶಗಳನ್ನೂ ರೂಪಿಸಬಲ್ಲವು (ಹರ್ಷೋದ್ಗಾರ).

**ಶ್ರೀ ಒಮಿಯೊ ಕುಮಾರ್ ದಾಸ್** (ಅಸ್ಸಾಮ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈವರೆಗೆ ನಡೆದ, ವಿಷಯದ ಮೇಲೆ ಬೆಳಕು ಚೆಲ್ಲುವ ಚರ್ಚೆಯ ಅನಂತರ ನಾನು ಚರ್ಚೆಯಲ್ಲಿ ಪಾಲ್ಗೊಳ್ಳಲು ಬಯಸಿರಲಿಲ್ಲ. ಆದರೆ ನನ್ನ ಪ್ರಾಂತ್ಯದ ಆಸಕ್ತಿಯನ್ನು ಒಳಗೊಂಡಿರುವ ಕೆಲವು ಮಹತ್ತ್ವದ ಅಂಶಗಳನ್ನು ಬೆಳಕಿಗೆ ತಾರದಿದ್ದರೆ ನಾನು ಕರ್ತವ್ಯಚ್ಯುತನಾದಂತೆ ಎನಿಸಿತು. ಮಾನ್ಯರೆ, ಪ್ರಾರಂಭದಲ್ಲಿ ನಾನು, ಈ ವರದಿಯನ್ನು ಸಿದ್ಧಪಡಿಸಿದ ಸಮಿತಿ ಸದಸ್ಯರನ್ನು ಮನಃಪೂರ್ವಕವಾಗಿ ಅಭಿನಂದಿಸಲಾರೆ ಎಂದು ಒಪ್ಪಿಕೊಳ್ಳಲೇಬೇಕು. ಮಾನ್ಯರೆ, ಒಕ್ಕೂಟ ಸಂವಿಧಾನದಲ್ಲಿ ಅಧಿಕಾರಗಳ ಹಂಚಿಕೆ ಅತ್ಯಂತ ಮಹತ್ತ್ವಪೂರ್ಣ ಅಂಶ ಎಂಬುದನ್ನು ನಾನು ಒಪ್ಪುತ್ತೇನೆ. ಕೇಂದ್ರ ಹಾಗೂ ಪ್ರಾಂತ್ಯಗಳ ಮಧ್ಯೆ ಅಧಿಕಾರಗಳನ್ನು ಹೇಗೆ ಹಂಚಿಕೆ ಮಾಡಬೇಕೆಂಬುದೇ ಎಲ್ಲ

ಸಂವಿಧಾನಗಳಲ್ಲಿ ವಿವಾದಾಸ್ಪದ ಅಂಶವಾಗಿದೆ. ಮಿಕ್ಕ ಅಧಿಕಾರಗಳ ಹಂಚಿಕೆ ಭಾರತದ ರಾಜಕೀಯ ಕ್ಷೇತ್ರದಲ್ಲಿ ಬಹಳ ವರ್ಷಗಳಿಂದ ವಿವಾದಿತ ಅಂಶವಾಗಿತ್ತು. ಒಂದು ಗುಂಪಿನ ಜನ ಮಿಕ್ಕ ಅಧಿಕಾರಗಳು ಪ್ರಾಂತ್ಯಗಳಲ್ಲಿರಬೇಕೆಂದರೆ ಇನ್ನೊಂದು ಗುಂಪಿನ ಜನರು ಅದು ಕೇಂದ್ರದಲ್ಲಿ ನಿಹಿತವಾಗಿರಬೇಕೆಂದರು. ಆಗ ಕಾಂಗ್ರೆಸ್ ಒಂದು ಗುಂಪಿನ ಜನತೆಯನ್ನು ಸಮಾಧಾನಪಡಿಸಲು ಮಿಕ್ಕ ಅಧಿಕಾರಗಳನ್ನು ಪ್ರಾಂತ್ಯಗಳಿಗೆ ನೀಡುವ ಕ್ರಮ ಕೈಗೊಂಡಿತು. ಇಂದು ಕಾಂಗ್ರೆಸ್ ಕೈಗೊಂಡ ಪರ್ಯಾಯಕ್ರಮ ಅನಿವಾರ್ಯವಾದದ್ದು; ಆದರೆ ವಿಷಾದನೀಯ ಭಾರತ ವಿಭಜನೆಯ ತರ್ಕ ನನಗೆ ಅರ್ಥವಾಗುತ್ತಿಲ್ಲ. ಕೇಂದ್ರಕ್ಕೆ ಮಿಕ್ಕ ಅಧಿಕಾರಗಳನ್ನು ನೀಡುವ ಕ್ರಮ ಕೈಗೊಂಡ ಅನಂತರ ಸಮಿತಿಯ ಸದಸ್ಯರು ರಾಜ್ಯಗಳ ಬಗ್ಗೆ ವಿಭಿನ್ನ ಪ್ರವೃತ್ತಿ ತೋರಿದ್ದಾರೆ. ಆ ಕ್ರಮದ ಅನಂತರ ಅವರು ರಾಜ್ಯ ಹಾಗೂ ಪ್ರಾಂತ್ಯಗಳ ಬಗ್ಗೆ ಏಕರೂಪ ಕಾರ್ಯನೀತಿಯನ್ನು ಅನುಸರಿಸಬೇಕಿತ್ತು. ಪ್ರಾಂತ್ಯಗಳಲ್ಲಿ ಜನತೆಯ ಸರ್ಕಾರವಿದ್ದರೂ ಅದನ್ನು ದೂರತಳ್ಳಿ, ಆಡಳಿತದಲ್ಲಿ, ಜನತೆಯ ಪಾತ್ರವೇ ಇಲ್ಲದ ರಾಜ್ಯಗಳಿಗೆ ನಿರಂಕುಶ ಪ್ರಭುತ್ವವನ್ನು ನೀಡಿದ್ದಾರೆ. ಇದು ಪ್ರಜಾಸತ್ತೆಯ ನಿರಾಕರಣೆಯಾಗಿ ತೋರುತ್ತದೆ.

ಮಾನ್ಯರೆ, ಹಣಕಾಸು ಹೊಂದಾಣಿಕೆಗಳ ವಿಷಯದಲ್ಲಿ ಪ್ರಾಂತ್ಯಗಳೊಡನೆ ಯುಕ್ತವಾಗಿ ನಡೆದುಕೊಂಡು ನಂಬಿಕೆ ಗಳಿಸಿದ ಆಡಳಿತ ವ್ಯವಸ್ಥೆಯ ಭಾಗಿದಾರರಾದ ನಾವು ಕೇಂದ್ರವನ್ನು ಬಲಗೊಳಿಸುವ ಆತುರದಲ್ಲಿ ಪ್ರಾಂತ್ಯಗಳ ಹಿತವನ್ನು ಬಲಿ ಕೊಟ್ಟು, ಕೇಂದ್ರವನ್ನು ಬಲಪಡಿಸುವ ಅದೇ ಕಾರ್ಯನೀತಿಯನ್ನು ಮತ್ತೆ ಅಳವಡಿಸಿಕೊಳ್ಳುತ್ತಿರುವಂತೆನಿಸುತ್ತಿದೆ. ಕೇಂದ್ರವನ್ನು ನಾವು ಬಲಪಡಿಸಲೇಬೇಕು. ನಾವು ಎದುರಿಸಿದ ಸ್ಥಿತಿ ಒಂದು ಕಡೆ ಬೇಗುದಿ, ಇನ್ನೊಂದೆಡೆ ಕ್ರಿಯಾತ್ಮಕ. ಆದರೆ ನಾವು ಪ್ರಾಂತ್ಯಗಳನ್ನು ದುರ್ಬಲಗೊಳಿಸಬಾರದು. ಕಾಂಗ್ರೆಸ್‌ನ ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿ ಅದನ್ನು ಬಲಪಡಿಸುವ ಆತುರಗಲ್ಲಿ ಘಟಕಗಳನ್ನು ಅಲಕ್ಷಿಸಿ, ರಾಷ್ಟ್ರನಿರ್ಮಾಣ ಚಟುವಟಿಕೆಗಳಿಗಾಗಿ ಅವು ಹಣವಿಲ್ಲದೆ ಕೊರಗುತ್ತಿದ್ದ ಸ್ಥಿತಿಯೇ ಈಗಲೂ ಇಟ, ಆ ಮನೋಭಾವದಲ್ಲಿ ಯಾವ ಬದಲಾವಣೆಯೂ ಕಾಣುತ್ತಿಲ್ಲ. ಪ್ರಾಂತ್ಯಗಳ ಹಿತವನ್ನು ಬಲಿಕೊಟ್ಟು ಕೇಂದ್ರ ಸರ್ಕಾರವನ್ನು ಬಲಪಡಿಸುವ ಭಾವನೆಯೇ ಇಂದಿಗೂ ಇದೆ.

ಮಾನ್ಯರೆ, ನನ್ನ ಪ್ರಾಂತ್ಯದ ಪರವಾಗಿ ಮಾತನಾಡಲು ಈ ಸಂದರ್ಭವನ್ನು ಬಳಸಿಕೊಳ್ಳುವ ಉದ್ದೇಶ ನನಗಿಲ್ಲ. ನಮ್ಮ ಪ್ರಾಂತ್ಯದ ಹಣಕಾಸಿನ ಪರಿಸ್ಥಿತಿ ಕುರಿತ ಕೆಲ ಅಂಶಗಳನ್ನು ಬೆಳಕಿಗೆ ತಾರದಿದ್ದರೆ ನಾನು ಕರ್ತವ್ಯಚ್ಯುತಿ ಮಾಡಿದ ಭಾವ ನನ್ನನ್ನು ಕಾಡುತ್ತದೆ.

ನನ್ನ ಪ್ರಾಂತ್ಯವಾದ ಅಸ್ಸಾಮ್ ಚಹಾ ಹಾಗೂ ಪೆಟ್ರೋಲ್‌ನ ಅಬಕಾರಿ ಹಾಗೂ ರಫ್ತು ಸುಂಕದ ರೂಪದಲ್ಲಿ ಕೇಂದ್ರ ಖಜಾನೆಗೆ ವಾರ್ಷಿಕ ೮ ಕೋಟಿ ರೂ.ಗಳಷ್ಟು ಕೊಡುಗೆ ನೀಡುತ್ತ ಬಂದಿದೆ ಆದರೆ ಅಸ್ಸಾಮ್‌ಗೆ ಕೇವಲ ೩೦ ಲಕ್ಷ ರೂ.ಗಳ ಸಹಾಯಧನ ನೀಡಲಾಯಿತು. ಇಂದಿಗೂ ಅದರ ಮನೋಭಾವದಲ್ಲಿ ಯಾವುದೇ ಬದಲಾವಣೆ ನನಗೆ ಕಂಡುಬರುತ್ತಿಲ್ಲ ನಮ್ಮ ನಾಯಕರು ಭಾರತ ಸರ್ಕಾರ ಅಧಿನಿಯಮದ ಪ್ರಭಾವವನ್ನು ಕೊಡವಿಕೊಂಡು ಎದ್ದೇಳಲು ಇನ್ನೂ ಸಮರ್ಥರಾಗಿಲ್ಲ ಎಂದು ಹೇಳಲು ಖೇದವಾಗುತ್ತದೆ. ಕೇಂದ್ರದಲ್ಲಿ ಮಾತ್ರವಲ್ಲ ಪ್ರಾಂತ್ಯಗಳಲ್ಲೂ ಕಾಂಗ್ರೆಸ್ ಸಚಿವಸಂಪುಟವನ್ನು ಸ್ಥಾಪಿಸಿ ಜನತೆ ಕ್ರಾಂತಿಕಾರಿ ಬದಲಾವಣೆಯನ್ನು ಎದುರು ನೋಡುತ್ತಿದ್ದಾರೆ, ಹಾಗೆ ನಿರೀಕ್ಷಿಸುವುದು ನ್ಯಾಯೋಚಿತವಲ್ಲ ಎಂದು ಹೇಳಲಾಗದು. ಕೆಂಪು ಪಟ್ಟಿಯ ಆಕ್ಟೋಪಸ್ ಹಿಡಿತದಿಂದ ನಮ್ಮ ಆಡಳಿತವನ್ನು ಬಿಡುಗಡೆಗೊಳಿಸಿ, ನಮ್ಮ ಕಾರ್ಯಕ್ರಮಗಳನ್ನು ವೇಗವಾಗಿ ಮಾಡಲು ನಾವು ಹೊಸಹಾದಿ ಗುರುತಿಸಬೇಕಾಗಿದೆ.

ಮುಕ್ತಾಯಗೊಳಿಸುವುದಕ್ಕೆ ಮುಂಚೆ, ಒಕ್ಕೂಟ ಪಟ್ಟಿಯಲ್ಲಿ ತಿಳಿಸಲಾದ ವಿಷಯಗಳ ಪೈಕಿ ನನ್ನ ಪ್ರಾಂತ್ಯ ಆಸಕ್ತಿ ಹೊಂದಿರುವ ವಲಸೆ ಹೋಗುವಿಕೆ ಹಾಗೂ ದೇಶೀಕರಣದ ವಿಷಯದ ಕುರಿತು ಒಂದು ಅಂಶವನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಇವೆರಡು ವಿಷಯಗಳನ್ನು ಸಮವರ್ತಿ ಪಟ್ಟಿಯಲ್ಲಿ

ಸೇರಿಸಬೇಕು ಅಥವಾ ಇವೆರಡು ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಪ್ರಾಂತ್ಯಕ್ಕೆ ಅವಕಾಶವಿರುವಂತೆ ಅನುಮತಿಸಿ ಬದಲಾವಣೆ ಮಾಡಬೇಕು ಎಂದು ನನ್ನ ಅಭಿಪ್ರಾಯ ಬೇರೆ ಪ್ರಾಂತ್ಯಗಳ ಭಾವನೆ ಏನಿದೆಯೋ ನಾನರಿಯೆ, ಆದರೆ ನಮ್ಮ ಮಟ್ಟಿಗೆ ಇದು ಯಾತನೆಯ ವಿಷಯವೇ. ಸಾಮೂಹಿಕವಾಗಿ ಅಸ್ಸಾಮ್‌ಗೆ ವಲಸೆ ಬರುವವರಿಂದಾಗಿ ಅಸ್ಸಾಮ್ ಜನಜೀವನವೇ ಬದಲಾಗಿದೆ. ಜನಸಂಖ್ಯಾ ವಿತರಣೆಯಲ್ಲಿ ತೊಂದರೆಯಾಗಿದೆ. ಕೋಮುತೀರ್ಪು ಹಾಗೂ ಸಮೂಹ ಪ್ರಾತಿನಿಧ್ಯದಿಂದಾಗಿ ಭಾರೀ ಪ್ರಮಾಣದಲ್ಲಾಗುವ ಸಾಮೂಹಿಕ ವಲಸೆಗೆ ಅವಕಾಶ ಕೊಡುವುದು ನಮಗೆ ಯುಕ್ತವೆನಿಸಿಲ್ಲ. ಒಕ್ಕಲೆಬ್ಬಿಸುವ ಕಾರ್ಯವನ್ನು ನಮ್ಮ ಪ್ರಾಂತ್ಯದಲ್ಲಿ ಮಾಡುತ್ತಿದ್ದರೂ ನಮ್ಮ ಪ್ರಾಂತ್ಯದವರಲ್ಲದವರು ಸರ್ಕಾರಿ ಭೂಮಿಗಳಲ್ಲಿ ಅತಿಕ್ರಮಪ್ರವೇಶ ಮಾಡಿರುವರು. ಅವರು ಈ ಪ್ರಾಂತ್ಯದಲ್ಲಿದ್ದು, ತಮ್ಮ ಸಂಬಂಧಿಕರೊಡನೆ ಬದುಕುತ್ತಿದ್ದಾರೆ. ಮಾನ್ಯರೆ, ಸಮಿತಿಯ ಸದಸ್ಯರನ್ನು ಅದರಲ್ಲೂ ವಿಶೇಷವಾಗಿ ಈ ಪ್ರಸ್ತಾವದ ಮಂಡನೆಕಾರರನ್ನು ನಾನು, ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಯೋಚಿಸಿ, ಈ ವಿಷಯದಲ್ಲಿ ಪ್ರಾಂತ್ಯಗಳಿಗೆ ಹೆಚ್ಚಿನ ಅನುಮತಿ ನೀಡಬೇಕೆಂದು ಕೇಳುತ್ತೇನೆ. ಅಸ್ಸಾಮ್, ಅಸ್ಸಾಮಿಗಳ ತಾಯ್ನಾಡು. ಅಲ್ಲೇ ಅವರಿಗೆ ರಕ್ಷಣೆ ಒದಗಿಸದಿದ್ದರೆ, ಈ ಸದನಕ್ಕೆ ಬರಲು ನನಗೆ ಯಾವುದೇ ಸಮರ್ಥನೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಅಸ್ಸಾಮಿಗಳ ಸಂಸ್ಕೃತಿ ಬೇರೆ ಪ್ರಾಂತ್ಯಗಳ ಸಂಸ್ಕೃತಿಗಿಂತ ವಿಭಿನ್ನವಾಗಿದೆ. ಅಸ್ಸಾಮಿಗಳಿಗೆ ಅವರದೇ ಆದ ಪ್ರತ್ಯೇಕ ಭಾಷೆ ಇದೆ. ಅದರ ಮೂಲ ಸಂಸ್ಕೃತವೇ ಆಗಿದ್ದರೂ, ಟಿಬೆಟಿಯನ್ ಹಾಗೂ ಬರ್ಮಾ ಪ್ರಭಾವವಾಗಿದೆ. ನಾವು ಅಸ್ಸಾಮ್‌ನ ಜನರನ್ನು ರಕ್ಷಿಸಬೇಕು. ಈ ದೃಷ್ಟಿಯಿಂದ ಈ ನಿಲುವಳಿಯ ಮಂಡನೆಕಾರರನ್ನು ಕ್ರಮ ಕೈಗೊಳ್ಳಲು ಈ ಪ್ರಾಂತ್ಯಕ್ಕೆ ಅವಕಾಶ ಕಲ್ಪಿಸಬೇಕೆಂದು ಕೋರುತ್ತೇನೆ. ಇದರೊಂದಿಗೆ, ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸಿದ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಬಿ.ಎಲ್. ಮಿಟ್ಟರ್** (ಬರೋಡಾ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಹೇಳಬೇಕಾಗಿರುವುದನ್ನು ಹೇಳಲು, ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಏಕೆಂದರೆ ನಾನು ಹೇಳಬೇಕಾಗಿರುವ ವಿಷಯ ಈ ವರೆಗಿನ ಚರ್ಚೆಯಲ್ಲಿ ಪ್ರಸ್ತಾವವಾಗಿಲ್ಲ. ವರದಿಯಲ್ಲಿ ಮಾಡಿರುವ ಅಧಿಕಾರ ಹಂಚಿಕೆ ಅವೈಚಾರಿಕವಾಗಿದೆ ಎಂಬ ಗ್ರಹಿಕೆಯಿದೆ. ಕೇಂದ್ರಕ್ಕೆ ಕೊಡಬೇಕಾದುದಕ್ಕಿಂತ ಹೆಚ್ಚಿನ ಅಧಿಕಾರ ಕೊಡಲಾಗಿದೆ ಎಂದು ಕೆಲವರು ಭಾವಿಸಿದರೆ ಇನ್ನು ಕೆಲವರು ಪ್ರಾಂತ್ಯಗಳನ್ನು ದುರ್ಬಲಗೊಳಿಸಲಾಗಿದೆ ಎಂದು ಮುಂತಾಗಿ ಯೋಚಿಸುತ್ತಾರೆ. ನಾನು ಸಮಿತಿಯ ಸದಸ್ಯನಾಗಿದ್ದೆ. ಸಮಿತಿಯು ಕೆಲವು ಖಚಿತ ತತ್ತ್ವಗಳನ್ನಾಧರಿಸಿದೆ. ಅಧಿಕಾರ ವಿತರಣೆ ವಿಷಯದಲ್ಲಿ ಹೀಗಿದೆ. ರಾಷ್ಟ್ರೀಯ ಮಟ್ಟಕ್ಕೆ ಸಂಬಂಧಿಸಿದ ವಿಷಯಗಳು ಕೇಂದ್ರದಲ್ಲಿದ್ದು, ಪ್ರಾಂತ್ಯ ಸಂಬಂಧಿತ ವಿಷಯಗಳು ಪ್ರಾಂತ್ಯಗಳಿಗೆ ಸೇರಬೇಕು. ನಾವು ದೂರಸ್ಥಳಗಳಿಗೆ ರಸ್ತೆ ನಿರ್ಮಿಸಬೇಕು, ವ್ಯಾಪಾರಿ ನೌಕಾ ಸೇವೆ ಅಭಿವೃದ್ಧಿಪಡಿಸಬೇಕು. ಕೆಲವು ಮೂಲಭೂತ ತತ್ತ್ವಗಳನ್ನು ಮನಸ್ಸಿನಲ್ಲಿರಿಸಿಕೊಂಡು ನಾವು ಈ ಪಟ್ಟಿಗಳನ್ನು ಮಾಡಿದ್ದೇವೆ, ೧೯೩೫ರ ಅಧಿನಿಯಮ ಉತ್ತಮ ಮಾರ್ಗದರ್ಶಿ ಎಂದು ನಾವು ಭಾವಿಸಿದೆವು ಏಕೆಂದರೆ ೧೯೩೫ರ ಅಧಿನಿಯಮದಲ್ಲಿ ಪಟ್ಟಿ ಮಾಡುವಾಗ ಇದೇ ತತ್ತ್ವವನ್ನು ದೃಷ್ಟಿಯಲ್ಲಿರಿಸಿಕೊಳ್ಳಲಾಗಿತ್ತು. ವಿವಿಧ ಬಾಬುಗಳ ಬಗ್ಗೆ ಚರ್ಚಿಸುವ ರಾಷ್ಟ್ರೀಯ ಹಿತದೃಷ್ಟಿಯ ವಿಷಯಗಳು ಕೇಂದ್ರ ಪಟ್ಟಿಯಲ್ಲಿದ್ದು, ಪ್ರಾಂತ್ಯಗಳ ಹಿತಾಸಕ್ತಿಯ ವಿಷಯಗಳು ಪ್ರಾಂತ್ಯಪಟ್ಟಿಯಲ್ಲಿರಬೇಕು ಎಂಬ ಮೂಲಭೂತ ತತ್ತ್ವಗಳನ್ನು ಗಮನದಲ್ಲಿರಿಸಿಕೊಂಡಿರಬೇಕು ಎಂದು ಗೌರವಾನ್ವಿತ ಸದಸ್ಯರಿಗೆ ನಾನು ಸೂಚಿಸುತ್ತೇನೆ. ಬೇರೆ ಕೆಲವು ವಿಷಯಗಳಿಗಾಗಿ ಸಮವರ್ತಿಪಟ್ಟಿ ಇರಬೇಕು. ಅದರಲ್ಲಿ ಕೇಂದ್ರಕ್ಕೂ ಪ್ರಾಂತ್ಯಗಳಿಗೂ ಅಧಿಕಾರವಿರಬೇಕು. ನಾನು ಹೇಳುವ ಮುಂದಿನ ಅಂಶ ರಾಜ್ಯಗಳಿಗೆ ಸಂಬಂಧಿಸಿದೆ. ರಾಜ್ಯಗಳಿಗೆ ಪ್ರಾಂತ್ಯಗಳಿಗೆ ಬೇರೆ ಸ್ಥಾನ ಏಕೆ ಬೇಕು ಎಂದು ಕೆಲವು ಭಾಷಣಕಾರರು ಕೇಳಿದ್ದಾರೆ. ಕಾರಣ ಸ್ಪಷ್ಟವಾಗಿದೆ. ಭಾರತ ಅರ್ಧ ಬ್ರಿಟಿಷ್ ಇಂಡಿಯಾ ಆಗಿದ್ದರೆ ಇನ್ನರ್ಧ ರಾಜ್ಯಗಳಿಂದ ಕೂಡಿತ್ತು. ರಾಜ್ಯಗಳು ಕೇಂದ್ರದಲ್ಲಿ ಉಳಿದಿರಬೇಕು ಎಂದು ನಾವು ಇಚ್ಛಿಸುತ್ತೇವೆಯೇ ಅಥವಾ ಇಲ್ಲವೆ ಭಾರತದ ಪರಿಮಿತಿಯಲ್ಲಿರುವ ಭಾರತದಲ್ಲಿ ಇರಬೇಕೆಂದು ನಾವು

ಬಯಸುವ ಬಗ್ಗೆ ಯಾವ ಲಕ್ಷ್ಯವೂ ಇಲ್ಲವೆನಿಸುತ್ತದೆ. ರಾಜ್ಯಗಳು ಮೇ ೧೬ರ ಘೋಷಣೆಯ ಆಧಾರದ ಮೇಲೆ ಭಾರತದಲ್ಲಿರಲು ಒಪ್ಪಿಕೊಂಡುವು. ರಾಜ್ಯಗಳು ಭಾರತದಲ್ಲಿ ಸೇರಿ ಒಂದು ಸಮಗ್ರ ಬಲಶಾಲಿ ಭಾರತವಾಗಬೇಕೆಂದು ನೀವು ಬಯಸಿದರೆ ಅವು ಭಾರತದಲ್ಲಿ ಸೇರಿದ ಹಾಗೂ ರಾಜ್ಯಗಳಿಗಾಗಿ ವಿಶೇಷ ಉಪಬಂಧ ಕಲ್ಪಿಸಬೇಕಾದ ಷರತ್ತಿಗೆ ಒಪ್ಪಬೇಕಾಗುತ್ತದೆ. ರಾಜ್ಯಗಳೂ ಸೇರಿದ ಮೇಲೆ, ರಾಜ್ಯಗಳು ಹಾಗೂ ಪ್ರಾಂತ್ಯಗಳು ಪರಸ್ಪರ ನಿಕಟವಾಗುತ್ತವೆ. ರಾಜ್ಯಗಳು ಪ್ರಗತಿ ಹೊಂದುತ್ತವೆ. ಅವು ಹಿಂದುಳಿದಿವೆ ಎನಿಸಿದರೆ ಆ ಭಾಗಗಳ ಬಗ್ಗೆ ಕಾಳಜಿವಹಿಸಿ. ರಾಜ್ಯಗಳು ಭಾರತದಲ್ಲಿ ಸೇರಿ, ನಿಮ್ಮ ಸಂಪರ್ಕ ಬೆಳೆಸಿದರೆ, ಒಂದು ಏಕರೂಪಿ ಮಟ್ಟಕ್ಕೆ ಹತ್ತಿರವಾಗುತ್ತವೆ. ನಮ್ಮ ಉದ್ದೇಶವೂ ಕೂಡ ಅದೇ ಆಗಿದೆ. ಹೀಗೆ ಭಾರತ ಸಮನ್ವಯಗೊಂಡ ಬಲಿಷ್ಠ ದೇಶವಾಗುತ್ತದೆ. ರಾಜ್ಯಗಳ ಪರವಾಗಿ ತೋರಿದ ವ್ಯತ್ಯಾಸವನ್ನು ಕುರಿತು ಅನ್ಯಥಾ ಭಾವಿಸಬಾರದೆಂದು, ಪ್ರಾಂತ್ಯಗಳಿಂದ ಬಂದಿರುವ ಸದಸ್ಯರಿಗೆ ಮನವಿ ಮಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈವರೆಗೆ ಸಾಕಷ್ಟು ಚರ್ಚೆಯಾಗಿದೆ. ಪ್ರಸ್ತಾವವನ್ನು ಅಂಗೀಕರಿಸಿದರೆ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅರ್ಥ ಹಾಗೂ ವರದಿಯಲ್ಲಿನ ವಿಷಯಗಳು ಚರ್ಚೆಗೆ ಬರುತ್ತವೆ.

ಸದನವು ನನಗೆ ಅನುಮತಿ ನೀಡಿದರೆ ಪ್ರಸ್ತಾವದ ಮಂಡನೆಕಾರರಿಗೆ ಅವರು ಬಯಸಿದರೆ, ಉತ್ತರಿಸಲು ಒಂದು ಅವಕಾಶ ನೀಡಿ ತದನಂತರ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಇಷ್ಟು ದೀರ್ಘ ಚರ್ಚೆಯಾದ ತರುವಾಯ ನಾನು ಸದನದ ಸಮಯವನ್ನು ಮತ್ತೆ ಬಳಸಿಕೊಳ್ಳುವ ಅಗತ್ಯವಿಲ್ಲ ಎನಿಸುತ್ತದೆ. ಏಕೆಂದರೆ ಒಬ್ಬರಲ್ಲ ಇನ್ನೊಬ್ಬ ಭಾಷಣಕಾರರು ವಾದದಲ್ಲಿ ಒಂದು ನಿರ್ದಿಷ್ಟ ಅಂಶವನ್ನಿರಿಸಿಕೊಂಡಿದ್ದು ಅದಕ್ಕೆ ವಿರುದ್ಧವಾದ ಅಭಿಪ್ರಾಯ ಹೊಂದಿದವರು ಪ್ರತಿಯಾಗಿ ವಾದಿಸುವಾಗ ಉತ್ತರವನ್ನು ನೀಡಿಯೇ ಇರುತ್ತಾರೆ. ಈ ಚರ್ಚೆಯ ಕಾಲದಲ್ಲಿ ಎತ್ತಲಾದ ಎಲ್ಲ ಅಂಶಗಳನ್ನು ನಾನು ಉಲ್ಲೇಖಿಸುವ ಅಗತ್ಯವಿಲ್ಲ. ಆದರೂ ಒಂದೆರಡು ಅಂಶಗಳ ಬಗ್ಗೆ ಉಲ್ಲೇಖಿಸಬಯಸುತ್ತೇನೆ. ಆ ಪೈಕಿ ಒಂದನ್ನು ಕುರಿತು ನನ್ನ ಮಿತ್ರ ಸರ್ ಬಿ.ಎಲ್. ಮಿಟ್ಟರ್ ಉಲ್ಲೇಖಿಸಿದ್ದಾರೆ. ಆ ಅಂಶವೆಂದರೆ ಪ್ರಾಂತ್ಯಗಳು ಹಾಗೂ ಭಾರತೀಯ ರಾಜ್ಯಗಳ ನಡುವೆ ಈ ಪಟ್ಟಿಗಳನ್ನು ಸಿದ್ಧಪಡಿಸುವಲ್ಲಿ ತಲೆದೋರಿರುವ ಅಂತರ. ಈ ಬಗ್ಗೆ ನಾನು ನನ್ನ ಪ್ರಾರಂಭಿಕ ಭಾಷಣದಲ್ಲಿ ಉಲ್ಲೇಖಿಸಿದ್ದೆ. ಒಕ್ಕೂಟದ ಪ್ರಾರಂಭಿಕ ಕಾಲದಲ್ಲಿ ಯಾವುದೇ ಸಂದರ್ಭದಲ್ಲಿಯಾಗಲೀ ರಾಜ್ಯಗಳು ಹಾಗೂ ಪ್ರಾಂತ್ಯಗಳ ವಿಷಯದಲ್ಲಿ ಅವುಗಳ ವಿಭಿನ್ನ ಪರಿಸ್ಥಿತಿಗಳಿಗೆ ವಿಶೇಷ ಗಮನ ನೀಡಬೇಕಾಗುತ್ತದೆ ಎಂದು ಸಮಿತಿಯು ತೀರ್ಮಾನ ಕೈಗೊಳ್ಳುವಾಗ ಸಮಿತಿಯು ಪರಿಶೀಲಿಸಬೇಕಾದ ಕೆಲವು ಅಂಶಗಳನ್ನು ತೂಗಿ ನೋಡಿತ್ತು ಎಂದು ನಾನು ಸೂಚಿಸಿದ್ದೆ. ಭಾರತೀಯ ರಾಜ್ಯಗಳು ಪ್ರಾಂತ್ಯಗಳೊಡನೆ ಕಾಲಕ್ರಮೇಣ ನಿಕಟವಾಗುತ್ತವೆ; ಈಗ ಕೆಲವು ಅಂತರಗಳಿರುತ್ತವೆ ಎಂಬ ಅಂತಿಮ ಆದರ್ಶವನ್ನು ದೃಷ್ಟಿಯಲ್ಲಿರಿಸಿಕೊಳ್ಳುವುದು ಸರಿ. ಈಗ ನಾವು ಆಸಕ್ತಿ ಹೊಂದಿರುವ ಅಂಶವೆಂದರೆ ಅಸ್ತಿತ್ವಕ್ಕೆ ಬಂದಿರುವ ಸಮಗ್ರ ರಾಜಕೀಯ ರಚನೆಯನ್ನು ಕಾಪಾಡಿಕೊಳ್ಳುವುದು. ಸಾಧ್ಯವಾದರೆ ಅದನ್ನು ಇನ್ನಷ್ಟು ಬಲಪಡಿಸುವುದು, ಹಾಗೆ ಮಾಡುವಾಗಲು ನಾವು, ಬೇರೆ ಬಗೆಯ ಪರಿಸ್ಥಿತಿಗಳಲ್ಲಿರುವ ಪ್ರದೇಶಗಳ ಪರವಾಗಿ ಭೇದಭಾವ ತೋರಬೇಕಾಗುತ್ತದೆ. ಕೆಲವು ಪರಿಸ್ಥಿತಿಗಳು ಎಂದರೆ ನಾನಿಲ್ಲಿ ಪೂರ್ವಗ್ರಹಗಳು ಎಂದು ಅರ್ಥೈಸುತ್ತೇನೆ. ಮಾನ್ಯರೆ, ನಾವು ಆ ಸ್ಥಾನಮಾನವನ್ನು ಪರಿಗಣಿಸಬೇಕಾಗುತ್ತದೆ ಮತ್ತು ಕೇಂದ್ರ ಅಧಿಕಾರಗಳ ಸಮಿತಿಯ ವರದಿಯು ಅಂಥ ಭಿನ್ನತೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದರ ಮೇಲೆ ಆಧಾರಿತವಾಗಿದೆ.

ಈ ಚರ್ಚೆಯ ಕಾಲದಲ್ಲಿ ಎತ್ತಲಾದ ಇನ್ನೊಂದು ದೊಡ್ಡ ಅಂಶವು ನನಗೆ ತೋರುವ ಮಟ್ಟಿಗೆ ಭ್ರಾಂತಿಯಿಂದಾಗಿದೆ. ಮೌಲ್ಯಗಳ ಪ್ರಜ್ಞೆಯ ಕೊರತೆ ಹಾಗೂ ವಿಷಯವನ್ನು ಕಾಳಜಿಯಿಂದ ಪರಿಗಣಿಸದಿರುವುದರ ಪರಿಣಾಮವಾಗಿ ಈ ಅಂಶ ಮೂಡಿದೆ. ಅದೆಂದರೆ ಕೇಂದ್ರ ಅಧಿಕಾರಗಳ ಸಮಿತಿಯು ಕೇಂದ್ರ ಪ್ರಕಾರ್ಯಗಳನ್ನು

ಹಾಗೂ ಹಣಕಾಸು ಸಂಪನ್ಮೂಲಗಳನ್ನು ಆವರಿಸಿದೆ. ಅವುಗಳನ್ನು ಸೂಕ್ತ ರೀತಿಯಲ್ಲಿ ಪ್ರಾಂತ್ಯಗಳಿಗೆ ವಹಿಸಬಹುದಿತ್ತು ಎಂಬುದು. ಅದನ್ನು ನಾನು ಭ್ರಾಂತಿ ಎನ್ನುತ್ತೇನೆ. ಇದು ಉದ್ಭವಿಸುವುದಕ್ಕೆ ಕಾರಣವೇನೆಂದರೆ, ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಲ್ಲಿರುವ ಕೇಂದ್ರ ಹಾಗೂ ಪ್ರಾಂತ್ಯಗಳ ಪಟ್ಟಿಗಳನ್ನು ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿರುವ ಪಟ್ಟಿಗಳೊಂದಿಗೆ ಹೋಲಿಸಿ ನೋಡಿಲ್ಲ. ನನ್ನ ಈ ನಿರ್ದಿಷ್ಟ ವಾದಕ್ಕೆ ಆಧಾರವೆಂದರೆ ರಾಜ್ಯಗಳಿಗೆ ಸಂಬಂಧಿಸಿದ ಮಿತ್ರರಲ್ಲೊಬ್ಬರು ಶ್ರಮವಹಿಸಿ ತಯಾರಿಸಿ ನನಗೆ ತೋರಿಸಿದ ಹೇಳಿಕೆಯೇ ಆಗಿದೆ. ಭಾರತ ಸರ್ಕಾರದ ಅಧಿನಿಯಮದಲ್ಲಿ ಪ್ರಾಂತೀಯ ಪಟ್ಟಿಯಲ್ಲಿದ್ದ ಒಂದು ಚಿಕ್ಕ ಬಾಬನ್ನು ಕೇಂದ್ರ ಅಧಿಕಾರಗಳ ಸಮಿತಿಯು ಒಕ್ಕೂಟ ಪಟ್ಟಿಗೆ ವರ್ಗಾಯಿಸಿದ ಕಾರಣಕ್ಕಾಗಿ ಸಮಿತಿಯನ್ನು ಇಷ್ಟೊಂದು ಟೀಕೆಗೆ ಗುರಿಪಡಿಸಲಾಗಿದೆ. (ಘೋಷಾನುಮೋದನೆ) ಹೀಗೆ ನಾನು ಹೇಳಲು ಕಾರಣ, ಯಾವುದೇ ಶಹಬಾಸ್‌ಗಿರಿಯನ್ನು ನಾನು ಪಡೆಯುವುದಕ್ಕಲ್ಲ, ಅದು ಭಾರತ ಸರ್ಕಾರ ಅಧಿನಿಯಮದ ಪಟ್ಟಿಯಲ್ಲಿದೆ. ಟೀಕಿಸುವವರು ಹೀಗೂ ಹೇಳಬಹುದು, ಭಾರತ ಸರ್ಕಾರ ಅಧಿನಿಯಮದಲ್ಲಿರುವ ಪಟ್ಟಿಗಳು ಸತ್ತ್ವಯುತ ಹಾಗೂ ತೃಪ್ತಿಕರವೆನಿಸುವಂತಿಲ್ಲ, ಹೀಗಾಗಿ ಕೇಂದ್ರ ಅಧಿಕಾರಗಳ ಸಮಿತಿಯು ಒಕ್ಕೂಟ ಪಟ್ಟಿಯ ಕೆಲವು ಬಾಬುಗಳನ್ನು ಪ್ರಾಂತ್ಯಪಟ್ಟಿಗೆ ವರ್ಗಾಯಿಸಬೇಕಿತ್ತು ಎಂದು ಪ್ರಾಂತ್ಯಗಳಿಗಿರಬೇಕಾಗಿದ್ದ ವಿಷಯಗಳನ್ನು ಕೇಂದ್ರದ ಅಧಿಕಾರಕ್ಕೆ ಸೆಳೆದುಕೊಂಡಿದ್ದೇವೆ ಎಂಬ ಟೀಕೆಗೆ ನನ್ನ ಈ ಕ್ಷಣದ ಉತ್ತರವೆಂದರೆ ಆ ಟೀಕೆಗೆ ಸಮರ್ಥನೀಯ ಆಧಾರವಿಲ್ಲ.

ನಾನು ಉಲ್ಲೇಖಿಸುವ ಮತ್ತೊಂದು ಅಂಶವನ್ನು ನನ್ನ ಗೌರವಾನ್ವಿತ ಮಿತ್ರರೊಬ್ಬರು ಸುದೀರ್ಘವಾಗಿ ವಿವರಿಸಿದ್ದು, ಅವರ ಆಡಳಿತಾನುಭವ ಹಾಗೂ ವಾಗ್ಮಿಯತೆ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಪ್ರಾಂತ್ಯಪಟ್ಟಿಯ ತೆರಿಗೆ ವಿಷಯಗಳನ್ನು ನೋಡಲಾರಂಭಿಸಿ ಅಲ್ಲಿಯ ಬಾಬುಗಳನ್ನು ತುಚ್ಛವಾಗಿ ಪರಿಗಣಿಸಲು ಯತ್ನಿಸಿದರು. ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಲ್ಲಿ ಕೇಂದ್ರ ಹಾಗೂ ಪ್ರಾಂತ್ಯಗಳ ನಡುವೆ ತೆರಿಗೆ ಸಂಪನ್ಮೂಲಗಳ ವಿತರಣೆಯ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಲೆಕ್ಕಾಚಾರ ಮಾಡಲಾಗಿದೆ – ಪ್ರಾಂತ್ಯಗಳ ಸಂಪನ್ಮೂಲಗಳನ್ನು ಕಡಿಮೆ ಮಾಡಿ ಕೇಂದ್ರದ ಸಂಪನ್ಮೂಲಗಳನ್ನು ಹೆಚ್ಚಿಸುವ ರೀತಿಯಲ್ಲಿ ಎಂಬಂತೆ ತಿಳಿಸಿದರು. ಆ ಮಾತು ವಾಸ್ತವಾಂಶಕ್ಕೆ ದೂರವಾಗಿದೆ. ವಾಸ್ತವಾಂಶವೇನೆಂದರೆ ಭಾರತ ಸರ್ಕಾರದ ಅಧಿನಿಯಮದ ಪ್ರಾಂತ್ಯಪಟ್ಟಿಯಲ್ಲಿರುವ ತೆರಿಗೆ ಹಾಗೂ ಆದಾಯಗಳ ಎಲ್ಲ ಬಾಬುಗಳನ್ನು ಪ್ರಾಂತ್ಯಪಟ್ಟಿಯಲ್ಲಿ ಸೇರಿಸಿದ್ದೇವೆ. ಪ್ರಾಂತ್ಯಪಟ್ಟಿಯಲ್ಲಿರುವ, ಪ್ರತಿಯೊಂದು ಬಾಬನ್ನು ಚಿಕ್ಕದಾಗಿ ಪರಿಣಿಗಣಿಸುವಲ್ಲಿ ತಮ್ಮ ಸಮಯವನ್ನು ವ್ಯಯಿಸುವುದರ ಉತ್ಸಾಹದಲ್ಲಿ ಒಕ್ಕೂಟ ಪಟ್ಟಿಯಲ್ಲಿ ಸೇರಿಸಿರುವ ಬಾಬುಗಳನ್ನು ಅವರು ಗಮನಿಸಿಲ್ಲ. ಅಲ್ಲಿಯೂ ನಾವು ಭಾರತ ಸರ್ಕಾರ ಅಧಿನಿಯಮದಲ್ಲಿರುವುದನ್ನೇ ಪುನರಾವರ್ತಿಸಿದ್ದೇವೆ. ಸಮಿತಿಯು ವರದಿಯ ಕೊನೆಯ ಕಂಡಿಕೆಯಲ್ಲಿ ಗಮನ ಸೆಳೆಯುವ ಅಂಶವನ್ನು ತಿಳಿಸಿರುವುದಕ್ಕೆ ನನ್ನ ಮಿತ್ರರು ಹೆಚ್ಚಿನ ಮಹತ್ತ್ವ ನೀಡಿಲ್ಲ. ಸಮಿತಿಯು ಕೇಂದ್ರದ ಅನುಕೂಲಕ್ಕಾಗಿ ಪಟ್ಟಿ ಮಾಡಿರುವ ಸಂಪನ್ಮೂಲಗಳಿಂದ ಕೇಂದ್ರಕ್ಕೆ ಸದ್ಯದ ಪ್ರಮಾಣನುಸಾರ ಕೇಂದ್ರದ ಅಗತ್ಯಗಳಿಗೆ ಸಾಕಷ್ಟು ಆದಾಯ ಬರಬಹುದು ಎಂದು ಸಮಿತಿ ಪರಿಗಣಿಸಿದೆ, ಯಾವುದೇ ಸಂದರ್ಭದಲ್ಲಿಯೂ ಸಮಿತಿಯ ಗಮನದಲ್ಲಿರುವ ವಾಸ್ತವಾಂಶವೆಂದರೆ ಇಲ್ಲಿ ತಿಳಿಸಲಾಗಿರುವ ಎಲ್ಲ ಕೇಂದ್ರ ತೆರಿಗೆಗಳ ಸಂಪೂರ್ಣ ಉತ್ಪತ್ತಿಗಳನ್ನು ಕೇಂದ್ರವೇ ಉಳಿಸಿಕೊಂಡರೆ ಅದರಿಂದ ಘಟಕಗಳ ಆರ್ಥಿಕ ಸಮತೋಲನ ಏರುಪೇರಾಗಬಹುದು. ಅದರಿಂದ ಆ ಸಂಪನ್ಮೂಲಗಳನ್ನು ಪೂರ್ಣವಾಗಿ ಘಟಕಗಳಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳಬೇಕೆಂದು, ಆ ಉದ್ದೇಶಕ್ಕಾಗಿ ನಿರ್ಧಾರಮಾಡಬಹುದಾದ ಪ್ರಾಧಿಕಾರವನ್ನು ರಚಿಸಿ ಅದರ ವಿವೇಚನೆಯ ಮೇರೆಗೆ ಮಾಡಬಹುದು ಎಂದು ಶಿಫಾರಸು ಮಾಡಲಾಗಿದೆ.

**ಶ್ರೀ ಟಿ. ಪ್ರಕಾಶಂ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ದೇಶದಲ್ಲಿ ಉಗ್ರ ಪ್ರತಿಭಟನೆ ನಡೆಯುತ್ತಿದ್ದ

ಸಮಯದಲ್ಲಿ ಭಾರತ ಸರ್ಕಾರ ಅಧಿನಿಯಮವನ್ನು ಸಂಸತ್ತಿನಲ್ಲಿ ಆತುರಾತುರವಾಗಿ ಮಂಡಿಸಲಾಯಿತಲ್ಲವೇ? (ಧ್ವನಿಗಳು: ಧ್ವನಿವರ್ಧಕ)

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಸದನದ ಗಮನಕ್ಕಾಗಿ ನಾನು ಶ್ರೀ ಪ್ರಕಾಶಂ ಹೇಳಿದ್ದನ್ನು ಪುನರುಚ್ಚರಿಸುತ್ತೇನೆ. ಇಲ್ಲಿ ಅವರು, ೧೯೩೫ರ ಅಧಿನಿಯಮವನ್ನು ಸಂಸತ್ತಿನಲ್ಲಿ ಆತುರಾತುರವಾಗಿ ಮಂಡಿಸಲಾಯಿತಷ್ಟೇ ಅಲ್ಲದೇ ಸಂಸತ್ತಿನಲ್ಲಿ ತನ್ನ ಅಭಿಪ್ರಾಯಗಳನ್ನು ತಿಳಿಸಲು ಈ ದೇಶಕ್ಕೆ ಅವಕಾಶವೇ ಇಲ್ಲದಿದ್ದುದರಿಂದ ಅದು ಅಧಿನಿಯಮವೇ ಅಲ್ಲ. ಅದನ್ನು ನಾವು ಮಾದರಿಯಾಗಿ ಏಕೆ ಪರಿಗಣಿಸಬೇಕು ಎಂದು ಆಕ್ಷೇಪಿಸುತ್ತಿದ್ದಾರೆ. ಅದಕ್ಕೆ ನನ್ನ ಉತ್ತರವೆಂದರೆ ೮-೧೦ ವರ್ಷಗಳಿಗೆ ಮುಂಚೆ ಪ್ರಾರಂಭವಾದ ನಡವಳಿಗಳ ಪ್ರಸ್ತಾವವನ್ನು ವಿವಿಧ ಆಯೋಗಗಳು ಹಾಗೂ ಸಮಿತಿಯಲ್ಲಿ ಈ ದೇಶದ ಪ್ರತಿನಿಧಿಗಳು ಸೇರಿದ್ದು, ಬಹಳ ಶ್ರಮವಹಿಸಿ ಹೊಸ ಯೋಜನೆಯೊಂದನ್ನು ಆವಿಷ್ಕರಿಸಿದರು. ಅದೇ ಈ ಶಾಸನ.

ಮಾನ್ಯರೆ, ಕೊನೆಯಲ್ಲಿ ಇದು ಕಾಣಿಸಿಕೊಂಡಿದ್ದು, ಕೆಲವು ವಿಷಯಗಳಲ್ಲಿ ನಮಗೆ ತೃಪ್ತಿಕರವೆನಿಸಿಲ್ಲ. ಆದರೆ ಅದನ್ನು ಆತುರದಲ್ಲಿ ಸಿದ್ಧಪಡಿಸಿ ಸಂಪತ್ತಿಲ್ಲಿ ಆತುರಾತುರವಾಗಿ ಮಂಡಿಸಲಾಯಿತು ಎಂದು ದೂರುವಂತಿರಲಿಲ್ಲ. ಅಲ್ಲಿರುವುದೆಲ್ಲ ನಮಗೆ ಸ್ವೀಕಾರಾರ್ಹವೆನಿಸಲಿಕ್ಕಿಲ್ಲ.

ಚರ್ಚೆಗೆ ಉತ್ತರವಾಗಿ ನಾನು ಹೇಳಬಯಸುವುದೇನೆಂದರೆ ನೀವು ನಮ್ಮ ಮೇಲೆ ಆಕ್ರಮಣಕಾರಿ ರೀತಿಯಲ್ಲಿ ಪ್ರತಿಕ್ರಿಯಿಸುವಂಥದೇನೂ ಕೇಂದ್ರ ಅಧಿಕಾರಗಳ ಸಮಿತಿಯ ವರದಿಯಲ್ಲಿ ಇಲ್ಲ. ಪ್ರಾಂತ್ಯಗಳ ಸಂಪನ್ಮೂಲ ಅತ್ಯಂತ ಕಡಿಮೆ, ಕೇಂದ್ರದ ಸಂಪನ್ಮೂಲ ಅಪಾರ ಇತ್ಯಾದಿಯಾಗಿ ಬಹಳಷ್ಟು ಕೇಳಿದ್ದೇವೆ. ಆದರೆ ಈ ಸದನದಲ್ಲಿರುವ ಯಾವೊಬ್ಬ ಭಾಷಣಕಾರರೂ, ನಾವು ಪ್ರಾಂತ್ಯಪಟ್ಟಿಗೆ ಏನನ್ನು ಸೇರಿಸಬಹುದಿತ್ತು ಮತ್ತು ಒಕ್ಕೂಟ ಪಟ್ಟಿಯಿಂದ ಯಾವುದನ್ನು ತೆಗೆಯಬಹುದಿತ್ತು ಎಂಬ ಬಗ್ಗೆ ಸಲಹೆ ನೀಡಿದ್ದು ನನಗೆ ಜ್ಞಾಪಕಕ್ಕೆ ಬರುತ್ತಿಲ್ಲ.

ಮಾನ್ಯರೆ, ವರದಿ ಈಗಿರುವಂತೆ ನಮ್ಮ ಹೊಸ ಸಂವಿಧಾನ ಪ್ರಾರೂಪಿತವಾದ ತರುವಾಯ ಅದರಲ್ಲಿ ಕಂಡುಬರುವ ಅಂತಿಮ ಹಣಕಾಸು ಏರ್ಪಾಡುಗಳೇನು ಎಂಬುದರ ಪೂರ್ಣ ಚಿತ್ರಣವನ್ನು ಸದನಕ್ಕೆ ಕೊಡುವುದಿಲ್ಲ. ನಾನು ಸದನಕ್ಕೆ ಈಗಾಗಲೇ ಹಲವು ಬಾರಿ ತಿಳಿಸಿರುವಂತೆ ನಾವು ಉದ್ದೇಶಿಸಿರುವ ಯೋಜನೆ ಎಂದರೆ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಪ್ರಶ್ನೆ ಕೇಂದ್ರ ಹಾಗೂ ಘಟಕಗಳ ನಡುವೆ ಆ ಸಂಪನ್ಮೂಲಗಳ ವಿತರಣೆ, ವಿತರಣೆಯನ್ನು ಕಾರ್ಯಗತಗೊಳಿಸುವ ವ್ಯವಸ್ಥೆಯ ಸ್ವರೂಪ, ವಿತರಣೆಯನ್ನು ಒಂದೇ ಬಾರಿಗೆ ಮಾಡುವುದೇ ಕಾಲಕಾಲಕ್ಕೆ ಮಾಡುವುದೇ ಎಂಬೆಲ್ಲ ವಿಷಯಗಳನ್ನು ಒಂದು ತಜ್ಞರ ಸಮಿತಿಯು ಮೊದಲು ಪರೀಕ್ಷಿಸಬೇಕು. ತರುವಾಯ ಅದನ್ನು ಕೇಂದ್ರ ಸಂವಿಧಾನಸಮಿತಿ ಪರಿಷ್ಕರಿಸಬೇಕು. ತರುವಾಯ ಆ ಯೋಜನೆ ಸದನದ ಮುಂದೆ ಮಂಡಿತವಾಗಬೇಕು. ಆಗ ಆ ಯೋಜನೆಯ ಪ್ರಾರೂಪಣಕಾರರಿಗೆ ಸದನದ ಸದಸ್ಯರಿಂದ ಕ್ರಿಯಾಶೀಲ ಸಲಹೆಗಳು ಲಭ್ಯವಾಗುವ ಅವಕಾಶವಿರುತ್ತದೆ. ಮಾನ್ಯರೆ, ಈಗಿರುವಂತೆ ನಾವು ನಿಮ್ಮ ಮುಂದೆ, ಈ ಮೂರು ಪಟ್ಟಿಗಳಿಗೆ ಸೇರಿಸಬಯಸುವ ಬಾಬುಗಳನ್ನು ತಿಳಿಸಿದ್ದೇವೆ. ಆದಾಯ ಸಂಪನ್ಮೂಲಗಳು ಅಥವಾ ತೆರಿಗೆ ಸಂಪನ್ಮೂಲಗಳ ಬಾಬುಗಳನ್ನು ಕೇಂದ್ರಕ್ಕೆ ವಿನಿಯೋಗಿಸಬೇಕು ಎಂದು ಉದ್ದೇಶಿಸಿಲ್ಲ ಎಂದು ನಾವು ನಿಮಗೆ ತಿಳಿಸಿದ್ದೇವೆ. ಕೆಲವು ಬಾಬುಗಳನ್ನು ಸಂಪೂರ್ಣವಾಗಿ ಪ್ರಾಂತ್ಯಗಳಿಗೆ ವರ್ಗಾಯಿಸಬೇಕು ಎಂದು, ಬೇರೆ ಬಾಬುಗಳನ್ನು ಕೇಂದ್ರ ಹಾಗೂ ಪ್ರಾಂತ್ಯಗಳ ಮಧ್ಯೆ ನ್ಯಾಯೋಚಿತವಾಗಿ ಪಾಲು ಮಾಡಬೇಕೆಂದು ನಾವು ಉದ್ದೇಶಿಸಿದ್ದೇವೆ, ಈ ವಿಷಯದಲ್ಲಿ ಕೇಂದ್ರ ಅಧಿಕಾರಿಗಳ ಸಮಿತಿಯು ಪ್ರಾಂತ್ಯಗಳಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ ಎಂಬ ಟೀಕೆಗೆ ಸಮರ್ಥನೆ ಏನಿದೆ? ಆ ಟೀಕೆಗೆ ಕಾರಣವೇ ನನಗೆ ಕಾಣುತ್ತಿಲ್ಲ. ನಾನು ಸದನದ ಸಮಯವನ್ನು ಇನ್ನಷ್ಟು ತೆಗೆದುಕೊಳ್ಳುವುದಿಲ್ಲ. ಸಂವಿಧಾನಕ್ಕೆ ಸಂಬಂಧಿಸಿದಂತೆ ಈ ಮಹತ್ತ್ವಪೂರ್ಣ ವಿಷಯದ ಬಗ್ಗೆ ಅತ್ಯಂತ ಸ್ವಾರಸ್ಯಪೂರ್ಣ ಚರ್ಚೆ ನಡೆಯಿತು. ಕಳೆದ ಕೆಲವು ತಿಂಗಳುಗಳಲ್ಲಿ

ತ್ವರಿತವಾಗಿ ಬದಲಾಗುತ್ತ ನಡೆದ ಘಟನೆಗಳ ಮಧ್ಯೆ ಸಮಿತಿಯ ಇಂಥದೊಂದು ಕೆಲಸಮಾಡಿದೆ ಎಂದು ಗೌರವಾನ್ವಿತ ಸದಸ್ಯರು ಮೆಚ್ಚುಗೆ ಸೂಚಿಸದಿದ್ದರೂ ಒಪ್ಪಿಗೆಯನ್ನಾದರೂ ತಿಳಿಸುತ್ತಾರೆಂದು ಆಶಿಸುತ್ತೇನೆ (ಹರ್ಷೋದ್ಗಾರ).

**ಮಾನ್ಯ ಸಭಾಧ್ಯಕ್ಷರು :** ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಮಂಡಿಸುವ ಪ್ರಸ್ತಾವ ಮುಂದಿನಂತಿದೆ:

"೨೫ನೇ ಜನವರಿ ೧೯೪೭ರ, ಸಭೆಯ ಪ್ರಸ್ತಾವಕ್ಕೆ ಅನುಸಾರವಾಗಿ ನೇಮಕಗೊಂಡ ಕೇಂದ್ರ ಅಧಿಕಾರಗಳ ಸಮಿತಿಯ ವ್ಯಾಪ್ತಿಯನ್ನು ಕುರಿತ ಎರಡನೇ ವರದಿಯನ್ನು ಸಂವಿಧಾನ ರಚನಾಸಭೆಯು ಪರಿಶೀಲನೆಗೆ ತೆಗೆದುಕೊಳ್ಳುತ್ತದೆ."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಒಬ್ಬ ಗೌರವಾನ್ವಿತ ಸದಸ್ಯ :** ನಾನು ವಿಭಜನೆಗೆ ಒತ್ತಾಯಿಸುತ್ತೇನೆ.

**ಶ್ರೀ ಹುಸೇನ್ ಇಮಾಮ್** (ಬಿಹಾರ : ಮುಸ್ಲಿಮ್) : ರಾಜ್ಯ ಪರಿಷತ್ತಿನಲ್ಲಿ ಕೆಲವು ಬಾರಿ ಅನುಸರಿಸುತ್ತಿದ್ದ ಕ್ರಮವೆಂದರೆ ಹಿಂದಿನ ದಿನಗಳಲ್ಲಿ ಅಲ್ಪಸಂಖ್ಯಾತರು ತಮ್ಮ ಅಸಮ್ಮತಿಯನ್ನು ತಮ್ಮ ಸ್ಥಳದಲ್ಲೇ ಎದ್ದುನಿಂತು ಪ್ರಕಟಿಸಲು ಅವಕಾಶ ನೀಡಲಾಗುತ್ತಿತ್ತು. ಇದನ್ನು ತಾವು ಗಮನಿಸಬೇಕು. ಇಡೀ ಸದನ ಏಕರೂಪಿ ಅನುಮೋದನೆ ನೀಡುವಂತೆ ಪ್ರಭಾವ ಹೇರಿದಿರಿ.

**ಮೌಲಾನಾ ಹಸ್ರತ್ ಮೋಹಾನಿ** (ಉತ್ತರ ಪ್ರದೇಶ : ಸಾಮಾನ್ಯ) : ಎಷ್ಟು ಜನ ತಟಸ್ಥರಾಗಿ ಉಳಿಯುತ್ತಾರೆ?

**ಮಾನ್ಯ ಸಭಾಧ್ಯಕ್ಷರು :** ನನಗೆ ಖಚಿತವಾಗಿ ಸ್ಪಷ್ಟವಾಗಿರುವ ಮಟ್ಟಿಗೆ ಬಹುಪಾಲು ಸದಸ್ಯರು ಪ್ರಸ್ತಾವದ ಪರವಾಗಿ ಇದ್ದಾರೆ. ಪ್ರಸ್ತಾವದ ಬಗ್ಗೆ ವಿರೋಧವಿರುವವರು ದಯವಿಟ್ಟು ನಿಮ್ಮ ಸ್ಥಳಗಳಲ್ಲೇ ಎದ್ದು ನಿಲ್ಲಿ.

(ಆರು ಜನ ಸದಸ್ಯರು ಎದ್ದು ನಿಂತರು.)

**ಮಾನ್ಯ ಸಭಾಧ್ಯಕ್ಷರು :** ನನ್ನ ಲೆಕ್ಕಾಚಾರ ಸರಿಯಾಯಿತು. ಇದಕ್ಕೆ ಆರು ಸದಸ್ಯರ ವಿರೋಧವಿದೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಗಿದೆ.

**ಮೌಲಾನಾ ಹಸ್ರತ್ ಮೋಹಾನಿ :** ನಾನು ಪ್ರಸ್ತಾವದ ಪರವಾಗಿದ್ದೇನೆ. ನಾನು ಸೂಚಿಸಿದಂತೆ, ಮತ ಹಾಕದಿರುವವರ ಪೈಕಿ ದೊಡ್ಡ ಪ್ರಮಾಣದ ಶೇಕಡಾವಾರು ಸದಸ್ಯರು ತಟಸ್ಥರಾಗಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ಈ ನಿರ್ಣಯವನ್ನು ಅಂಗೀಕರಿಸುವುದಕ್ಕೆ ಸದನದ ಬೆಂಬಲವಿದೆ ಎಂಬುದು ತೃಪ್ತಿಕರ ವಿಷಯ ಹಾಗೂ ಇಲ್ಲಿಗೆ ವಿಷಯ ಮುಕ್ತಾಯವಾಗಿದೆ.

**ಶ್ರೀ ಎಂ.ಎಸ್. ಅನೆ** (ಡೆಕ್ಕನ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ಪ್ರಸ್ತಾವಕ್ಕೆ ವಿರೋಧವಿರುವವರನ್ನು ನೀವು ಮತಕ್ಕೆ ಅವಕಾಶ ಕೊಟ್ಟು ಕೇಳಿದಂತೆ ವಿಷಯದ ಪರವಾಗಿರುವವರನ್ನು ಕೇಳುವುದು ಅಗತ್ಯ.

**ಮಾನ್ಯ ಸಭಾಧ್ಯಕ್ಷರು :** ಅದು ಅಗತ್ಯವೆಂದು ನನಗೆ ತೋರುವುದಿಲ್ಲ. ಇದು ಸ್ಪಷ್ಟವಾಗಿದೆ ಹಾಗೂ ನಾನು ಈಗಾಗಲೇ ಘೋಷಿಸಿದ್ದೇನೆ. ಆದರೆ ಸದನವು ಪಟ್ಟುಹಿಡಿದರೆ ಪ್ರಸ್ತಾವದ ಪರವಾಗಿರುವ ಸದಸ್ಯರನ್ನು ಎದ್ದು ನಿಲ್ಲುವಂತೆ ಕೋರುತ್ತೇನೆ.

(ಸದಸ್ಯರು ಬಹುಸಂಖ್ಯೆಯಲ್ಲಿ ಎದ್ದು ನಿಂತರು.)

**ಮಾನ್ಯ ಸಭಾಧ್ಯಕ್ಷರು :** ಈಗ ಅತ್ಯಂತ ಸ್ಪಷ್ಟವಾಗಿದೆ.

**ಒಬ್ಬ ಗೌರವಾನ್ವಿತ ಸದಸ್ಯರು :** ತಟಸ್ಥರಾಗಿರುವವರು?

**ಮಾನ್ಯ ಸಭಾಧ್ಯಕ್ಷರು :** ತಟಸ್ಥರ ಬಗ್ಗೆ ತಿಳಿಯಬೇಕಾದ ಅಗತ್ಯವಿಲ್ಲ. ಈಗ ವರದಿಯನ್ನು ಕೈಗೆತ್ತಿಕೊಳ್ಳೋಣ. ನಾವು ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳಬೇಕು. ಮೊದಲನೆಯ ತಿದ್ದಪಡಿ ಶ್ರೀ ಡಿ.ಪಿ. ಖೈತಾನ್ ಅವರಿಂದ.

**ಶ್ರೀ ದೇವಿ ಪ್ರಸಾದ್ ಖೈತಾನ್ :** ನಾನು ಈ ತಿದ್ದುಪಡಿಯ ಸೂಚನೆಯನ್ನು ಕಳಿಸಲು ಕಾರಣವೇನೆಂದರೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಪ್ರಸ್ತಾವದಲ್ಲಿ "ಎರಡನೇ ವರದಿ" ಎಂದು ಮಾತ್ರ ತಿಳಿಸಲಾಗಿದೆ. ಆ ಮೊದಲನೆಯ ಸಂದರ್ಭದಲ್ಲಿ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೋ ಅಥವಾ ಇಲ್ಲವೋ

ಎಂಬುದರ ಬಗ್ಗೆ ಸಂದಿಗ್ಧತೆ ಇತ್ತು. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಈ ಪ್ರಸ್ತಾವವನ್ನು ಮಂಡಿಸುವಾಗ ಮಾಡಿದ ಭಾಷಣದಲ್ಲಿ "ಎರಡನೇ ವರದಿ" ಎಂಬ ಪದಗಳಿದ್ದವು. ಸದನವು ಮೊದಲನೇ ವರದಿಯನ್ನು ಪರಿಶೀಲಿಸುವ ಹಕ್ಕು ಹೊಂದಿದೆ ಎಂದು ಸ್ಪಷ್ಟಪಡಿಸಿದರು. ಸನ್ನಿವೇಶ ಹೀಗಿರುವಾಗ ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸುವ ಅಗತ್ಯವಿಲ್ಲ ಎಂದು ನನಗೆ ತಿಳಿದಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಇಲ್ಲೊಂದು ಕ್ರಿಯಾಲೋಪ. ಪ್ರಸ್ತಾವವನ್ನು ಪ್ರಸ್ತಾವಿಸಿದಂತೆ ಸ್ವೀಕರಿಸಲಾಗಿದೆ. ಪ್ರಸ್ತಾವಕ್ಕೆ ಬೆಂಬಲವಾಗಿ ಸದಸ್ಯರು ಮಾಡಿದ ಭಾಷಣವನ್ನು ಸ್ವೀಕರಿಸಿಲ್ಲ. ಒಂದು ಪ್ರಸ್ತಾವವನ್ನು ಅಂಗೀಕರಿಸಿದಾಗ, ಅದಕ್ಕೆ ವಿರುದ್ಧವಾಗಿ ಮಾಡಿದ ಅಥವಾ ಅದಕ್ಕೆ ಅಸಂಗತವಾಗಿರುವ ಭಾಷಣವನ್ನು ಅಂಗೀಕರಿಸುವ ಅಗತ್ಯವಿಲ್ಲ ಅಥವಾ ತಿರಸ್ಕರಿಸಬಹುದಾಗಿದೆ ಎಂಬುದು ಅಂಗೀಕೃತ ಸಾಂವಿಧಾನಿಕ ಸೂಚನೆ. ಪ್ರಸ್ತಾವದಲ್ಲಿ "ಎರಡನೇ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು" ಎಂದು ಹೇಳಲಾಗಿದ್ದರೂ, ಭಾಷಣದಲ್ಲಿ ಅದಕ್ಕೆ ಅಸಂಗತವಲ್ಲದೆ, ಮೊದಲನೇ ವರದಿಯ ಆ ಭಾಗವನ್ನು ಪರಿಶೀಲಿಸಬಹುದು ಎಂದು ಸೂಚಿಸಲಾಗಿತ್ತು. ಮೊದಲನೇ ವರದಿಯ ಪ್ರಸ್ತಾವನೆ ಉತ್ತಮವಾಗಿದ್ದು, ಆ ಭಾಗ ವರದಿಯೊಂದಿಗೆ ಸುಸಂಗತವಾಗಿದೆ. ಸದಸ್ಯರ ಅಭಿಪ್ರಾಯದಂತೆ ಆ ಭಾಗವನ್ನು ಪರಿಶೀಲಿಸಬಹುದಾಗಿದೆ. ನನಗೆ ತೋರಿದ ಮಟ್ಟಿಗೆ ಮೊದಲನೇ ವರದಿ ಹಳೆಯ ಮಾದರಿಯಾಗಿದ್ದು ಅದನ್ನು ಕೈಬಿಡಲಾಗಿದೆ. ಎರಡನೇ ವರದಿಗೆ ಸಂಗತವಾಗಿರುವ ಭಾಗವನ್ನು ಮಾತ್ರ ಕಾಲೋಚಿತ ದಾಖಲೆ ಎಂದು ಆನುಷಂಗಿಕವಾಗಿ ಪರಿಶೀಲನೆಗೆ ತೆಗೆದುಕೊಳ್ಳಬಹುದು.

ಪ್ರಸ್ತಾವವನ್ನು ಮತಕ್ಕೆ ಹಾಕುವ ಮುನ್ನ, ತಿದ್ದುಪಡಿಯನ್ನು ಪ್ರಸ್ತಾವಿಸಬೇಕಿತ್ತು.

**ಮಾನ್ಯ ಸಭಾಧ್ಯಕ್ಷರು :** ಅದನ್ನು ಮಂಡಿಸಿಲ್ಲ.

**ಶ್ರೀ ನಜಿರುದ್ದೀನ್ ಅಹ್ಮದ್ :** ಹೌದು ತಿದ್ದುಪಡಿಯನ್ನು ಮಂಡಿಸದಿರುವುದರಿಂದ ಅದು ವ್ಯರ್ಥವಾಯಿತು. ತಿದ್ದುಪಡಿಯನ್ನು ಸಲ್ಲಿಸಿದ ಸದಸ್ಯರಿಗೆ ಮೊದಲನೇ ವರದಿ ಮುಂಚೂಣಿಗೆ ಬರುವುದರಿಂದ ಸಂತೋಷವಾಗುತ್ತದೆ ಆಗಲಿ. ಆದರೆ ಸಾಂವಿಧಾನಿಕ ಸ್ಥಿತಿ ಏನೆಂದರೆ ಮೊದಲನೇ ವರದಿ ವಿಧ್ಯುಕ್ತವಾಗಿ ಸದನದ ಮುಂದೆ ಸಲ್ಲಿಕೆಯಾಗಿಲ್ಲ. ನನ್ನ ಈ ನಿವೇದನೆಗೆ ಇನ್ನೊಂದು ಕಾರಣವಿದೆ ಪ್ರಾರಂಭದಿಂದಲೇ ಸದನಕ್ಕೆ ಜೂನ್ ೩ರ ಹೇಳಿಕೆಯ ಪರಿಣಾಮವಾಗಿ ಸದನಕ್ಕೆ ಬಂದಿರುವ ಸದಸ್ಯರಿಗೆ ಮೊದಲನೇ ವರದಿಯ ಪ್ರತಿಗಳು ಸರಬರಾಜು ಆಗಿಲ್ಲ. ಮೊದಲನೇ ವರದಿಯು ಇಂದು ಇರುವಂತೆ ಸದನದ ಮುಂದೆ ಮಂಡನೆಯಾಗಿಲ್ಲ.

ಈ ಸನ್ನಿವೇಶದಲ್ಲಿ ಸದಸ್ಯರು ಮೊದಲನೇ ವರದಿಯನ್ನು ಪರಿಗಣಿಸಬಹುದು ಎಂದು ಹೇಳಿದ ಕಾರಣಮಾತ್ರದಿಂದಲೇ ಅದು ಸದನದ ಮುಂದಿದೆಯೇ? ಎಂಬುದು ನನ್ನ ಪ್ರಶ್ನೆ. ಮೊದಲನೇ ವರದಿಯನ್ನು ಅನುಷಂಗಿಕವಾದ ರೀತಿಯ ವಾದದ ಮೂಲಕ ಪರಿಶೀಲನೆಗೆ ಎತ್ತಿಕೊಳ್ಳಬಹುದು. ಮತಕ್ಕೆ ಹಾಕಬಹುದಾದ ಪೂರ್ಣಪ್ರಮಾಣದ ವರದಿ ರೂಪದಲ್ಲಿ ಅದು ಸದನದ ಮುಂದೆ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರಿಗೆ ಬ್ಲೂಬುಕ್ ಪ್ರತಿ ಸಿಕ್ಕಿತೇ? ಅದರಲ್ಲಿ ಮೊದಲನೇ ವರದಿಯೂ ಇದೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಕಳೆದ ಅಧಿವೇಶನದ ಸಮಯದಲ್ಲಿ ಇರುತ್ತಿದ್ದ ಸಂವಿಧಾನ ಭವನದ ನನ್ನ ವಿಳಾಸಕ್ಕೆ ಆ ಪ್ಯಾಕೆಟ್ ರವಾನೆಯಾಗಿದೆ, ತರುವಾಯ ನನ್ನ ವಿಳಾಸವನ್ನು ವೆಸ್ಟರ್ನ್ ಕೋರ್ಟ್‌ಗೆ ಬದಲಾಯಿಸಿದ್ದೇನೆ. ಮತ್ತೆ ಕಾಗದ ಬರೆದು, ಸಂದೇಶವಾಹಕರನ್ನು ಸಂವಿಧಾನ ಭವನಕ್ಕೆ ಕಳಿಸಿದರೂ ಆ ಪ್ಯಾಕೆಟ್ ನನಗೆ ದೊರೆತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಆ ಪ್ಯಾಕೆಟ್ ಅವರಿಗೆ ಸಿಗದಿದ್ದುದು ದುರ್ದೈವ. ಅವರಿಗೆ ಮತ್ತೊಂದು ಪ್ರತಿ ನೀಡಲಾಗುತ್ತದೆ.

ನಾವು ವರದಿಯ ಪರಿಶೀಲನೆಗೆ ತೊಡಗಬೇಕು. ವರದಿಯಲ್ಲಿ ಕೆಲವು ಕಂಡಿಕೆಗಳಿವೆ ಮತ್ತು ಪಟ್ಟಿಗಳಿರುವ ಅನುಬಂಧಗಳಿವೆ. ಕೆಲವು ಕಂಡಿಕೆಯನ್ನು ಕೈಬಿಟ್ಟು ಬೇರೊಂದನ್ನು ಬದಲಾಯಿಸಬೇಕೆಂದು ಸೂಚಿಸಿರುವ ಕೆಲವು ಕಂಡಿಕೆಗಳಿಗೆ ಆಗಬೇಕಾದ ಸೇರ್ಪಡೆಗಳನ್ನು ಹಾಗೂ ಕೆಲವು ಹೊಸ ಕಂಡಿಕೆಗಳನ್ನು ಸೇರಿಸಬೇಕೆಂದು ಸೂಚಿಸಿರುವ ತಿದ್ದುಪಡಿಗಳ ಬಗ್ಗೆ ನೋಟೀಸು ಬಂದಿದೆ. ಈಗ ಇಡೀ ವರದಿ ಸದನದ ಮುಂದಿದ್ದು ಅದು ಸಮಿತಿಯ ವರದಿ ಎಂದು ನನ್ನ ಭಾವನೆ. ವರದಿಗೆ ಒಂದು ಕಂಡಿಕೆಯನ್ನು ಬದಲಿಸಲು ಸದನಕ್ಕೆ ಮುಕ್ತ ಅವಕಾಶವಿದೆಯೇ ಎಂಬುದು ನನಗೆ ಗೊತ್ತಿಲ್ಲ. ಒಂದು ನಿರ್ದಿಷ್ಟ ಕಂಡಿಕೆಯಲ್ಲಿರುವ ತತ್ತ್ವವನ್ನು ಬೇರೆ ತತ್ತ್ವಗಳಿಂದ ಬದಲಿಸಬೇಕೆಂದು ಅಥವಾ ವರದಿಯ ತಾತ್ಪರ್ಯವನ್ನು ನಿರ್ದಿಷ್ಟ ರೀತಿಯಲ್ಲಿ ಬದಲಿಸಬೇಕು ಎಂದು ಸದನ ಹೇಳಬಹುದು. ವರದಿಯ ಒಂದು ಕಂಡಿಕೆಯನ್ನು ಇನ್ನೊಂದರಿಂದ ಬದಲಿಸಬೇಕು ಎಂದು ಹೇಳುವುದು ಸರಿಯೇ ನನಗೆ ಗೊತ್ತಿಲ್ಲ ಏನೇ ಇದ್ದರೂ ಇದು ತಾಂತ್ರಿಕ ವಿಷಯ. ನಾವು ವರದಿಯ ವಿಷಯ ಗುಣಮಟ್ಟವನ್ನು ನೋಡಬೇಕಾಗಿದೆ. ವರದಿಯನ್ನು ಕಂಡಿಕೆ ಕಂಡಿಕೆಯಾಗಿ ನೋಡುತ್ತ ಸಾಗಬೇಕು. ಸದಸ್ಯರು ತಿದ್ದುಪಡಿಗಳಾಗಬೇಕೆಂದರೆ, ಅವರು ತಿದ್ದುಪಡಿ ರೂಪದಲ್ಲಿ ನೋಟೀಸು, ನೀಡಿದರೆ ಅವರ ಸಲಹೆಗಳನ್ನು ಮಂಡಿಸಲು ಅವರನ್ನು ಕರೆಯುತ್ತೇನೆ. ವರದಿಯನ್ನು ಕಂಡಿಕೆವಾರು ಕೈಗೆತ್ತಿಕೊಳ್ಳುತ್ತೇವೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್, ವರದಿಯನ್ನು ಕಂಡಿಕೆವಾರು ಕೈಗೆತ್ತಿಕೊಳ್ಳುತ್ತೀರಾ?

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನನಗೆ ನಿಮ್ಮ ಸಲಹೆ ಅರ್ಥವಾಗಲಿಲ್ಲ. ನಾನು ವರದಿಯನ್ನು ಕಂಡಿಕೆವಾರು ಓದುತ್ತಾ ಸಾಗಬೇಕೆ?

**ಮಾನ್ಯ ಸಭಾಧ್ಯಕ್ಷರು :** ಕಂಡಿಕೆಗಳನ್ನು ಓದಬೇಕಾದ ಅಗತ್ಯವಿಲ್ಲವೆನಿಸುತ್ತದೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಅದಕ್ಕಿಂತ ಸರಳವಾದ ಪರ್ಯಾಯ ಸೂಚನೆ ನೀಡಲೇ? ಸಾಮಾನ್ಯವಾಗಿ ವಿಧೇಯಕಗಳಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಒಂದು ಕ್ರಮವನ್ನು ಅನುಸರಿಸುತ್ತೇವೆ. ಒಂದು ಆಯ್ಕೆಸಮಿತಿಯ ವರದಿಯನ್ನು ಪರಿಶೀಲನೆಗಾಗಿ ಎತ್ತಿಕೊಳ್ಳಬೇಕಾದುದಕ್ಕೆ ಸಂಬಂಧಿಸಿದ ಪ್ರಸ್ತಾವ ಅಂಗೀಕೃತವಾದರೆ ಅಧ್ಯಕ್ಷರು ೧ನೇ ಖಂಡವು ವಿಧೇಯಕದ ಭಾಗವಾಗಿರುವ ಬಗ್ಗೆ ಪ್ರಸ್ತಾವಿಸಲೆಂದು ಹೇಳುತ್ತಾರೆ. ಆಗ ತಿದ್ದುಪಡಿಗಳ ಮಂಡನೆಯಾಗುತ್ತದೆ. ನಾನು ವಿಧಾನವನ್ನು ವಿವರಿಸಿದರೆ, ನೀವು ವರದಿಯಲ್ಲಿನ ನಿರ್ದಿಷ್ಟ ಕಂಡಿಕೆಯ ಸಂಖ್ಯೆಯನ್ನು ಹೇಳಿ, ಅದು ವರದಿಯ ಭಾಗವಾಗಿದೆ ಎಂದು ಹೇಳಬೇಕು. ತಿದ್ದುಪಡಿಯೇನಾದರೂ ಇದ್ದರೆ ಅದನ್ನು ಪರಿಶೀಲಿಸಿ ಕಂಡಿಕೆಯನ್ನು ಮತಕ್ಕೆ ಹಾಕಬೇಕು.

**ಮಾನ್ಯ ಸಭಾಧ್ಯಕ್ಷರು :** ನಾನು ಅದೇ ವಿಧಾನವನ್ನು ಅನುಸರಿಸುತ್ತೇನೆ. ವರದಿಯನ್ನು ಕಂಡಿಕೆ ಕೈಗೆತ್ತಿಕೊಳ್ಳೋಣ. ೧ನೇ ಕಂಡಿಕೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ ಸೂಚನೆ ನನಗೆ ಬಂದಿಲ್ಲ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನಾನು ಒಂದು ಅಂಶವನ್ನು ಸೂಚಿಸಲು ಬಯಸುತ್ತೇನೆ. ನಾವು ಪರಿಶೀಲನೆಗಾಗಿ ಮೊದಲು ಬಾಬುಗಳನ್ನು, ತದನಂತರ ವರದಿ ವಿಷಯವನ್ನು ತೆಗೆದುಕೊಳ್ಳೋಣ. ಏಕೆಂದರೆ ಅದು ಬಾಬುಗಳ ಸಾರಾಂಶವಷ್ಟೆ. ಬಾಬುಗಳನ್ನು ನಾವು ಇತ್ಯರ್ಥಗೊಳಿಸಿದರೆ ಅನಂತರ ಕಂಡಿಕೆಗಳನ್ನು ಕುರಿತು ಚರ್ಚಿಸಬಹುದು. ಮೊದಲು ಬಾಬುಗಳನ್ನು ಚರ್ಚೆಗೆ ಎತ್ತಿಕೊಂಡರೆ ಸಮಯದ ಉಳಿತಾಯವಾಗುತ್ತದೆ. ಕಂಡಿಕೆಗಳನ್ನು ಮೊದಲು ತೆಗೆದುಕೊಂಡರೆ ಅದರಿಂದ ಕಳೆದೆರಡು ದಿನಗಳಲ್ಲಿ ಹೇಳಿದುದರ ಪುನರಾವರ್ತನೆಯಾಗುತ್ತದೆ.

**ಶ್ರೀ ಎಂ.ಎಸ್. ಅನೆ :** ಮಾನ್ಯ ಸಭಾಧ್ಯಕ್ಷರೆ, ವರದಿಯು ಎರಡು ಭಾಗಗಳಲ್ಲಿದೆ. ೨ನೇ ಭಾಗದಲ್ಲಿರುವ ಮೂರು ಪಟ್ಟಿಗಳ ಸಿದ್ಧತೆಗೆ ಆಧಾರವಾದ ತತ್ತ್ವಗಳನ್ನು ೧ನೇ ಭಾಗ ತಿಳಿಸುತ್ತದೆ. ನಮ್ಮ ಸ್ನೇಹಿತರೊಬ್ಬರು ಉಲ್ಲೇಖಿಸಿದ ನಿದರ್ಶನದ ಮೇರೆಗೆ, ಸದನದಲ್ಲಿ ಒಂದು ವಿಧೇಯಕವು ಪರಿಶೀಲನೆಗೆ ಬಂದಾಗ ಅದರಲ್ಲಿ ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ ಇರುತ್ತದೆ. ಅನಂತರ ವಿಧೇಯಕವಿರುತ್ತದೆ.

ವಿಧೇಯಕವನ್ನು ಮೊದಲು ಪರಿಶೀಲಿಸಲಾಗುತ್ತದೆ. ವಿಧೇಯಕವನ್ನು ಅಂಗೀಕರಿಸಿದ ತರುವಾಯ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯನ್ನು ಕೊನೆಯಲ್ಲಿ ಅಂಗೀಕರಿಸುತ್ತೇವೆ. ಏಕೆಂದರೆ ಅದು ವಿಧೇಯಕವನ್ನು ಅಂಗೀಕರಿಸಲು ಇರುವ ಸಮಯೋಚಿತ ಕಾರಣಗಳನ್ನು ನೀಡುತ್ತದೆ. ಅದಕ್ಕಿಂತ ಹೆಚ್ಚಿಗೆ ಏನೂ ಇಲ್ಲ. ವರದಿಯನ್ನು ನಾವು ಒಂದಾದ ಮೇಲೊಂದು ಖಂಡದಂತೆ ಪರಿಶೀಲಿಸಬೇಕಾದ ಅಗತ್ಯವಿಲ್ಲ. ಅದು ಮೂರು ಪಟ್ಟಿಗಳನ್ನು ತಯಾರಿಸಿದುದರ ಹಿಂದಿನ ಸಾಮಾನ್ಯ ತತ್ತ್ವಗಳನ್ನು ತಿಳಿಸುತ್ತದೆ. ಆ ತತ್ತ್ವಗಳ ಹಿನ್ನೆಲೆಯಲ್ಲಿ ಈ ಪಟ್ಟಿಗಳನ್ನು ಪರೀಕ್ಷಿಸಬೇಕು. ಆದ್ದರಿಂದ ಮೊದಲು ಪಟ್ಟಿಗಳು ಪರಿಶೀಲಿಸುವುದು ಸರಿಯಾದ ವಿಧಾನ. ಪಟ್ಟಿಗಳನ್ನು ನೋಡುವಾಗ ಕಂಡಿಕೆಗಳಲ್ಲಿಯ ತತ್ತ್ವಗಳಲ್ಲಿ ಯಾವುದೇ ಬದಲಾವಣೆಯಾಗಿರುವುದು ಕಂಡುಬಂದರೆ ವರದಿಯ ಇನ್ನೊಂದು ಭಾಗದಲ್ಲಿ ತದನುಸಾರವಾಗಿ ಬದಲಾವಣೆ ಮಾಡಬಹುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಅನೆಯವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾವು ಕಟ್ಟುನಿಟ್ಟಾಗಿ ಅದನ್ನು ಪಾಲಿಸಿದರೆ..

**ಬಿ. ಪಾಕರ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) ; ಮಾನ್ಯರೆ, ಕ್ರಿಯಾಲೋಪ ಕುರಿತು. ಎರಡನೇ ವರದಿ ಮಾತ್ರವೇ ಅಥವಾ ಮೊದಲನೇ ವರದಿಯೊಂದಿಗೆ ಎರಡನೇ ವರದಿ ಸದನದ ಮುಂದೆ ಪರಿಶೀಲನೆಗೆ ಇದೆಯೇ ಎಂಬುದನ್ನು ನಾನು ತಿಳಿದುಕೊಳ್ಳಲು ಇಚ್ಛಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಎರಡನೇ ವರದಿ ಪರಿಶೀಲನೆಯಾಗಬೇಕಾಗಿದೆ. ಮೊದಲನೇ ವರದಿಯಲ್ಲಿರುವುದರ ಬಹುಭಾಗ ಎರಡನೇ ವರದಿಯಲ್ಲಿದೆ. ಏನಾದರೂ ವ್ಯತ್ಯಾಸವಿದ್ದರೆ, ಎರಡನೇ ವರದಿ ಮತ್ತೆ ಈಗ ಪರಿಶೀಲನೆಯಾಗಬೇಕಾಗಿದೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ವಿಧೇಯಕಗಳಿಗೆ ಸಂಬಂಧಿಸಿದಂತೆ ಇರುವ ವಿಧಾನವನ್ನೇ ನಾವು ಕಟ್ಟುನಿಟ್ಟಾಗಿ ಪಾಲಿಸಿದರೆ, ಅನೆಯವರು ಸರಿಯಾದ ಕ್ರಮವನ್ನೇ ಸೂಚಿಸಿದ್ದಾರೆ ಎಂದು ನಾನು ಒಪ್ಪುತ್ತೇನೆ. ನೀವು ವರದಿಯನ್ನು ಕಂಡಿಕೆವಾರು ಪರಿಶೀಲಿಸಬೇಕೆಂದು ತಿಳಿಸಿದುದರಿಂದ ನಾನು ನಿರ್ದಿಷ್ಟ ಸಲಹೆ ನೀಡಿದೆ. ವರದಿಯನ್ನು ಪರಿಶೀಲನೆಗಾಗಿ ಕೈಗೆತ್ತಿಕೊಳ್ಳಬೇಕೆಂದು ನಾವು ಪ್ರಸ್ತಾವವನ್ನು ಅಂಗೀಕರಿಸಿದ್ದೇವೆ. ಪರಿಶೀಲನೆಯಾಗಬೇಕಾಗಿರುವ ವರದಿಯನ್ನು ಕೈಗೆತ್ತಿಕೊಳ್ಳಲು ಸದನದ ಒಪ್ಪಿಗೆಯಿದೆ ಎಂಬುದಕ್ಕೆ ಅದಷ್ಟೇ ಸಾಕು. ನಾವು ಪಟ್ಟಿಯಲ್ಲಿರುವ ಬಾಬುಗಳನ್ನು ಮಾತ್ರ ಪರಿಶೀಲಿಸಬೇಕು. ಕೊನೆಯಲ್ಲಿ ಒಂದು ಸಾಮಾನ್ಯ ಚರ್ಚೆ ನಡೆಸಿ, ಇಡೀ ಚರ್ಚೆಯ ಕ್ರಮವನ್ನು ಪುನರವಲೋಕಿಸಿ ನೀವು ನಿಮಗೆ ಸರಿತೋರಿದ ನಿರ್ಧಾರ ಕೈಗೊಳ್ಳಬಹುದು. ವರದಿಯನ್ನು ಕಂಡಿಕೆವಾರು ಪರಿಶೀಲಿಸಬೇಕೆಂದು ನೀವು ನಿರ್ದೇಶಿಸಿದರೆ ಆಗ ನಾನು ಸೂಚಿಸಿದ ವಿಧಾನವನ್ನು ಅಳವಡಿಸಿಕೊಳ್ಳಬಹುದು. ವರದಿಯನ್ನು ಈಗಾಗಲೇ ಪರಿಶೀಲನೆಗಾಗಿ ಎತ್ತಿಕೊಂಡಿದ್ದು ಆ ವರದಿಯ ಕಂಡಿಕೆಗಳನ್ನು ವಿವರವಾಗಿ ನೋಡಬೇಕಾದ ಅಗತ್ಯವಿಲ್ಲ ಎಂದು ನಿಮಗೆ ತೋರಿದರೆ ನಾವು ಬಾಬುಗಳನ್ನೆತ್ತಿಕೊಂಡು ಅವುಗಳನ್ನು ಇತ್ಯರ್ಥಗೊಳಿಸಬಹುದು

**ಮಾನ್ಯ ಸಭಾಧ್ಯಕ್ಷರು :** ನಾವು ಪಟ್ಟಿಗಳನ್ನು ಕುರಿತು ಪರಿಶೀಲನೆಗೆ ತೊಡಗುವುದು ಉತ್ತಮವೆನಿಸುತ್ತದೆ ಪಟ್ಟಿಗಳಲ್ಲಿರುವ ಬಾಬುಗಳನ್ನು ಒಂದೊಂದಾಗಿ ನೋಡುತ್ತ ಹೋಗಿ, ಅದು ಮುಗಿದ ತರುವಾಯ ಅಗತ್ಯವೆನಿಸಿದರೆ ಕಂಡಿಕೆಗಳ ಪರಿಶೀಲನೆಯನ್ನು ಕೈಗೆತ್ತಿಕೊಳ್ಳಬಹುದು. ಬಹುಶಃ ಅದರ ಅಗತ್ಯ ಉಂಟಾಗಲಿಕ್ಕಿಲ್ಲ. ಇದನ್ನು ನಾವು ನಾಳೆ ಕೈಗೆತ್ತಿಕೊಳ್ಳೋಣ. ಸದನವನ್ನು ಈಗ ಮುಂದೂಡಲಾಗಿದೆ.

ಅನಂತರ ಆಗಸ್ಟ್ ೨೨, ೧೯೪೭ ಶುಕ್ರವಾರ ಬೆಳಗ್ಗೆ ೧೦ ಗಂಟೆಯವರೆಗೆ ಸಭೆಯನ್ನು ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*